"VARTHA JANAPADA" Monthly - March 2019
"ವಾರ್ತಾ ಜನಪದ" ಮಾಸಿಕ - ಮಾರ್ಚ್ 2019

Page No. -52
RNI No. KAR/KAN/2017/75029

Regd No,KA/BGGPO/2583/2018-20 Licensed to post without prepayment Licence No, PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



downloaded from: www.kpscvaani.com



downloaded from: www.kpscvaani.com



11 ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಫೆಬ್ರವರಿ 21 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಉದ್ಘಾಟಿಸಿದರು. ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾದ ನಾಗತಿಹಳ್ಳಿ ಚಂದ್ರಶೇಖರ್, ಹಿರಿಯ ನಟ ಅನಂತನಾಗ್, ಬಾಲಿವುಡ್ ನಿರ್ದೇಶಕರಾದ ರಾಹುಲ್ ರವೈಲ್, ನಟಿ ಹರ್ಷಿಕಾ ಪೂಣಚ್ಚ, ವಿಧಾನಪರಿಷತ್ ಸದಸ್ಯರಾದ ಟಿ.ಎ.ಶರವಣ ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದಾರೆ.




ಮಹಾತ್ಮಾ ಗಾಂಧೀಜಿ ಅವರು ಅಧ್ಯಕ್ಷತೆ ವಹಿಸಿದ್ದ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸಿದ್ಧಪಡಿಸಿದ್ದ ನಮ್ಮ ರಾಜ್ಯದ ಸ್ತಬ್ಧಚಿತ್ರ ಈ ವರ್ಷದ ಗಣರಾಜ್ಯೋತ್ಸವದಂದು ದೆಹಲಿಯ ರಾಜಪಥ್‌ನಲ್ಲಿ ಸಾಗಿದ ಕ್ಷಣ.

ವಾರ್ತಾ
# ಜನಪದ
ಸಂಪುಟ–02 • ಸಂಚಿಕೆ–6 • ಮಾರ್ಚ್ 2019







05 ರಾಜ್ಯ ಬಜೆಟ್ : ಕಿರುನೋಟ
• ವೆಂಕಟೇಶ್ ಪ್ರಸಾದ್ ಬಿ. ಎಸ್.

08 ಆಯವ್ಯಯ 2019–20ರ ಮುಖ್ಯಾಂಶಗಳು

24 ರಾಜ್ಯಪಾಲರ ಜಂಟಿ ಅಧಿವೇಶನದ ಭಾಷಣ

30 ರಾಮಕೃಷ್ಣ ಹೆಗ್ಡೆ ಹೇಳಿದ ಗಾಂಧಿ ಕಥನ
• ಡಾ. ಜಗದೀಶ್ ಕೊಪ್ಪ

32 ವಿಶ್ವ ಧೂಮಪಾನ ವಿರೋಧಿ ದಿನ
• ಡಾ. ಗುರುಲಿಂಗಪ್ಪ ಅಂಕದ

35 ಪ್ರಜ್ವಲಿಸುವ ಪರಮಾತ್ಮ ಡಾ. ಪುಟ್ಟರಾಜ ಗವಾಯಿಗಳು
• ಸುರೇಶ್ ಗೋವಿಂದರಾವ್ ದೇಸಾಯಿ

38 ಸರ್ವಂ ಶಿವಮಯಂ
• ಬಲ್ಲೇನಹಳ್ಳಿ ಮಂಜುನಾಥ್

41 ಮಹಿಳಾ ಅಧ್ಯಯನದ ಅಗತ್ಯತೆ
• ಶೋಭಾ ಹೆಚ್. ಜಿ

44 ಉದ್ಯಾನ ನಗರದಲ್ಲಿ ಮೇಳೈಸಿದ ಸಿರಿಧಾನ್ಯಗಳ ಸೊಬಗು
• ಸಿ. ಆರ್. ಮಂಜುನಾಥ್

47 ಮಂಗನ ಕಾಯಿಲೆ: ಆತಂಕ ಬೇಡ
• ಡಾ. ಕರವೀರಪ್ರಭು ಕ್ಯಾಲಕೊಂಡ

48 ಮೋಸಂಬಿಯಲ್ಲಿ ಬಂಗಾರದ ಬೆಳೆ ಬೆಳೆದ ರೈತ
• ರಾಜಾಸಾಬ್ ಎಂ. ತಾಳಕೇರಿ



ಪ್ರಧಾನ ಸಂಪಾದಕರು
ಎಂ. ರವಿಕುಮಾರ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಬಸವರಾಜ ಕಂಬಿ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮಾ


ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in
emagazine : karnatakajanapada.com | www.karnatakainformation.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 10



ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

downloaded from: www.kpscvaani.com




## ಓದುಗರಿಂದ...

"ಸರಳ ಬದುಕಿನಿಂದ ಹಿಮಾಲಯದೆತ್ತರಕ್ಕೆ ಸಿದ್ಧಗಂಗಾ ಶ್ರೀ ಸ್ವಾಮಿಗಳು" ಶೀರ್ಷಿಕೆಯಡಿ ಪ್ರಕಟವಾಗಿದ್ದ ಲೇಖನ ಹೃದಯಕ್ಕೆ ತಟ್ಟುವಂತಿತ್ತು. ಶ್ರೀಗಳವರ ಬದುಕಿನ ಜೀವನವನ್ನು ಸಂಕ್ಷಿಪ್ತವಾಗಿ ವಿವರಿಸಲು ಸಾಧ್ಯವಿಲ್ಲ. ಆದಾಗ್ಯೂ ಅವರ ಸರಳ ಬದುಕಿನ ಬಗ್ಗೆ ಹಾಗೂ ಅವರ ಸಮಾಜ ಸೇವೆಯ ಕುರಿತು ಲೇಖಕರು ಓದುಗರಿಗೆ ಸಂಪೂರ್ಣ ಮಾಹಿತಿಯನ್ನು ಒದಗಿಸಿದ್ದಾರೆ. ಅಲ್ಲದೆ ಶಿವಕುಮಾರ ಸ್ವಾಮಿಗಳವರ ಭಾವಚಿತ್ರವನ್ನು ಹೊಂದಿರುವ ಮುಖ ಪುಟ ವಿನ್ಯಾಸ ಕೂಡ ತುಂಬಾ ಸೊಗಸಾಗಿ ಮೂಡಿ ಬಂದಿದೆ. ಇದು ನಡೆದಾಡುವ ದೇವರಿಗೆ ಸಲ್ಲಿಸಿದ ಗೌರವವಾಗಿದೆ.

ಮಾಜಿ ರಾಷ್ಟ್ರಪತಿ ಡಾಕ್ಟರ್ ಎ.ಪಿ.ಜೆ ಅಬ್ದುಲ್ ಕಲಾಂ ಅವರು ಶ್ರೀಗಳ ಕುರಿತು ಕವನವನ್ನು ರಚಿಸಿದ್ದರೆಂಬುದು ನನಗೆ ತಿಳಿದಿರಲಿಲ್ಲ. ಲೇಖಕರು ಅದನ್ನು ಓದುಗರಿಗೆ ಒದಗಿಸಿದುದಕ್ಕೆ ಧನ್ಯವಾದಗಳು.

**–ಲಿಂಗರಾಜು,** ತುರುವೇಕೆರೆ

ಫೆಬ್ರವರಿಯ ವಾರ್ತಾ ಜನಪದದಲ್ಲಿ 2017–18 ನೇ ಸಾಲಿನ ದೇವರಾಜ ಅರಸು ಪ್ರಶಸ್ತಿಗೆ ಭಾಜನರಾದ ಶಿವಾಜಿ ಛತ್ರಪ್ಪ ಕಾಗಣೇಕರ ಅವರ ಕುರಿತ ಲೇಖನ ಪತ್ರಿಕೆಯ ಘನತೆಯನ್ನು ಹೆಚ್ಚಿಸಿದೆ ಎಂದರೆ ತಪ್ಪಾಗಲಾರದು.

ಲೇಖನದಲ್ಲಿ ಅವರ ಸಮಾಜ ಸೇವೆಯ ಕುಡಿತವನ್ನು ಚೆನ್ನಾಗಿ ಬಿಂಬಿಸಲಾಗಿದೆ. ಅವರ ಶೈಕ್ಷಣಿಕ ಜಾಗೃತಿ, ಪರಿಸರ ಸಾಧನೆಗಳಲ್ಲಿ ಕೆರೆ ಒಟ್ಟುಗಳ ನಿರ್ಮಾಣ, ಮರ ಬೆಳೆಸುವುದು, ಕೃಷಿ ಭೂಮಿಯ ಮಣ್ಣಿನ ಸತ್ವವನ್ನು ಹೆಚ್ಚಿಸುವ ಸಲುವಾಗಿ ಅವರು ಕೈಗೊಂಡ ಸಾವಯವ ಕೃಷಿ ಪ್ರಚಾರಾಂದೋಲನ ಮುಂತಾದ ಅವರ ಹಲವಾರು ಸಮಾಜ ಸೇವೆಯ ಕುರಿತು ಬೆಳಕು ಚೆಲ್ಲಿದ್ದಾರೆ. ಇಂತಹ ವ್ಯಕ್ತಿಗಳ ಕುರಿತು ಲೇಖನಗಳನ್ನು ಪ್ರಕಟಿಸುವುದರಿಂದ ಜನರಲ್ಲಿ ಸ್ವಲ್ಪವಾದರೂ ಸಮಾಜ ಸೇವೆಯ ಕಾಳಜಿಯನ್ನು ಬೆಳೆಸಿದಂತಾಗುತ್ತದೆ.

**–ಬಾಲಾಜಿ,** ಬಾಲ್ಕಿ

ನಡೆದಾಡುವ ದೇವರು, ಮಾನವತೆಯ ಮೇರು ಮತ್ತು ಆಧುನಿಕ ಬಸವಣ್ಣ ಎಂಬ ಪ್ರತೀತಿಗೆ ಪಾತ್ರರಾಗಿದ್ದ ತ್ರಿವಿಧ ದಾಸೋಹ ಮೂರ್ತಿ ಡಾ.ಶಿವಕುಮಾರ ಸ್ವಾಮಿಗಳವರ ದಿವ್ಯ ಜೀವನವನ್ನು ಅನಾವರಣಗೊಳಿಸಿರುವ ಫೆಬ್ರವರಿ ಸಂಚಿಕೆ ಸಂಗ್ರಹ ಯೋಗ್ಯವಾಗಿತ್ತು.

'ಸರಳ ಬದುಕಿನಿಂದ ಹಿಮಾಲಯದತ್ತೆರಕ್ಕೆ ಸಿದ್ಧಗಂಗಾ ಶ್ರೀ ಶಿವಕುಮಾರ ಸ್ವಾಮಿಗಳು'ಎಂಬ ಗುಡಿಹಳ್ಳಿ ನಾಗರಾಜು ಅವರ ಲೇಖನ ಪ್ರಭಾವಪೂರ್ಣವಾಗಿತ್ತು. ಶ್ರೀಗಳವರ ಮಹೋನ್ನತ ವ್ಯಕ್ತಿತ್ವವನ್ನು ಮನಮುಟ್ಟುವಂತೆ ತಿಳಿಸುವಂತಿತ್ತು. ಮುಖಪುಟ ಹಾಗೂ ಶ್ರೀಗಳವರ ಅಪರೂಪದ ಛಾಯಾಚಿತ್ರಗಳು ಓದುಗರ ಚಿತ್ತದಲ್ಲಿ ಚಿರಕಾಲ ಉಳಿಯುವಂತವು. ಪತ್ರಿಕೆಯ ಸಂಪಾದಕ ವೃಂದಕ್ಕೆ ನನ್ನ ಅನೇಕ ಧನ್ಯವಾದಗಳು.

**–ಬಸವರಾಜ ಹೂಗಾರ,** ಹಿರೇಸಿಂಗನಗುತ್ತಿ

ಕರ್ನಾಟಕದ ಗಾಂಧೀ ಎಂದೇ ಪ್ರಖ್ಯಾತರಾಗಿದ್ದ ಸಮಾಜ ಸುಧಾರಕ ಹರ್ಡೇಕರ ಮಂಜಪ್ಪ ಅವರ ಬಗ್ಗೆ ಇಂದಿನ ಪೀಳಿಗೆಯ ಬಹುಪಾಲು ಮಕ್ಕಳಿಗೆ ತಿಳಿದಿರುವುದಕ್ಕೆ ಸಾಧ್ಯವಿರುವುದಿಲ್ಲ. ಫೆಬ್ರವರಿ ಸಂಚಿಕೆಯಲ್ಲಿ ಪ್ರಕಟಿಸಲಾಗಿರುವ ಲೇಖನವು ಅವರ ಜೀವನ ಚರಿತ್ರೆಯನ್ನು ಒದಗಿಸಿತ್ತು. ಶಿಕ್ಷಕ ವೃತ್ತಿಯಲ್ಲಿ ತೊಡಗಿರುವ ನನಗೆ ಈ ಲೇಖನವನ್ನು ಓದಿದ ಕೂಡಲೇ ಹರ್ಡೇಕರ ಮಂಜಪ್ಪ ಅವರ ಸ್ಮಾರಕಕ್ಕೆ ಮಕ್ಕಳನ್ನು ಮುಂದಿನ ಶೈಕ್ಷಣಿಕ ಪ್ರವಾಸಕ್ಕೆ ಕರೆದುಕೊಂಡು ಹೋಗ ಬಹುದು ಎಂದು ಅನಿಸಿತು. ನಾಡಿನ ಏಳಿಗೆಗಾಗಿ, ಧರ್ಮದ ಏಳಿಗೆಗಾಗಿ ಮತ್ತು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಳ್ಳುವ ಮೂಲಕ ಸಮಾಜದ ಸರ್ವಾಂಗೀಣ ಏಳಿಗೆಗಾಗಿ ಸರ್ವರ ಅಭ್ಯುದಯಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಅವರ ಕುರಿತ ಲೇಖನ ನಮ್ಮ ಜ್ಞಾನವನ್ನು ಹೆಚ್ಚಿಸಿತು.

**–ಪ್ರಶಾಂತ ನಾಯ್ಕ,** ಕುಮಟ

ವಾರ್ತಾ ಜನಪದ–ಫೆಬ್ರವರಿ 2019 ಅತ್ಯಮೂಲ್ಯವಾದ ಸಂಚಿಕೆಯಾಗಿದೆ. ಮುಖ ಚಿತ್ರ ಶ್ರೀ ಸಿದ್ಧಗಂಗಾ ಶಿವಕುಮಾರ ಮಹಾಸ್ವಾಮಿಗಳ ಆನಂದದ ಮೊಗದಲ್ಲಿ 'ಸ್ಥಾವರಕ್ಕಳಿವುಂಟು... ಜಂಗಮಕ್ಕಳಿವಿಲ್ಲ' ಎಂಬ ವಚನದ ಆದರ್ಶ ಮೂರ್ತಿ, ಸಾಹಿತ್ಯ, ಶಾಸ್ತ್ರಿಕತೆಗಳ ಅರ್ಥವತ್ತಾದ ಆಚಾರ ವಿಚಾರಗಳಿಂದ ಶೋಭಿಸುವ ಸ್ವಾಮಿಗಳಾಗಿದ್ದರು. ಪತ್ರಿಕೆಯ ಒಳಗಡೆ ಎಷ್ಟೊಂದು ಚಿತ್ರಗಳು, ಲೇಖನಗಳು ವಾಚಕರನ್ನು ಪರಿವರ್ತನೆ ಮಾಡುವ ಸುದ್ದಿಗಳಿಂದ ಕೂಡಿರುವುದು ಜನಪದ ಎಂಬ ನಾಮ ಸಾರ್ಥಕವಾಗಿದೆ.

ಶಿವಕುಮಾರ ಮಹಾಸ್ವಾಮಿಗಳ ಲೇಖನ ಸಂಕ್ಷಿಪ್ತ ಜೀವನದ ಚರಿತ್ರೆಯಾದರೂ, ಸಾಮಾನ್ಯ ಓದುಗರಿಗೂ ಅರ್ಥವಾಗುವಂತೆ ಸರಳ ಲೇಖನವಾಗಿದೆ. '84 ನೇ ಕನ್ನಡ ಸಾಹಿತ್ಯ ಸಮ್ಮೇಳನ', 'ಕನ್ನಡ ಪ್ರೇಮ', 'ಶಿವಾಜಿ ಛತ್ರಪ್ಪ ಕಾಗಣೇಕರ', 'ಕರ್ನಾಟಕ ಗಾಂಧಿ', 'ಮಸ್ತಕಾಭಿಷೇಕ ಸಂಭ್ರಮ' ಹೀಗೆ ಇನ್ನಿತರ ಲೇಖನಗಳಿಂದ ಒಡಗೂಡಿದ ಸಂಚಿಕೆ ಪ್ರತಿಯೊಬ್ಬರು ಸಂಗ್ರಹಿಸತಕ್ಕಂತ್ತಾಗಿದೆ. ಲೇಖಕರಿಗೂ ಸಂಪಾದಕರಿಗೂ ಧನ್ಯವಾದಗಳು.

**–ನಾ.ಮ.ಬಸವರಾಜಯ್ಯ,** ನಾಗರಹಾಳು

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ಷಿಕ ಚಂದಾ ರೂ.25/–

'ವಾರ್ತಾ ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ **"The Director, Department of Information & Public Relations"** ಹೆಸರಿನಲ್ಲಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

downloaded from: www.kpscvaani.com



# ರಾಜ್ಯ ಬಜೆಟ್ ಕಿರುನೋಟ

ವೆಂಕಟೇಶ ಪ್ರಸಾದ್ ಬಿ.ಎಸ್.

ರಾಜ್ಯದ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಫೆಬ್ರವರಿ 8ರಂದು ರಾಜ್ಯ ವಿಧಾನಸಭೆಯಲ್ಲಿ 2019–20ನೇ ಸಾಲಿಗೆ ಒಟ್ಟಾರೆ 2,34,153 ಕೋಟಿ ರೂಪಾಯಿ ವೆಚ್ಚದ ಮುಂಗಡ ಪತ್ರವನ್ನು ಮಂಡಿಸುವ ಮೂಲಕ ನಾಡಿನ ಆರ್ಥಿಕ ಪರಿಸ್ಥಿತಿ ಹಾಗೂ ಸರ್ಕಾರದ ಆದ್ಯತಾ ಕಾರ್ಯಕ್ರಮಗಳ ನಡೆ ಏನು ಎಂಬ ಮುನ್ನೋಟದ ಬೆಳಕು ಚೆಲ್ಲಿದ್ದಾರೆ.

14ನೇ ಹಣಕಾಸು ಸಮಿತಿಯ ಶಿಫಾರಸ್ಸುಗಳು ಹಾಗೂ ವಿತ್ತೀಯ ಜವಾಬ್ದಾರಿ & ಬಜೆಟ್ ನಿರ್ವಹಣೆ ಕಾಯಿದೆ–2002ರ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಸರ್ಕಾರದ ಆದ್ಯತಾ ಯೋಜನೆಗಳನ್ನು ಮುನ್ನಡೆಸುವ ಜೊತೆಗೆ ಹಣಕಾಸು ಶಿಸ್ತು ಕಾಪಾಡಿಕೊಳ್ಳುವ ಸಮತೋಲನದ ಬಜೆಟ್ ಮಂಡಿಸಲು ಮುಖ್ಯಮಂತ್ರಿಯವರು ಪರಿಶ್ರಮಿಸಿರುವುದನ್ನು ಬಜೆಟ್‌ನಲ್ಲಿ ಸ್ಪಷ್ಟವಾಗಿ ಕಾಣಬಹುದು.

ಈಗಿರುವ ಬೆಲೆಗಳ ದರದ ಅನುಸಾರ, ಮುಂಬರುವ ಹಣಕಾಸು ವರ್ಷಕ್ಕೆ 15,88,303 ಕೋಟಿ ರೂಪಾಯಿಗಳ ಒಟ್ಟು ರಾಜ್ಯ ಉತ್ಪಾದನೆ (ಗ್ರಾಸ್ ಸ್ಟೇಟ್ ಡೊಮೆಸ್ಟಿಕ್ ಪ್ರಾಡಕ್ಟ್– ಜಿಎಸ್‌ಡಿಪಿ) ಅಂದಾಜಿಸಲಾಗಿದೆ. ಇದು ಕಳೆದ ಸಾಲಿನ ಪರಿಷ್ಕೃತ ಅಂದಾಜಿಗೆ ಹೋಲಿಸಿದರೆ ಶೇ 13ರಷ್ಟು ಹೆಚ್ಚಳವಾಗಿದೆ. ಬರುವ ಹಣಕಾಸು ವರ್ಷಕ್ಕೆ 2,34,153 ಕೋಟಿ ರೂಪಾಯಿ ಒಟ್ಟಾರೆ ವೆಚ್ಚವನ್ನು ಅಂದಾಜಿಸಲಾಗಿದ್ದು, ಇದು ಕಳೆದ ಸಾಲಿನ ಪರಿಷ್ಕೃತ ಅಂದಾಜಿಗೆ ಹೋಲಿಸಿದರೆ ಶೇ 7.7ರಷ್ಟು ಹೆಚ್ಚಳವಾಗಿದೆ.

ಒಟ್ಟಾರೆ ವೆಚ್ಚ ಮಾಡಲು ಅಂದಾಜಿಸಲಾಗಿರುವ ಮೊತ್ತದ ಪೈಕಿ 1,82,138 ಕೋಟಿ ರೂಪಾಯಿಗಳನ್ನು ಸಾಲಕ್ಕೆ ಹೊರತಾದ ರಾಜಸ್ವದಿಂದ ನಿರೀಕ್ಷಿಸಲಾಗಿದೆ. ಇದು, ಹಿಂದಿನ ಸಾಲಿಗೆ ಹೋಲಿಸಿದರೆ ಶೇ 9.7ರಷ್ಟು ಏರಿಕೆಯಾಗಿದೆ. ಇದರ ಜೊತೆಗೆ ಸಾಲದ ಮೂಲಕ 48,601 ಕೋಟಿ ರೂಪಾಯಿಗಳನ್ನು ಒಟ್ಟುಗೂಡಿಸಲಾಗುವುದು.

ಒಟ್ಟು ವೆಚ್ಚದ ಪೈಕಿ ರಾಜಸ್ವ ವೆಚ್ಚದ ಪ್ರಮಾಣವು 1,81,605 ಕೋಟಿ ರೂಪಾಯಿಗಳಾಗಿದ್ದು, ಹಿಂದಿನ ಸಾಲಿನ ಪರಿಷ್ಕೃತ



# ಆಯವ್ಯಯ 2019–20 ಮುಖ್ಯಾಂಶಗಳು

- ಆಯವ್ಯಯ ಗಾತ್ರ (ಸಂಚಿತ ನಿಧಿ)– 2,34,153 ಕೋಟಿ ರೂ.ಗಳು.
- ಒಟ್ಟು ಸ್ವೀಕೃತಿ– 2,30,738 ಕೋಟಿ ರೂ. – ರಾಜಸ್ವ ಸ್ವೀಕೃತಿ 1,81,863 ಕೋಟಿ ರೂ. ಮತ್ತು 48,601 ಕೋಟಿ ರೂ. ಸಾರ್ವಜನಿಕ ಋಣ ಮತ್ತು 48,876 ಕೋಟಿ ರೂ. ಬಂಡವಾಳ ಸ್ವೀಕೃತಿ.
- ಒಟ್ಟು ವೆಚ್ಚ– 2,34,153 ಕೋಟಿ ರೂ., ರಾಜಸ್ವ ವೆಚ್ಚ 1,81,605 ಕೋಟಿ ರೂ. ಮತ್ತು ಬಂಡವಾಳ ವೆಚ್ಚ 42,584 ಕೋಟಿ ರೂ. ಹಾಗೂ ಸಾಲ ಮರುಪಾವತಿ 9,964 ಕೋಟಿ ರೂ.

**"ಮಾನ್ಯ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಫೆಬ್ರವರಿ 8 ರಂದು ವಿಧಾನಸಭೆಯಲ್ಲಿ ಮಂಡಿಸಿದ 2019–20 ನೇ ಸಾಲಿನ ಆಯವ್ಯಯದ ಪಕ್ಷಿನೋಟ"**

## ಕೃಷಿ

- ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ ಹಾಗೂ ಮೀನುಗಾರಿಕೆ ಕ್ಷೇತ್ರದಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ಕೈಗೊಳ್ಳಲಾಗುವ ಕ್ರಮಗಳು:
- ಕೃಷಿ ಭಾಗ್ಯ ಯೋಜನೆಗೆ 250 ಕೋಟಿ ರೂ. ಅನುದಾನ.
- ಶೂನ್ಯ ಬಂಡವಾಳ ಕೃಷಿ ಯೋಜನೆಗೆ 40 ಕೋಟಿ ರೂ. ಅನುದಾನ.
- ಸಾವಯವ ಕೃಷಿ ಯೋಜನೆಗೆ 35 ಕೋಟಿ ರೂ.
- ಸಾವಯವ ಮತ್ತು ಶೂನ್ಯ ಬಂಡವಾಳ ಕೃಷಿ ಉತ್ಪನ್ನಗಳ ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರಾಂಡಿಂಗ್ ಘಟಕಗಳಿಗೆ ಪ್ರೋತ್ಸಾಹ; ಅರ್ಹ ಉದ್ದಿಮೆದಾರರು, ನವೋದ್ಯಮಿಗಳಿಗೆ ಶೇ. 50 ಪ್ರೋತ್ಸಾಹಧನ; 2 ಕೋಟಿ ರೂ. ಅನುದಾನ.
- ಇಸ್ರೇಲ್ ಮಾದರಿ ಕೃಷಿ ಯೋಜನೆಗೆ 145 ಕೋಟಿ ರೂ.
- ಸಿರಿಧಾನ್ಯ ಬೆಳೆಗಾರರಿಗೆ ಉತ್ತೇಜನ ನೀಡಲು "ರೈತಸಿರಿ" ಯೋಜನೆಯಡಿ ಪ್ರತಿ ಹೆಕ್ಟೇರ್‌ಗೆ 10 ಸಾವಿರ ರೂ. ನಗದು ಪ್ರೋತ್ಸಾಹ; 10 ಕೋಟಿ ರೂ. ಅನುದಾನ.
- ಕರಾವಳಿ ಮತ್ತು ಮಲೆನಾಡು ಭಾಗದ ರೈತರಿಗೆ ಭತ್ತ ಬೆಳೆಯಲು ಪ್ರೇರಣೆ– ಹೆಕ್ಟೇರ್‌ಗೆ 7500 ರೂ. ಪ್ರೋತ್ಸಾಹಧನ ನೀಡುವ "ಕರಾವಳಿ ಪ್ಯಾಕೇಜ್"ಗೆ 5 ಕೋಟಿ ರೂ. ಅನುದಾನ.
- "ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ"ಗೆ 2019–20 ನೇ ಸಾಲಿನಲ್ಲಿ 368 ಕೋಟಿ ರೂ. ಅನುದಾನ.
- ರಾಜ್ಯದ ಅತಿ ಹೆಚ್ಚು ಬರಪೀಡಿತ ಹಾಗೂ ಅಂತರ್ಜಲ ಮಟ್ಟ ಕುಸಿದಿರುವ 100 ತಾಲ್ಲೂಕುಗಳಲ್ಲಿ 2024ರ ವರೆಗೆ ಬರನಿರೋಧಕ ಜಲಾನಯನ ಚಟುವಟಿಕೆ ಕೈಗೊಳ್ಳಲು 100 ಕೋಟಿ ಅನುದಾನ.
- ಕರ್ನಾಟಕ ರಾಜ್ಯ ಬೀಜ ಪ್ರಮಾಣೀಕರಣ ಸಂಸ್ಥೆಯ ಉನ್ನತೀಕರಣ ಹಾಗೂ ಕರ್ನಾಟಕ ರಾಜ್ಯ ಬೀಜ ನಿಗಮದ ಅಭಿವೃದ್ಧಿ ಕಾರ್ಯಗಳಿಗೆ ತಲಾ 5 ಕೋಟಿ ರೂ. ನಿಗದಿ.
- ರಾಜ್ಯದಲ್ಲಿ ಪ್ರತ್ಯೇಕ ಬೆಳೆ ವಿಮಾ ಯೋಜನೆ ಜಾರಿಗೆ ತರುವ ಬಗ್ಗೆ ಪರಿಶೀಲನೆ.
- ಮಂಡ್ಯ ಜಿಲ್ಲೆಯ ವಿ.ಸಿ. ಫಾರಂ ಹಾಗೂ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಕೃಷಿ ಪ್ರಾತ್ಯಕ್ಷಿಕೆ ಸಂಸ್ಥೆ ಸ್ಥಾಪನೆಗೆ ಕ್ರಮ. 2019–20 ರಲ್ಲಿ 10 ಕೋಟಿ ರೂ. ಅನುದಾನ.

## ತೋಟಗಾರಿಕೆ

- ದಾಳಿಂಬೆ ಹಾಗೂ ದ್ರಾಕ್ಷಿ ಬೆಳೆಗಾರರ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ 150 ಕೋಟಿ ರೂ.ಗಳ ವಿಶೇಷ ಪ್ಯಾಕೇಜ್ ಘೋಷಣೆ.
- ರಾಮನಗರ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ ಅಂತರ್ ರಾಷ್ಟ್ರೀಯ ಗುಣಮಟ್ಟದ ಮಾವು ಉತ್ಪನ್ನಗಳ ಸಂಸ್ಕರಣಾ ಘಟಕ ಹಾಗೂ ಕೋಲಾರದಲ್ಲಿ ಟೊಮೆಟೋ ಉತ್ಪನ್ನಗಳ ಸಂಸ್ಕರಣಾ ಘಟಕ ಸ್ಥಾಪನೆಗೆ 20 ಕೋಟಿ ರೂ. ಅನುದಾನ.
- ಖಾಸಗಿ ಸಹಭಾಗಿತ್ವದಲ್ಲಿ ತೋಟಗಾರಿಕೆ ಉತ್ಪನ್ನಗಳ ಕೊಯ್ಲೋತ್ತರ ನಿರ್ವಹಣೆ ಹಾಗೂ ಮಾರುಕಟ್ಟೆ ಉತ್ತೇಜನ ಸಂಬಂಧಿತ ಚಟುವಟಿಕೆಗಳ ನಿರ್ವಹಣೆ ಯೋಜನೆಗೆ 2 ಕೋಟಿ ರೂ. ಅನುದಾನ.
- ಜೇನುಕೃಷಿ ಉತ್ತೇಜನಕ್ಕೆ 5 ಕೋಟಿ ರೂ. ಅನುದಾನ.
- ಮಿಡಿ ಸೌತೆ (Gherkin) ಬೆಳೆಗಾರರ ಅನುಕೂಲಕ್ಕಾಗಿ ಹಾಗೂ ರಫ್ತು ಮೌಲ್ಯ ಹೆಚ್ಚಿಸಲು 6 ಕೋಟಿ ರೂ. ಗಳ ವಿಶೇಷ ಪ್ಯಾಕೇಜ್.

## ರೇಷ್ಮೆ

**ರೇಷ್ಮೆ ವಲಯದ ಸುಧಾರಣೆಗೆ ರೂಪಿಸಲಾದ ಯೋಜನೆಗಳು:**

- ಪ್ರಗತಿಪರ ರೇಷ್ಮೆ ಕೃಷಿಕರ ಮೂಲಕ ರೇಷ್ಮೆ ವಿಸ್ತರಣಾ ಕಾರ್ಯಕ್ರಮಕ್ಕೆ 2 ಕೋಟಿ ರೂ. ಅನುದಾನ.
- ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಬಲಪಡಿಸಲು 10 ಕೋಟಿ ರೂ. ಅನುದಾನ.
- ಸಂತೇಮರಹಳ್ಳಿ ರೇಷ್ಮೆ ಕಾರ್ಖಾನೆ ಆಧುನೀಕರಣ ಹಾಗೂ ಯುವಕರಿಗೆ ತರಬೇತಿ ನೀಡಲು 2 ಕೋಟಿ ರೂ. ಅನುದಾನ.



- ಚಾಮರಾಜನಗರ ರೇಷ್ಮೆ ಕಾರ್ಖಾನೆಯ ಪುನಶ್ಚೇತನಕ್ಕೆ 5 ಕೋಟಿ ರೂ. ಅನುದಾನ.
- ರಾಮನಗರ ಮತ್ತು ಹಾವೇರಿ ರೇಷ್ಮೆ ಮಾರುಕಟ್ಟೆ ಆಧುನೀಕರಣ ಮತ್ತು ಬಲವರ್ಧನೆಗೆ 10 ಕೋಟಿ ರೂ. ಅನುದಾನ.
- ಚನ್ನಪಟ್ಟಣದ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೋರೇಷನ್‌ನ ಫಿಲೇಚರ್ ಕಾರ್ಖಾನೆ ಆವರಣದ ಎಂಪೋರಿಯಂನಲ್ಲಿ ಕರ್ನಾಟಕದ ರೇಷ್ಮೆ ವಲಯದ ಸಾಧನೆಗಳ ಪ್ರದರ್ಶನ ಹಾಗೂ ರೇಷ್ಮೆ ಉತ್ಪನ್ನಗಳ ಮಾರಾಟಕ್ಕೆ ಉತ್ತೇಜನ ನೀಡಲು 10 ಕೋಟಿ ರೂ. ಅನುದಾನ.

## ಪಶುಸಂಗೋಪನೆ

- ರಾಜ್ಯದ 15 ಜಿಲ್ಲೆಗಳಲ್ಲಿ ಸುಸಜ್ಜಿತ ಪಶುಚಿಕಿತ್ಸಾ ವಾಹನ ಒದಗಿಸಲು 2 ಕೋಟಿ ರೂ. ಅನುದಾನ.
- 5 ಕೋಟಿ ರೂ. ವೆಚ್ಚದಲ್ಲಿ 10,000 ಬಡ ನಿರುದ್ಯೋಗಿ ಯುವಕ–ಯುವತಿಯರಿಗೆ "ನಾಟಿ ಕೋಳಿ ಸಾಕಾಣಿಕೆ"ಗೆ ಪ್ರೋತ್ಸಾಹ.
- ದೇಶೀಯ ಕುರಿ ತಳಿಗಳಲ್ಲಿ ಅವಳಿ–ಜವಳಿ ಸಂತಾನೋತ್ಪತ್ತಿಯನ್ನು ಅಭಿವೃದ್ಧಿಗೊಳಿಸುವ ಯೋಜನೆಗೆ ಪ್ರಯೋಗಾಲಯ ಸ್ಥಾಪನೆಗೆ 2 ಕೋಟಿ ರೂ. ಅನುದಾನ.
- ರಾಜ್ಯದಲ್ಲಿ ಮಂಗನ ಕಾಯಿಲೆಯ ಲಸಿಕೆ ತಯಾರಿಕೆಗೆ ಬೆಂಬಲ ನೀಡಲು 5 ಕೋಟಿ ರೂ. ಅನುದಾನ.
- ರಾಜ್ಯದಲ್ಲಿ ಹಾಲು ಉತ್ಪಾದಕರ ಪ್ರೋತ್ಸಾಹ ಧನ 5 ರೂ. ನಿಂದ 6 ರೂ. ಗಳಿಗೆ ಹೆಚ್ಚಳ; 1459 ಕೋಟಿ ರೂ. ವೆಚ್ಚ, ಕ್ಷೀರಭಾಗ್ಯ ಯೋಜನೆಯಡಿ ಶಾಲಾ ಮಕ್ಕಳಿಗೆ 638 ಕೋಟಿ ರೂ. ಹಾಗೂ ಅಂಗನವಾಡಿ ಮಕ್ಕಳಿಗೆ 405 ಕೋಟಿ ರೂ. ವೆಚ್ಚ, ಹಾಲು ಉತ್ಪಾದಕರ ಕ್ಷೇಮಾಭಿವೃದ್ಧಿಗೆ ಒಟ್ಟು 2502 ಕೋಟಿ ರೂ. ವಿನಿಯೋಗ.



downloaded from: www.kpscvaani.com

- ಶಾಲಾ ಆಡಳಿತದಲ್ಲಿ ಪಾರದರ್ಶಕತೆ ತರಲು ಆರ್‌ಟಿಇ ಕಾಯ್ದೆಯಡಿ ರಚಿಸಲಾಗಿರುವ ಮೇಲುಸ್ತುವಾರಿ ಸಮಿತಿಗಳಿಗೆ ಹೆಚ್ಚಿನ ಹೊಣೆಗಾರಿಕೆ; ಪ್ರತಿ ಶಿಕ್ಷಣ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಾಲೆಗಳ ರಿಪೋರ್ಟ್ ಕಾರ್ಡ್ ತಯಾರಿ; ಶಿಕ್ಷಕ–ಪಾಲಕರ ಸಭೆಯಲ್ಲಿ ಚರ್ಚಿಸಿ, ಶಾಲೆಗಳ ಗುಣಮಟ್ಟ ಹೆಚ್ಚಳಕ್ಕೆ ಕ್ರಮ.
- ಕಲಿಕೆಯ ಫಲಿತಾಂಶ ಸುಧಾರಣೆಗೆ ಆದ್ಯತೆ; ಟೀಚರ್–ಮೆಂಟರ್ ಕಾರ್ಯಕ್ರಮದ ಮುಖಾಂತರ ಶಿಕ್ಷಕರಿಗೆ ಅರಿವು ಮೂಡಿಸಲು ಕ್ರಮ; ಮಕ್ಕಳು ಶಾಲೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಲು ಮಕ್ಕಳ ಮೇಲೆ ವೈಯಕ್ತಿಕ ಗಮನ ಹರಿಸಲು ಕ್ರಮ.
- ಮುಂದಿನ 4 ವರ್ಷದಲ್ಲಿ ಹೋಬಳಿ ಕೇಂದ್ರಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳಿಂದ 12ನೇ ತರಗತಿ ವರೆಗೆ ಒಂದೇ ಸೂರಿನಡಿ ಶಿಕ್ಷಣ ಒದಗಿಸುವ ಒಂದು ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳ ಸ್ಥಾಪನೆ. ಈ ಶಾಲೆಗಳಿಗೆ ಕೇಂದ್ರೀಯ ವಿದ್ಯಾಲಯ ಮಾದರಿಯ ಪ್ರತ್ಯೇಕ ಸಂಘಟನೆ ಹಾಗೂ ಮಾರ್ಗಸೂಚಿ ನಿಗದಿ.
- ಸರ್ಕಾರಿ ಶಾಲಾ ಶಿಕ್ಷಕರಿಗೆ ಭಾಷಾ ವಿಷಯಗಳಲ್ಲಿ ನಿರಂತರ ತರಬೇತಿ ನೀಡಲು 2 ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳಲ್ಲಿ ಆಲೂರು ವೆಂಕಟರಾವ್ ಅವರ ಹೆಸರಿನಲ್ಲಿ ಸುಸಜ್ಜಿತ ಭಾಷಾ ಕೌಶಲ್ಯ ತರಬೇತಿ ಕೇಂದ್ರ ಪ್ರಾರಂಭ.
- ಸರ್ಕಾರಿ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಅರಳಿಸಲು ಹಾಗೂ ಆರೋಗ್ಯಕರ ಸ್ಪರ್ಧೆಗೆ ವಿಶೇಷ ತರಬೇತಿ ಮತ್ತು ಮಾರ್ಗದರ್ಶನ ನೀಡಿ ಸಜ್ಜುಗೊಳಿಸಲು "ಸ್ಪರ್ಧಾ ಕಲಿ" ಯೋಜನೆ ಪ್ರಾರಂಭ. ರಾಷ್ಟ್ರೀಯ ಪ್ರತಿಭಾನ್ವೇಷಣಾ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಪಡೆಯುವ ಪ್ರತಿ ಶೈಕ್ಷಣಿಕ ಜಿಲ್ಲೆಯ 20 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ಕ್ರಮ; 1.5 ಕೋಟಿ ರೂ. ಅನುದಾನ.
- ಎಸ್.ಎಸ್.ಎಲ್.ಸಿ ಮೌಲ್ಯ ಮಾಪನ ಕೇಂದ್ರಗಳ ಡಿಜಿಟಲೀಕರಣಕ್ಕೆ 1 ಕೋಟಿ ರೂ. ಅನುದಾನ.
- ಪದವಿ ಪೂರ್ವ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಆಸಕ್ತಿಯ ವಿಷಯದಲ್ಲಿ ವೃತ್ತಿ ಶಿಕ್ಷಣದ ತರಬೇತಿ ನೀಡಲು 2 ಕೋಟಿ ರೂ. ಅನುದಾನ.



## ಉನ್ನತ ಶಿಕ್ಷಣ

- ಬೆಂಗಳೂರಿನ ಕೇಂದ್ರ ವಿಶ್ವವಿದ್ಯಾನಿಲಯದಲ್ಲಿ "ಹೊಸ ಪೀಳಿಗೆ ಉನ್ನತ ಶಿಕ್ಷಣ" (Next Generation Learning Initiative) ಕಾರ್ಯಕ್ರಮದ ಮೂಲಕ ಉನ್ನತ ಶಿಕ್ಷಣದಲ್ಲಿ ಹೊಸ ಕಲಿಕೆಯ ವಿಧಾನಗಳ ಅಳವಡಿಕೆ. ಇದಕ್ಕಾಗಿ ಮುಖ್ಯಮಂತ್ರಿಗಳ ನೇತೃತ್ವದ ಸಮಿತಿ ರಚನೆ.
- ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಿ.ಇ.ಟಿ. ಪರೀಕ್ಷೆಯನ್ನು ಆನ್‌ಲೈನ್ ಮೂಲಕ ನಡೆಸಲು ಕ್ರಮ.
- ವಿದ್ಯಾರ್ಥಿಗಳಿಗೆ ಆಧಾರ್ ಸಂಖ್ಯೆ ಆಧಾರಿತ ಡಿಜಿಟಲ್ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಆನ್‌ಲೈನ್ ಮೂಲಕ ವಿತರಣೆ ಹಾಗೂ ದೃಢೀಕರಣ ವಿಧಾನ ಜಾರಿಗೆ 2 ಕೋಟಿ ರೂ. ಅನುದಾನ.
- ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮರುವಿಂಗಡಣೆ ಮಾಡಿ, ಹಾಸನದಲ್ಲಿ ಒಂದು ಹೊಸ ತಾಂತ್ರಿಕ ವಿಶ್ವವಿದ್ಯಾಲಯ ಸ್ಥಾಪನೆಗೆ ಕ್ರಮ.
- ಎಲ್ಲ ಪ್ರಥಮ ದರ್ಜೆ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಉದ್ಯೋಗ ಆಧಾರಿತ ಶಿಕ್ಷಣ ನೀಡಲು ತರಬೇತಿ ಕೇಂದ್ರ ಪ್ರಾರಂಭ.
- ಉನ್ನತ ಶಿಕ್ಷಣ ಗುಣಮಟ್ಟ ವೃದ್ಧಿಗೆ ಎಲ್ಲ ಕಾಲೇಜುಗಳ ಅಧ್ಯಾಪಕರಿಗೆ ಮುಂದಿನ 3 ವರ್ಷಗಳಲ್ಲಿ ಅಗತ್ಯ ಬೋಧನ ವಿಷಯಗಳಲ್ಲಿ ತರಬೇತಿ.
- ಏಳನೇ ಕೇಂದ್ರ ವೇತನ ಆಯೋಗದ ಶಿಫಾರಸ್ಸುಗಳ ಪ್ರಕಾರ ಸರ್ಕಾರಿ / ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ತಜ್ಞಮಾನ ವೃಂದಗಳ ವೇತನ ಮತ್ತು ಭತ್ಯೆಗಳ ಪರಿಷ್ಕರಣೆ.
- ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಪ್ರಯೋಗಾಲಯ/ ಕಾರ್ಯಾಗಾರ ಸೌಲಭ್ಯ ಕಲ್ಪಿಸಲು 10 ಕೋಟಿ ರೂ. ಅನುದಾನ.

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ

- ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಗೆ 2019–20ನೇ ಸಾಲಿಗೆ ರಾಜ್ಯ ಸರ್ಕಾರದಿಂದ 950 ಕೋಟಿ ರೂ. ಅನುದಾನ; ಕೇಂದ್ರದಿಂದ ದೊರೆಯುವ ಅನುದಾನ ಕೇವಲ 409 ಕೋಟಿ ರೂ.
- ತುಮಕೂರು ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ 60 ಕೋಟಿ ರೂ.ಗಳ ವೆಚ್ಚದಲ್ಲಿ ಕ್ಯಾನ್ಸರ್ ಆಸ್ಪತ್ರೆ ಪ್ರಾರಂಭ.
- ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯನ್ನು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸಲು 50 ಕೋಟಿ ರೂ. ಅನುದಾನ.
- ರಕ್ತ ಸಂಗ್ರಹಣೆ, ಶೇಖರಣೆ, ಮತ್ತು ವಿತರಣೆಗಾಗಿ ನಾಲ್ಕು ವಿಭಾಗೀಯ ಮಾದರಿ ರಕ್ತನಿಧಿ ಕೇಂದ್ರಗಳ ಸ್ಥಾಪನೆಗೆ 10 ಕೋಟಿ ರೂ. ಅನುದಾನ.
- ದೊಡ್ಡಬಳ್ಳಾಪುರ ತಾಲ್ಲೂಕು ಆಸ್ಪತ್ರೆಯನ್ನು 250 ಹಾಸಿಗೆಗಳ ಬೆಂಗಳೂರು ಗ್ರಾ. ಜಿಲ್ಲಾ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು 10 ಕೋಟಿ ರೂ. ಅನುದಾನ.





- ಕರ್ನಾಟಕ ಸ್ಟೇಟ್ ಡ್ರಗ್ಸ್ ಲಾಜಿಸ್ಟಿಕ್ ವೇರ್‌ಹೌಸಿಂಗ್ ಸೊಸೈಟಿಯನ್ನು ನಿಗಮವನ್ನಾಗಿ ಮಾರ್ಪಾಡು.
- ತಜ್ಞರ ಕೊರತೆಯನ್ನು ನೀಗಿಸುವ ದೃಷ್ಟಿಯಿಂದ ಆಯ್ದ 11 ಜಿಲ್ಲಾ ಆಸ್ಪತ್ರೆ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ಡಿ.ಎನ್.ಬಿ. ಕೇಂದ್ರಗಳ ಪ್ರಾರಂಭ.
- ವಿಜಯಪುರ ಜಿಲ್ಲೆಯಲ್ಲಿ 40 ಕೋಟಿ ರೂ. ವೆಚ್ಚದಲ್ಲಿ 100 ಹಾಸಿಗೆಗಳ ಸೌಲಭ್ಯವುಳ್ಳ ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ ಪ್ರಾರಂಭ.
- ಬೆಂಗಳೂರಿನ ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ ಕ್ರೀಡಾ ರೋಗಿಗಳ ವಿಭಾಗ ಪ್ರಾರಂಭ ಹಾಗೂ ರೋಬೋಟಿಕ್ ಶಸ್ತ್ರ ಚಿಕಿತ್ಸೆ ಸೌಲಭ್ಯ ಒದಗಿಸಲು 10 ಕೋಟಿ ರೂ. ಅನುದಾನ.
- ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸೂಕ್ತ ಆರೈಕೆಗಾಗಿ 49 ತಾಲ್ಲೂಕು ಆಸ್ಪತ್ರೆಗಳಲ್ಲಿ ಪೌಷ್ಟಿಕ ಪುನಶ್ಚೇತನ ಕೇಂದ್ರಗಳ ಸ್ಥಾಪನೆಗೆ 1 ಕೋಟಿ ರೂ. ಅನುದಾನ.
- ಶಿವಮೊಗ್ಗ ಜಿಲ್ಲಾ ಆಸ್ಪತ್ರೆಯಲ್ಲಿ 5 ಕೋಟಿ ರೂ.ಗಳ ವೆಚ್ಚದಲ್ಲಿ ಮಂಗನ ಕಾಯಿಲೆಯ ಸಂಶೋಧನಾ ಮತ್ತು ಚಿಕಿತ್ಸಾ ಘಟಕ ಪ್ರಾರಂಭ.
- ಖಾಸಗಿ ಹಾಗೂ ಸರ್ಕಾರಿ ಸ್ವಾಮ್ಯದ ಕ್ಷ–ಕಿರಣ ಕೇಂದ್ರಗಳ ಸುರಕ್ಷತೆಯನ್ನು ಅಟಾಮಿಕ್ ಎನರ್ಜಿ ರೀಸರ್ಚ್ ಬೋರ್ಡ್ ಮಾರ್ಗದರ್ಶನದಂತೆ ಮಾಡುವ ನಿಟ್ಟಿನಲ್ಲಿ ಕ್ಷ–ಕಿರಣ ಸುರಕ್ಷತಾ ನಿರ್ದೇಶನಾಲಯ ಸ್ಥಾಪನೆ.
- ಆಶಾ ಕಾರ್ಯಕರ್ತೆಯರ ಗೌರವಧನವನ್ನು 500 ರೂ.ಗಳಷ್ಟು ಹೆಚ್ಚಳ; 1ನೇ ನವೆಂಬರ್ 2019 ರಿಂದ ಜಾರಿಗೆ ಬರಲಿದ್ದು, 25 ಕೋಟಿ ರೂ.ಗಳ ಅನುದಾನ ನಿಗದಿ.
- ಮಂಗಳೂರು, ತುಮಕೂರು, ಬಿಜಾಪುರ, ಚಿತ್ರದುರ್ಗ, ದಾವಣಗೆರೆ, ಬಾಗಲಕೋಟೆ, ಚಿಕ್ಕಮಗಳೂರು, ಹಾವೇರಿ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಒಟ್ಟು 10 ಜಿಲ್ಲೆಗಳಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ಡಿಜಿಟಲ್ ಸ್ತನರೇಖನ ವ್ಯವಸ್ಥೆ (Mammogram) ಹಾಗೂ Papsmear scanning ವ್ಯವಸ್ಥೆ ಪ್ರಾರಂಭಿಸಲು ಕ್ರಮ.

## ವೈದ್ಯಕೀಯ ಶಿಕ್ಷಣ

- ಕಾರವಾರ ವೈದ್ಯಕೀಯ ವಿಜ್ಞಾನ ಸಂಸ್ಥೆ ಆವರಣದಲ್ಲಿ 450 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಹಾಗೂ ಹಾಸ್ಟೆಲ್ ಕಟ್ಟಡಕ್ಕೆ 150 ಕೋಟಿ ರೂ. ಅನುದಾನ.
- ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ 450 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ನಿರ್ಮಾಣಕ್ಕೆ 100 ಕೋಟಿ ರೂ. ಅನುದಾನ
- ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ 100 ಕೋಟಿ ರೂ. ವೆಚ್ಚದಲ್ಲಿ 450 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಪ್ರಾರಂಭ.
- ಕಿದ್ವಾಯಿ ಕ್ಯಾನ್ಸರ್ ಸಂಸ್ಥೆ ಆವರಣದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ 100 ಕೋಟಿ ರೂ. ವೆಚ್ಚದಲ್ಲಿ 450 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ನಿರ್ಮಾಣ.
- ಹುಬ್ಬಳ್ಳಿಯಲ್ಲಿ ಕರ್ನಾಟಕ ಕ್ಯಾನ್ಸರ್ ಥೆರಪಿ ಮತ್ತು ಸಂಶೋಧನಾ ಸಂಸ್ಥೆಗೆ ತೃತೀಯ ಹಂತದ ಕ್ಯಾನ್ಸರ್ ಕೇಂದ್ರಕ್ಕೆ ಮೇಲ್ದರ್ಜೆಗೇರಿಸಲು ರಾಜ್ಯ ಸರ್ಕಾರದಿಂದ 4.5 ಕೋಟಿ ರೂ.ಗಳ ಸಹಾಯಧನ.
- ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅನುದಾನದಲ್ಲಿ 150 ಕೋಟಿ ರೂ.ಗಳ ವೆಚ್ಚದಲ್ಲಿ ಕಲಬುರಗಿಯ ಶ್ರೀ ಜಯದೇವ ಹೃದ್ರೋಗ ವಿಜ್ಞಾನಗಳ ಸಂಸ್ಥೆಯ 300 ಹಾಸಿಗೆ ಸಾಮರ್ಥ್ಯದ ಪ್ರತ್ಯೇಕ ಆಸ್ಪತ್ರೆ ಸ್ಥಾಪನೆ.
- ಎಸ್.ಡಿ.ಎಸ್.ಟಿ.ಬಿ. ಸಂಸ್ಥೆಯ ಆವರಣದಲ್ಲಿ 40 ಕೋಟಿ ರೂ.ಗಳ ವೆಚ್ಚದಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ ಹಾಗೂ ಕೆಮಿಕಲ್, ಬಯಲಾಜಿಕಲ್, ರೇಡಿಯೇಷನ್, ನ್ಯೂಕ್ಲಿಯರ್ ನ್ಯಾಚುರಲ್ ಡಿಸಾಸ್ಟರ್ ಕೇಂದ್ರ ನಿರ್ಮಾಣ.

## ಮಹಿಳಾ ಮತ್ತು ಮಕ್ಕಳ ಕಲ್ಯಾಣ

- ಮುಖ್ಯಮಂತ್ರಿಗಳ ಮಾತೃಶ್ರೀ ಯೋಜನೆಯ ಸಹಾಯಧನ ಮಾಸಿಕ 1 ಸಾವಿರ ರೂ. ಗಳಿಂದ 2 ಸಾವಿರ ರೂ. ಗಳಿಗೆ ಹೆಚ್ಚಳ; 2019ರ ನವೆಂಬರ್ 1ರಿಂದ ಜಾರಿ. ಈ ಯೋಜನೆಗೆ 470 ಕೋಟಿ ರೂ. ಅನುದಾನ.



downloaded from: www.kpscvaani.com

- ಅಂಗನವಾಡಿ ಕಾರ್ಯಕರ್ತೆಯರಿಗೆ 500 ರೂ. ಹಾಗೂ ಸಹಾಯಕಿಯರಿಗೆ 250 ರೂ. ಗೌರವಧನ 2019ರ ನವೆಂಬರ್ 1 ರಿಂದ ಹೆಚ್ಚಳ. 60 ಕೋಟಿ ರೂ. ಹೆಚ್ಚುವರಿ ಅನುದಾನ.
- ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಎಲ್ಲ ಮಟ್ಟದ ಕರ್ಮಚಾರಿಗಳಿಗೆ ತರಬೇತಿ ನೀಡಲು ಬಳ್ಳಾರಿಯಲ್ಲಿ ರಾಜ್ಯಮಟ್ಟದ ತರಬೇತಿ ಕೇಂದ್ರ ಹಾಗೂ ಚಿತ್ರದುರ್ಗ, ಮೈಸೂರು, ಬೆಳಗಾವಿ ಮತ್ತು ಕಲಬುರಗಿಯಲ್ಲಿ ವಿಭಾಗ ಮಟ್ಟದ ತರಬೇತಿ ಕೇಂದ್ರ ಪ್ರಾರಂಭಿಸಲು 5 ಕೋಟಿ ರೂ. ಅನುದಾನ.
- ನಗರ ಪ್ರದೇಶಗಳಲ್ಲಿ 100 ಹೊಸ ಅಂಗನವಾಡಿ ಕೇಂದ್ರ ಪ್ರಾರಂಭಿಸಲು ಕ್ರಮ.
- 1000 ಅಂಗನವಾಡಿ ಕಟ್ಟಡಗಳ ದುರಸ್ತಿ ಕಾಮಗಾರಿಗೆ 10 ಕೋಟಿ ರೂ. ಅನುದಾನ.
- ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೊಸ ಬಾಲಕಿಯರ ಬಾಲಮಂದಿರ ಪ್ರಾರಂಭಿಸಲು ಕ್ರಮ.
- ರಾಜ್ಯದ 10 ಜಿಲ್ಲೆಗಳ ಮಕ್ಕಳ ವಿಶೇಷ ನ್ಯಾಯಾಲಯಗಳನ್ನು ಮಕ್ಕಳ-ಸ್ನೇಹಿ ನ್ಯಾಯಾಲಯಗಳನ್ನಾಗಿ ಪರಿವರ್ತಿಸಲು ಒಟ್ಟು 3 ಕೋಟಿ ರೂ. ಅನುದಾನ.
- ವಿಕಲಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಪ್ರಾಸ್ಥೆಟಿಕ್ಸ್ ಮತ್ತು ಆರ್ಥೋಟಿಕ್ಸ್ ಸರ್ಟಿಫಿಕೇಷನ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಕ್ರಮ.
- ಇಲಾಖೆಯು ಖಾಸಗಿ ಸಹಭಾಗಿತ್ವದೊಂದಿಗೆ ನಡೆಸುತ್ತಿರುವ ತರಬೇತಿ ಕೇಂದ್ರಗಳಲ್ಲಿ ಶ್ರವಣ ದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಹಾಗೂ ಬುದ್ಧಿಮಾಂದ್ಯ ಮಕ್ಕಳ ಶಿಕ್ಷಕರ ತರಬೇತಿ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು.
- ರಾಜ್ಯದಲ್ಲಿ ಬೆನ್ನುಹುರಿ ಅಪಘಾತಕ್ಕೆ ಒಳಗಾದವರ, ಹೆಮಿಪ್ಲೆಜಿಯಾ, ಮಲ್ಟಿಪಲ್ ಸ್ಲೆರೋಸಿಸ್, ಹಾಗೂ ಅಮಿಯೋಟ್ರೋಫಿಕ್ ಲ್ಯಾಟರಲ್ ಸ್ಲೆರೋಸಿಸ್ ಖಾಯಿಲೆಗಳಿಂದ ಬಳಲುತ್ತಿರುವ ರೋಗಿಗಳ ಪುನರ್ವಸತಿ ಕೇಂದ್ರ ಪ್ರಾರಂಭಿಸಲು 2 ಕೋಟಿ ರೂ. ಅನುದಾನ.
- 2,000 ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನ (ರೆಟ್ರೋಫಿಟೆಡ್) ಉಚಿತವಾಗಿ ನೀಡಲು 15 ಕೋಟಿ ರೂ. ಅನುದಾನ.
- 1,000 ದಮನಿತ ಮಹಿಳೆಯರಿಗೆ ಉದ್ಯಮಶೀಲತೆ ಮತ್ತು ಕೌಶಲ್ಯ ತರಬೇತಿ ಹಾಗೂ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ನೆರವು ನೀಡಲು 11.5 ಕೋಟಿ ರೂ. ಅನುದಾನ; ರಾಜ್ಯ ಸರ್ಕಾರದ ವಸತಿ ಯೋಜನೆಗಳಲ್ಲಿ ದಮನಿತ ಮಹಿಳೆಯರಿಗೆ ಮೀಸಲಾತಿ ನೀಡಲು ಕ್ರಮ.

- ಪರಿಶಿಷ್ಟ ಜಾತಿ ವಿಶೇಷ ಘಟಕ ಉಪಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ 30,445 ಕೋಟಿ ರೂ. ಅನುದಾನ.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಅಲ್ಪಸಂಖ್ಯಾತರು ಮತ್ತು ಸಾಮಾನ್ಯ ವರ್ಗದ



ವಿದ್ಯಾರ್ಥಿಗಳಿಗೆ 30 ಸಂಯುಕ್ತ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು 100 ಕೋಟಿ ರೂ. ಅನುದಾನ.

- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 100 ವಸತಿ ಶಾಲೆಗಳನ್ನು ಪಿ.ಯು.ಸಿ (ವಿಜ್ಞಾನ ಮತ್ತು ವಾಣಿಜ್ಯ) ಕೋರ್ಸ್‌ಗಳೊಂದಿಗೆ ಮೇಲ್ದರ್ಜೆಗೇರಿಸಲು ಕ್ರಮ.
- ಬೆಂಗಳೂರು ನಗರದಲ್ಲಿ ಸಂವಿಧಾನ ಮ್ಯೂಸಿಯಂ ಸ್ಥಾಪಿಸಲು 20 ಕೋಟಿ ರೂ. ಅನುದಾನ.

## ಹಿಂದುಳಿದ ವರ್ಗಗಳ ಕಲ್ಯಾಣ

- ವಿಭಾಗ ಮಟ್ಟದಲ್ಲಿ 4 ಹಿಂದುಳಿದ ವರ್ಗಗಳ ಮೊರಾರ್ಜಿ ಪದವಿಪೂರ್ವ ಕಾಲೇಜುಗಳಲ್ಲಿ ಐ.ಐ.ಟಿ / ನೀಟ್ ಪರೀಕ್ಷಾ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು 4 ಕೋಟಿ ರೂ. ಅನುದಾನ.
- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 100 ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡಗಳ ನಿರ್ಮಾಣಕ್ಕೆ 40 ಕೋಟಿ ರೂ. ಅನುದಾನ.
- ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ 25 ಕೋಟಿ ರೂ. ಅನುದಾನ.
- ಅಲೆಮಾರಿ ಜನಾಂಗದವರು ತಮ್ಮ ಸಮುದಾಯದವರಿಗಾಗಿ ಸಮುದಾಯ ಭವನ ನಿರ್ಮಾಣ ಹಾಗೂ ಅಲೆಮಾರಿ ಜನಾಂಗದ ಸಂಪ್ರದಾಯ, ಸಂಸ್ಕೃತಿ,



ಆಚಾರ-ವಿಚಾರಗಳ ಬಗ್ಗೆ ಅಧ್ಯಯನ ಕೈಗೊಳ್ಳಲು 11 ಕೋಟಿ ರೂ. ಅನುದಾನ.

- ವಿಶ್ವಕರ್ಮ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ 25 ಕೋಟಿ ರೂ. ಅನುದಾನ.
- ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಶಿವಾರಪಟ್ಟಣದಲ್ಲಿ 10 ಕೋಟಿ ರೂ. ಅನುದಾನದಲ್ಲಿ ಅಮರಶಿಲ್ಪಿ ಜಕಣಾಚಾರಿ ಶಿಲ್ಪಕಲಾ ಕೇಂದ್ರ ಪ್ರಾರಂಭ.
- ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮಕ್ಕೆ 25 ಕೋಟಿ ರೂ. ಅನುದಾನ.
- ಸವಿತಾ ಸಮಾಜ ಅಭಿವೃದ್ಧಿ ನಿಗಮ ಸ್ಥಾಪನೆಗೆ ಕ್ರಮ.
- ಹಿಂದುಳಿದ ವರ್ಗಕ್ಕೆ ಸೇರಿದ ಸೂಕ್ಷ್ಮ ಸಮುದಾಯಗಳ ಸಮಗ್ರ ಅಭಿವೃದ್ಧಿಗಾಗಿ 134 ಕೋಟಿ ರೂ. ಅನುದಾನ. ಈ ಸಮುದಾಯಗಳಿಗೆ ಮೀಸಲಿಟ್ಟಿರುವ ಅನುದಾನವು ನೇರವಾಗಿ ಅವರಿಗೆ ಸೇರುವಂತೆ ಮಾಡಲು ಒಬ್ಬ ನೋಡಲ್ ಅಧಿಕಾರಿ ಹಾಗೂ 4 ಅಧಿಕಾರೇತರ ಸದಸ್ಯರನ್ನೊಳಗೊಂಡ ಕಾರ್ಯಾಚರಣೆ ಪಡೆ ಸ್ಥಾಪನೆ.

## ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಹಜ್

- ಮುಸ್ಲಿಂ ಸಮುದಾಯದಲ್ಲಿ ಆಧುನಿಕ ಶಿಕ್ಷಣ ಹಾಗೂ ವೈಜ್ಞಾನಿಕ ಮನೋಭಾವ ಉತ್ತೇಜನಕ್ಕೆ ಮೌಲಾನಾ ಆಜಾದ್ ಟ್ರಸ್ಟ್ ಸ್ಥಾಪನೆಗೆ ಒಂದಾವರ್ತಿಯಾಗಿ 25 ಕೋಟಿ ರೂ. ಅನುದಾನ.
- ದಾವಣಗೆರೆ, ತುಮಕೂರು, ಗದಗ, ಧಾರವಾಡ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಹೊಸದಾಗಿ 5 ಮೊರಾರ್ಜಿ ದೇಸಾಯಿ ಮುಸ್ಲಿಂ ಹೆಣ್ಣು ಮಕ್ಕಳ ವಸತಿ ಶಾಲೆ ಪ್ರಾರಂಭಿಸಲು 20 ಕೋಟಿ ರೂ. ಅನುದಾನ.
- ರಾಜ್ಯದಲ್ಲಿನ ಮುಸ್ಲಿಂ ಖಬ್ರಸ್ತಾನಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ 10 ಕೋಟಿ ರೂ. ಅನುದಾನ.
- ರಾಜ್ಯದಲ್ಲಿ ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲು 400 ಕೋಟಿ ರೂ. ಅನುದಾನ.
- ರಾಜ್ಯದ 25 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ತಲಾ 25 ದಾಖಲಾತಿ ಸಂಖ್ಯೆ ಹೆಚ್ಚಳ. ಮತ್ತು 20 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ದಾಖಲಾತಿ ಸಂಖ್ಯಾಬಲ 60ಕ್ಕೆ ಹೆಚ್ಚಳ.
- ಶ್ರೀ ಗುರುನಾನಕ್ ದೇವ್‌ರವರ 550ನೇ ಜನ್ಮ ದಿನೋತ್ಸವ ಅಂಗವಾಗಿ ಬೀದರ್‌ನ ಐತಿಹಾಸಿಕ ಗುರುನಾನಕ್ ಜೀರಾ ಗುರುದ್ವಾರಕ್ಕೆ 10 ಕೋಟಿ ರೂ. ಹಾಗೂ ಬೆಂಗಳೂರಿನ ಹಲಸೂರು ಗುರುದ್ವಾರಕ್ಕೆ 25 ಕೋಟಿ ರೂ. ಅನುದಾನ.
- ಕ್ರೈಸ್ತ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ಕ್ರೈಸ್ತ ಅಭಿವೃದ್ಧಿ ನಿಗಮ ಸ್ಥಾಪನೆ; 200 ಕೋಟಿ ರೂ. ಅನುದಾನ.



## ವಸತಿ

- 2019-20ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಗಳಡಿ ಒಟ್ಟು 4 ಲಕ್ಷ ಮನೆಗಳನ್ನು ಪೂರ್ಣಗೊಳಿಸುವ ಗುರಿ.
- ಬಿಬಿಎಂಪಿಯ ಎಸ್‌ಸಿಎಸ್‌ಪಿ/ ಟಿಎಸ್‌ಪಿ ಯೋಜನೆಯಡಿ 300 ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರು ಹೆಚ್ಚಾಗಿ ವಾಸಿಸುತ್ತಿರುವ ಅಧಿಸೂಚಿತ ಕೊಳಗೇರಿ ಪ್ರದೇಶಗಳ ಅಭಿವೃದ್ಧಿ.
- ಬೆಂಗಳೂರಿನ ಆಟೋ ಚಾಲಕರು ಹಾಗೂ ಟ್ಯಾಕ್ಸಿ ಚಾಲಕರಿಗೆ 50 ಕೋಟಿ ರೂ. ವೆಚ್ಚದಲ್ಲಿ "ಸಾರಥಿಯ ಸೂರು" ಬಾಡಿಗೆ ಆಧಾರದ ವಸತಿ ಯೋಜನೆ.
- ಸಿದ್ಧ ಉಡುಪು ಕಾರ್ಮಿಕರಿಗೆ ಬಾಡಿಗೆ ಆಧಾರದ ವಸತಿ ಯೋಜನೆಗೆ 50 ಕೋಟಿ ರೂ. ಅನುದಾನ.

## ಕಾರ್ಮಿಕ

- ಕಟ್ಟಡ ನಿರ್ಮಾಣ ಕಾರ್ಮಿಕರು ಮತ್ತು ಅವರ ಅವಲಂಬಿತರಿಗಾಗಿ "ಶ್ರಮಿಕ ಸೌರಭ ಯೋಜನೆ"; ಈ ಪ್ಯಾಕೇಜ್‌ನಡಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಾರ್ಮಿಕ ಗೃಹ ಭಾಗ್ಯ ಯೋಜನೆಯಡಿ 5 ಲಕ್ಷ ರೂ.ಗಳ ವರೆಗೆ ಮುಂಗಡ ಹಣ, ಸ್ವಂತ ಮನೆಯಿರುವ ಕಾರ್ಮಿಕರ ಸ್ವಂತ ಮನೆಯ ಶೌಚಾಲಯ ನಿರ್ಮಾಣಕ್ಕೆ 20 ಸಾವಿರ ರೂ. ಮರುಪಾವತಿ; ಕಾರ್ಮಿಕ ಆರೋಗ್ಯ ಭಾಗ್ಯ ಸೌಲಭ್ಯದಡಿ 1.5 ಲಕ್ಷ ರೂ. ವರೆಗೆ ಚಿಕಿತ್ಸಾ ವೆಚ್ಚ ಮರುಪಾವತಿ, ಕೆಲಸ ಮಾಡುವ ಸ್ಥಳದಲ್ಲಿ ಅಪಘಾತದಿಂದ ಮರಣ ಹೊಂದಿದಲ್ಲಿ 2 ಲಕ್ಷ ರೂ. ಪರಿಹಾರ, ಮಕ್ಕಳ ಕಿಂಡರ್ ಗಾರ್ಟನ್/ ಶಾಲಾಪೂರ್ವ/ ನರ್ಸರಿ ಶಿಕ್ಷಣಕ್ಕೆ 2000 ಮತ್ತು 2500 ರೂ. ಸೌಲಭ್ಯ, ಕಾರ್ಮಿಕರ ಮಕ್ಕಳಲ್ಲಿ ಸ್ವಯಂ ಉದ್ಯೋಗ ಉತ್ತೇಜಿಸಲು 50,000 ರೂ. ಬಡ್ಡಿರಹಿತ ಸಹಾಯಧನ, ಸಾಮರ್ಥ್ಯ ವೃದ್ಧಿ ತರಬೇತಿ ಸೌಲಭ್ಯ.
- ಸಿದ್ಧ ಉಡುಪು ಕಾರ್ಖಾನೆಗಳ ಮಹಿಳಾ ಕಾರ್ಮಿಕರಿಗೆ ಶಿಶುಪಾಲನಾ ಕೇಂದ್ರ, ಅಪಘಾತ ಪರಿಹಾರ ಸಹಾಯಧನ ಮತ್ತಿತರ ಅನುಕೂಲ ಕಲ್ಪಿಸಲು 10 ಕೋಟಿ ರೂ.ಗಳ ವಿಶೇಷ ಪ್ಯಾಕೇಜ್.





downloaded from: www.kpscvaani.com



- ಸಿದ್ಧ ಉಡುಪು ಕಾರ್ಖಾನೆಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ 25,000 ಮಹಿಳಾ ಕಾರ್ಮಿಕರ ಹಾಗೂ ತರಬೇತಿದಾರರ ಕೌಶಲ್ಯ ಉನ್ನತೀಕರಣಕ್ಕಾಗಿ 37.5 ಕೋಟಿ ರೂ. ಅನುದಾನ.
- ಆಟೋ ಮತ್ತು ಟ್ಯಾಕ್ಸಿ ಚಾಲಕರಿಗಾಗಿ ಗುಂಪು ವಿಮೆ ಸೌಲಭ್ಯ, ಪೆಟ್ರೋಲ್ ಆಟೋಗಳನ್ನು ಎಲೆಕ್ಟ್ರಿಕ್ ಆಟೋಗಳಾಗಿ ಪರಿವರ್ತಿಸಲು ಸಹಾಯಧನ; ಸಾರಿಗೆ ಇಲಾಖೆ ಮೂಲಕ ಈ ಯೋಜನೆ ಜಾರಿ. 30 ಕೋಟಿ ರೂ. ಅನುದಾನ.
- ವಿವಿಧ ವಲಯಗಳ ಚಾಲಕರ ಸೇವೆ ಗುರುತಿಸಲು ಎಲ್ಲಾ ಜಿಲ್ಲೆಗಳಲ್ಲಿ ಚಾಲಕರ ದಿನಾಚರಣೆ; ಪ್ರಾಮಾಣಿಕ, ಅಪಘಾತ ರಹಿತ ವಾಹನ ಚಾಲನೆ ಮಾಡಿದ ಪ್ರತಿ ಜಿಲ್ಲೆಯ ತಲಾ 10 ಚಾಲಕರಿಗೆ ತಲಾ 25 ಸಾವಿರ ರೂ. ಪುರಸ್ಕಾರ.

## ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ

- "ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ" ಯೋಜನೆಯಡಿ 70,000 ಹೊಸ ಅಭ್ಯರ್ಥಿಗಳಿಗೆ 90 ಕೋಟಿ ರೂ.ಗಳ ವೆಚ್ಚದಲ್ಲಿ ಕೌಶಲ್ಯ ತರಬೇತಿ.
- ಸಾಂಪ್ರದಾಯಿಕ ಕರಕುಶಲತೆಯನ್ನು ಉತ್ತೇಜಿಸಲು, ಮಾಸ್ಟರ್ ಟ್ರೈನರ್‌ಗಳು ಹಾಗೂ ಆಧುನಿಕ ವಿನ್ಯಾಸಕಾರರ ಸಹಯೋಗದೊಂದಿಗೆ "ಕೌಶಲ್ಯ ಪರಂಪರೆ ಶಾಲೆ" ಎಂಬ ಹೊಸ ಕಾರ್ಯಕ್ರಮಕ್ಕೆ ಚಾಲನೆ.

## ಕನ್ನಡ ಮತ್ತು ಸಂಸ್ಕೃತಿ

- ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಗಳ ಹುಟ್ಟೂರು ರಾಮನಗರ ಜಿಲ್ಲೆಯ ವೀರಾಪುರ ಗ್ರಾಮದಲ್ಲಿ ವಿಶ್ವದರ್ಜೆಯ ಸಾಂಸ್ಕೃತಿಕ ಹಾಗೂ ಪಾರಂಪರಿಕ ಕೇಂದ್ರ ಸ್ಥಾಪನೆಗೆ 25 ಕೋಟಿ ರೂ.ಗಳ ವಿಶೇಷ ಅನುದಾನ.
- ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಜನ್ಮಸ್ಥಳ ರಾಮನಗರ ಜಿಲ್ಲೆಯ ಬಿಡದಿ ತಾಲ್ಲೂಕಿನ ಬಾಣಂದೂರು ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಅಭಿವೃದ್ಧಿಪಡಿಸಲು ಹಾಗೂ ಶ್ರೀಗಳ ಜೀವನ ಸಾಧನೆಗಳು ಮತ್ತು ವಿಚಾರಗಳನ್ನು ಸಾರಲು ಸಾಂಸ್ಕೃತಿಕ ಹಾಗೂ ಪಾರಂಪರಿಕ ಕೇಂದ್ರವನ್ನು ಸ್ಥಾಪಿಸಲು 25 ಕೋಟಿ ರೂ. ಅನುದಾನ.
- ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರಕ್ಕೆ 5 ಕೋಟಿ ರೂ.ಗಳ ಅನುದಾನ.
- ಕೊಡವ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ 10 ಕೋಟಿ ರೂ. ಅನುದಾನ.
- ರಾಜ್ಯದ ಜಾನಪದ ಕಲಾವಿದರು ಹಾಗೂ ಕಲೆಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ "ಜಾನಪದ ಜಾತ್ರೆ" ಕಾರ್ಯಕ್ರಮಕ್ಕೆ ಮರುಚಾಲನೆ ನೀಡಲಾಗುವುದು. ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಾನಪದ ಜಾತ್ರೆ ಏರ್ಪಡಿಸಲು 2 ಕೋಟಿ ರೂ. ಅನುದಾನ ಒದಗಿಸಲಾಗುವುದು.
- ಮೈಸೂರಿನಲ್ಲಿ ಸುತ್ತೂರಿನ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಠದ ವತಿಯಿಂದ ಕರಕುಶಲಕರ್ಮಿಗಳಿಗೆ ಅರ್ಬನ್ ಹಾಟ್ ವ್ಯವಸ್ಥಿತ ಸೌಲಭ್ಯ ಕಲ್ಪಿಸಲು ಹಾಗೂ ಉನ್ನತೀಕರಿಸಲು 5 ಕೋಟಿ ರೂ. ಅನುದಾನ.
- ಶ್ರೀ ಕೆಂಗಲ್ ಹನುಮಂತಯ್ಯ ಹಾಸ್ಟಲ್ ಟ್ರಸ್ಟ್, ಬೆಂಗಳೂರು ಇವರ ಸಾಂಸ್ಕೃತಿಕ ಮತ್ತು ಗ್ರಂಥಾಲಯ ಕೇಂದ್ರ ಅಭಿವೃದ್ಧಿಗೆ 5 ಕೋಟಿ ರೂ. ಅನುದಾನ.
- ಕರಗ ಉತ್ಸವ ಆಚರಿಸುವ 139 ಸಂಘ ಸಂಸ್ಥೆಗಳಿಗೆ, ತುಮಕೂರು ಜಿಲ್ಲೆ ಮಾಯಸಂದ್ರದ ಆದಶಕ್ತಿ ಮಾತೆಯರ ವೃದ್ಧಾಶ್ರಮ ಅಭಿವೃದ್ಧಿಗೆ, ಕರ್ನಾಟಕ ರಾಜ್ಯ ಕುಂಚಿಟಿಗರ-ಒಕ್ಕಲಿಗರ ಸಂಘದ ಅಭಿವೃದ್ಧಿಗೆ ತಲಾ 2 ಕೋಟಿ ರೂ. ಅನುದಾನ.
- ಮಂಡ್ಯದ ಕರ್ನಾಟಕ ಸಂಘದ ಅಭಿವೃದ್ಧಿಗೆ, ಕರ್ನಾಟಕ ಜಾನಪದ ಪರಿಷತ್ತಿನ ಚಟುವಟಿಕೆಗಳಿಗೆ, ದಾವಣಗೆರೆ ಜಿಲ್ಲೆ ಮಲೇಬೆನ್ನೂರಿನ ವೀರಭದ್ರೇಶ್ವರ ಚಾರಿಟೇಬಲ್ ಟ್ರಸ್ಟಿಗೆ ತಲಾ 1 ಕೋಟಿ ರೂ. ಅನುದಾನ.
- ತಿಪಟೂರಿನಲ್ಲಿ ಹಾಸ್ಯ ಚಕ್ರವರ್ತಿ ದಿ. ನರಸಿಂಹರಾಜು ಅವರ ಹೆಸರಿನಲ್ಲಿ ಸ್ಮಾರಕ ಸಭಾ ಮಂದಿರ ನಿರ್ಮಾಣಕ್ಕೆ 2 ಕೋಟಿ ರೂ. ಅನುದಾನ.

## ಯುವ ಸಬಲೀಕರಣ ಮತ್ತು ಕ್ರೀಡೆ

- ಯಾದಗಿರಿ, ಬಳ್ಳಾರಿ, ಚಿಕ್ಕಬಳ್ಳಾಪುರ, ಬೀದರ ಹಾಗೂ ಮಡಿಕೇರಿಯಲ್ಲಿ ಹೊಸ ಕ್ರೀಡಾ ವಸತಿನಿಲಯಗಳ ನಿರ್ಮಾಣಕ್ಕಾಗಿ ಪ್ರಸಕ್ತ ಸಾಲಿನಲ್ಲಿ 12.5 ಕೋಟಿ ರೂ.ಗಳನ್ನು ಒದಗಿಸಲಾಗಿದೆ.
- ರಾಯಚೂರು, ಹಾವೇರಿ, ಮಂಗಳೂರು, ಚಿಕ್ಕಮಗಳೂರು, ಮಂಡ್ಯ, ಚಾಮರಾಜನಗರ, ಕಲಬುರಗಿ, ಕೋಲಾರ, ಹಾಸನ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಬಾಲಕಿಯರಿಗೆ ಪ್ರತ್ಯೇಕ ಕ್ರೀಡಾ ವಸತಿ ನಿಲಯ ಸ್ಥಾಪಿಸಲು 15 ಕೋಟಿ ರೂ. ಅನುದಾನ.
- 4 ಕೋಟಿ ರೂ.ಗಳ ವೆಚ್ಚದಲ್ಲಿ ಮಂಡ್ಯ, ಬೀದರ್, ತುಮಕೂರು ಮತ್ತು ಹಾಸನ ಜಿಲ್ಲಾ ಕ್ರೀಡಾಂಗಣಗಳ ಸೌಲಭ್ಯ ಮೇಲ್ದರ್ಜೆಗೆ.
- ಕ್ರೀಡಾ ವಸತಿ ನಿಲಯಗಳಲ್ಲಿರುವ ಕ್ರೀಡಾಪಟುಗಳ ಊಟೋಪಚಾರದ ಬಾಬ್ತು ದಿನಭತ್ಯೆ ಭಾರತೀಯ ಕ್ರೀಡಾ ಪ್ರಾಧಿಕಾರದ ಮಟ್ಟಕ್ಕೆ ಹೆಚ್ಚಳ; 6 ಕೋಟಿ ರೂ. ಅನುದಾನ.
- ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಮೂಲಕ ರಾಜ್ಯದ 10 ಸ್ಥಳಗಳಲ್ಲಿ ಸಾಹಸ ಕ್ರೀಡೋತ್ಸವ ಆಯೋಜಿಸಲು 2 ಕೋಟಿ ರೂ. ಅನುದಾನ.
- 13 ರಿಂದ 15 ವಯೋಮಾನದವರಿಗಾಗಿ 'ಮಿನಿ ಒಲಿಂಪಿಕ್ ಗೇಮ್ಸ್-2019' ಆಯೋಜನೆ.
- ವಿರಾಜಪೇಟೆಯ ಬಾಳುಗೋಡದಲ್ಲಿರುವ ಕೊಡವ ಸಮಾಜದ ಹಾಕಿ ಕ್ರೀಡಾಂಗಣ ಅಭಿವೃದ್ಧಿಗೆ 5 ಕೋಟಿ ರೂ. ಅನುದಾನ.

## ಆಹಾರ ಮತ್ತು ನಾಗರಿಕ ಸರಬರಾಜು

- ಅನ್ನಭಾಗ್ಯ ಯೋಜನೆಯಡಿ 4.07 ಕೋಟಿಗಿಂತ ಹೆಚ್ಚು ಫಲಾನುಭವಿಗಳಿಗೆ ಆಹಾರ ಧಾನ್ಯಗಳನ್ನು ವಿತರಿಸಲು 3,700 ಕೋಟಿ ರೂ. ಅನುದಾನ.
- ರಾಜ್ಯದಲ್ಲಿ ಪಡಿತರ ವಿತರಣೆ ಪದ್ಧತಿಯಲ್ಲಿನ ಆಹಾರ ಪದಾರ್ಥಗಳ ಸಮರ್ಪಕ ವಿತರಣೆ ಗಮನಿಸಲು ಹಾಗೂ ಸೋರಿಕೆಯನ್ನು ತಡೆಗಟ್ಟಲು ಪ್ರತಿ ವಿಭಾಗಕ್ಕೆ ಒಂದು "ವಿಚಕ್ಷಣಾ ದಳ " ರಚನೆ.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

- 2019 ನ್ನು ಜಲವರ್ಷ ಎಂದು ಘೋಷಣೆ. 'ಜಲಾಮೃತ' ಯೋಜನೆಯಡಿ 20,000 ಜಲಸಂರಕ್ಷಣಾ ಕಾಮಗಾರಿಗಳನ್ನು ನೈಸರ್ಗಿಕ ಸಂಪನ್ಮೂಲ ನಿರ್ವಹಣಾ ಕಾಮಗಾರಿಗಳಡಿ ನಿರ್ವಹಿಸಲು 500 ಕೋಟಿ ರೂ. ಅನುದಾನ.
- ರಾಯಚೂರು, ವಿಜಯಪುರ, ಮಂಡ್ಯ ಮತ್ತು ಕೋಲಾರ ಜಿಲ್ಲೆಗಳಲ್ಲಿ 4000 ಕೋಟಿ ರೂ. ವೆಚ್ಚದಲ್ಲಿ 'ಜಲಧಾರೆ' ಮೊದಲ ಹಂತದ ಯೋಜನೆ ಪ್ರಾರಂಭಿಸಲು ಕ್ರಮ.
- ನರೇಗಾ ಯೋಜನೆಯಡಿ 12 ಕೋಟಿ ಮಾನವ ದಿನಗಳ ಸೃಜನೆಯ ಗುರಿ.
- "ಸುಭದ್ರ ಶಾಲೆ ಯೋಜನೆಯಡಿ" ರಾಜ್ಯದ 6825 ಗ್ರಾಮೀಣ ಶಾಲೆಗಳಿಗೆ ನರೇಗಾ ಯೋಜನೆಯಡಿ 90 ಕೋಟಿ ರೂ. ವೆಚ್ಚದಲ್ಲಿ ಕಾಂಪೌಂಡ್ ತಡೆಗೋಡೆಗಳ ನಿರ್ಮಾಣ.



- 1000 ಗ್ರಾಮ ಪಂಚಾಯಿತಿಗಳಲ್ಲಿ ಘನತ್ಯಾಜ್ಯ ವಿಲೇವಾರಿಗಾಗಿ ಒಣ ಮತ್ತು ಹಸಿ ತ್ಯಾಜ್ಯವನ್ನು ವಿಂಗಡಿಸಿ ಒಣ ಕಸ ಮರುಬಳಕೆ ಹಾಗೂ ಹಸಿ ಕಸವನ್ನು ಗೊಬ್ಬರವಾಗಿ ಪರಿವರ್ತಿಸುವ "ಸ್ವಚ್ಛಮೇವ ಜಯತೆ" ಆಂದೋಲನ.
- ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಆಸ್ತಿಗಳ ಡಿಜಿಟಲೀಕರಣ; ತೆರಿಗೆ ವ್ಯಾಪ್ತಿಯ ಹೊರಗೆ ಉಳಿದ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಸೇರ್ಪಡೆಗೆ ಕ್ರಮ.
- ಪ್ರತಿ ಜಿಲ್ಲಾ ಪಂಚಾಯತಿಯ ಅನಿರ್ಬಂಧಿತ ಅಭಿವೃದ್ಧಿ ಅನುದಾನ ಗರಿಷ್ಠ 8 ಕೋಟಿ ರೂ.ಗಳಿಗೆ ಹೆಚ್ಚಳ; ಇದಕ್ಕಾಗಿ 172 ಕೋಟಿ ರೂ.ಗಳ ಅನುದಾನ.
- ಪ್ರತಿ ತಾಲ್ಲೂಕು ಪಂಚಾಯತಿಯ ಅನಿರ್ಬಂಧಿತ ಅಭಿವೃದ್ಧಿ ಅನುದಾನ ಗರಿಷ್ಠ 2 ಕೋಟಿ ರೂ.ಗಳವರೆಗೆ ಹೆಚ್ಚಳ. ಇದಕ್ಕಾಗಿ 372 ಕೋಟಿ ರೂ. ಅನುದಾನ.
- ಮಹಾತ್ಮಾ ಗಾಂಧೀಜಿಯವರ 150 ನೇ ಜಯಂತಿ ಅಂಗವಾಗಿ ಗ್ರಾಮ ಪಂಚಾಯಿತಿಗಳ ಆಡಳಿತದಲ್ಲಿ ಪಾರದರ್ಶಕತೆ ಬಿಂಬಿಸಲು ಮತ್ತು ಸಾರ್ವಜನಿಕರ ಮಾಹಿತಿಗಾಗಿ ಗ್ರಾಮ ಪಂಚಾಯಿತಿ ಆಯವ್ಯಯ ಕಿರು ಪುಸ್ತಕ ಪ್ರಕಟಣೆ.

## ಯೋಜನೆ ಮತ್ತು ಪ್ರದೇಶಾಭಿವೃದ್ಧಿ

- ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಈ ವರ್ಷ 1,500 ಕೋಟಿ ರೂ. ಅನುದಾನ; ಹಾಗೂ ಮಲೆನಾಡು ಅಭಿವೃದ್ಧಿ ಪ್ರಾಧಿಕಾರಕ್ಕೆ 70 ಕೋಟಿ ರೂ., ಬಯಲುಸೀಮೆ ಅಭಿವೃದ್ಧಿ ಪ್ರಾಧಿಕಾರಕ್ಕೆ 95 ಕೋಟಿ ರೂ. ಹಾಗೂ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ 30 ಕೋಟಿ ರೂ. ಅನುದಾನದಲ್ಲಿ ಕ್ರಿಯಾ ಯೋಜನೆಯನ್ನು ಕೈಗೆತ್ತಿಕೊಳ್ಳಲು ಕ್ರಮ.
- ಶಾಸಕರ ಸ್ಥಳೀಯ ಅಭಿವೃದ್ಧಿ ಯೋಜನೆಗಳಿಗಾಗಿ 600 ಕೋಟಿ ರೂ. ಅನುದಾನ.
- ನಂಜುಂಡಪ್ಪ ಸಮಿತಿ ಶಿಫಾರಸ್ಸುಗಳನ್ವಯ ಅತೀ ಹಿಂದುಳಿದ ಹಾಗೂ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ವಿಶೇಷ ಅಭಿವೃದ್ಧಿ ಯೋಜನೆಯಡಿ 3010 ಕೋಟಿ ರೂ. ಅನುದಾನ.

## ನಗರಾಭಿವೃದ್ಧಿ

**ಪೌರಾಡಳಿತ ನಿರ್ದೇಶನಾಲಯ:**

- ರಾಜ್ಯದ ಮಹಾನಗರ ಪಾಲಿಕೆಗಳ ಅಭಿವೃದ್ಧಿಗೆ 1,325 ಕೋಟಿ ರೂ. ವೆಚ್ಚದಲ್ಲಿ "ಮಹಾತ್ಮಾಗಾಂಧಿ ನಗರ ವಿಕಾಸ ಯೋಜನೆ" ಜಾರಿಗೆ ಸಿದ್ಧತೆ; ಕಲಬುರಗಿ, ಮೈಸೂರು ಹಾಗೂ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗಳಿಗೆ ತಲಾ 150 ಕೋಟಿ ರೂ. ಹಾಗೂ ಬೆಳಗಾವಿ, ಬಳ್ಳಾರಿ, ತುಮಕೂರು, ಶಿವಮೊಗ್ಗ, ಮಂಗಳೂರು, ದಾವಣಗೆರೆ ಮತ್ತು ವಿಜಯಪುರ ಮಹಾನಗರ ಪಾಲಿಕೆಗಳಿಗೆ ತಲಾ 125 ಕೋಟಿ ರೂ. ಅನುದಾನ ನಿಗದಿ.
- ಪೌರಾಡಳಿತ ನಿರ್ದೇಶನಾಲಯದಲ್ಲಿ ನೀರು ಸರಬರಾಜು





downloaded from: www.kpscvaani.com

ವ್ಯವಸ್ಥೆಯಲ್ಲಿ ಕಂದಾಯರಹಿತ ನೀರು ಸರಬರಾಜು ಮತ್ತು ತೆರಿಗೆ ಸೋರಿಕೆ ತಡೆಗಟ್ಟಲು, ನೀರಿನ ದರದಲ್ಲಿ ಏಕರೂಪತೆ ತರಲು ಪ್ರತ್ಯೇಕ ನೀರು ದರ ನಿಗದೀಕರಣ ಸಲಹಾ ಕೋಶ ಸ್ಥಾಪನೆ.

- ಮಾನವ ತ್ಯಾಜ್ಯ ಕಲ್ಮಶದ ನಿರ್ವಹಣೆ ಮತ್ತು ವಿಲೇವಾರಿಗೆ ಪ್ರಾಯೋಗಿಕವಾಗಿ ಕಲ್ಮಶ ನಿರ್ವಹಣಾ ಘಟಕ ಸ್ಥಾಪನೆ.

## ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ:

- ಬಿಬಿಎಂಪಿ ಸೇರಿದಂತೆ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳಲ್ಲಿ 3 ವರ್ಷದೊಳಗೆ ಪೂರ್ಣ ಪ್ರಮಾಣದಲ್ಲಿ ಬೃಹತ್ ಮಳೆ ನೀರು ಕಾಲುವೆಗಳ ಪುನರ್‌ನಿರ್ಮಾಣಕ್ಕೆ ಕ್ರಮ.
- ನೀರು ಸಂಸ್ಕರಣಾ ಘಟಕಗಳು ಮತ್ತು ತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿ ಸೌರ ವಿದ್ಯುತ್ ಸ್ಥಾವರ ಸ್ಥಾಪನೆ.
- ಮಂಗಳೂರಿನಲ್ಲಿ ಕರ್ನಾಟಕ ಜ್ಞಾನ – ಆರೋಗ್ಯ ಸಮೃದ್ಧಿ ಪರಿಧಿಯನ್ನು (Knowledge-Health Corridor) ಮಣಿಪಾಲದಿಂದ ಕೋಣಾಜೆವರೆಗೆ ಅಭಿವೃದ್ಧಿಪಡಿಸುವ ಬಗ್ಗೆ ಕಾರ್ಯಸಾಧ್ಯತಾ ವರದಿ ತಯಾರಿಸಲು ಕ್ರಮ.

**ಬೆಂಗಳೂರಿನ ಚಲನಶೀಲತೆ ಯೋಜನೆ:**

- ಬೆಂಗಳೂರಿನ ಚಲನಶೀಲತೆಗಾಗಿ ಸಮಗ್ರ ಯೋಜನೆ ಜಾರಿ; ಸಾರ್ವಜನಿಕ ಸಾರಿಗೆ ಮತ್ತು ಸುಸ್ಥಿರತೆಗೆ ಆದ್ಯತೆ; ಎಲ್ಲ ರೀತಿಯ ಚಾಲನಾ ಸೌಲಭ್ಯಗಳನ್ನು ಒಳಗೊಂಡ ಯೋಜನೆ; ಬಿಎಂಟಿಸಿಗೆ ಬಸ್ ಸಂಖ್ಯೆ ಹೆಚ್ಚಳಕ್ಕೆ ಮುಂದಿನ ವರ್ಷಗಳಲ್ಲಿ ಅನುದಾನ; ಕನಿಷ್ಠ 50 ಕಿ.ಮೀ. ಕಾಲುದಾರಿಗಳ ಅಭಿವೃದ್ಧಿ. ಇದಕ್ಕಾಗಿ 50 ಕೋಟಿ ರೂ. ಅನುದಾನ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ:**

- 8015 ಕೋಟಿ ರೂ. ಅಂದಾಜು ವೆಚ್ಚದ ನವ ಬೆಂಗಳೂರು ಕ್ರಿಯಾ ಯೋಜನೆ ಅನುಷ್ಠಾನಕ್ಕೆ 2019–20ರಲ್ಲಿ 2,300 ಕೋಟಿ ರೂ. ಅನುದಾನ.
- ಎಲಿವೇಟೆಡ್ ಕಾರಿಡಾರ್ ಯೋಜನೆಗೆ 2019–20ನೇ ಸಾಲಿನಲ್ಲಿ 1,000 ಕೋಟಿ ರೂ. ಅನುದಾನ.

- ಬೆಂಗಳೂರಿನಲ್ಲಿ 5 ಲಕ್ಷ ಬೀದಿ ದೀಪಗಳನ್ನು ಎಲ್‌ಇಡಿ ದೀಪಗಳಾಗಿ ಪರಿವರ್ತನೆ.
- ಬೆಂಗಳೂರಿನ ಕಮರ್ಷಿಯಲ್ ಸ್ಟ್ರೀಟ್ ಹಾಗೂ ಬ್ರಿಗೇಡ್ ರಸ್ತೆಗಳನ್ನು ಪಾದಚಾರಿ ರಸ್ತೆಗಳನ್ನಾಗಿ ಪರಿವರ್ತಿಸಲು ಕ್ರಮ.
- ಬೆಂಗಳೂರಿನಲ್ಲಿ ಕೆ.ಪಿ.ಸಿ.ಎಲ್ ವತಿಯಿಂದ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಡಿ 400 ಮೆಟ್ರಿಕ್ ಟನ್ ಸಾಮರ್ಥ್ಯದ ಘನ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ಘಟಕ ಸ್ಥಾಪನೆ.
- ಬೆಂಗಳೂರು ನಗರದಲ್ಲಿ "ಪಾರ್ಕಿಂಗ್ ನಿಯಮ ಮತ್ತು ಅನುಷ್ಠಾನ ಯೋಜನೆಯ ನೀತಿ" ಜಾರಿ; 10,000 ವಾಹನಗಳ ನಿಲುಗಡೆಗೆ 87 ಆಯ್ದ ರಸ್ತೆಗಳಲ್ಲಿ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆಗೆ ಕ್ರಮ.
- 195 ಕೋಟಿ ರೂ. ವೆಚ್ಚದಲ್ಲಿ ಹೆಬ್ಬಾಳ ಮತ್ತು ಕೆ.ಆರ್.ಪುರಂ ಫ್ಲೈ ಓವರ್ ಗಳಲ್ಲಿ ಹೆಚ್ಚುವರಿ ಲೂಪ್ ನಿರ್ಮಾಣ; ಗೊರಗುಂಟೆಪಾಳ್ಯದಲ್ಲಿ ಹೊಸ ಅಂಡರ್ ಪಾಸ್ ನಿರ್ಮಾಣ.

**ನಗರ ಭೂ ಸಾರಿಗೆ ನಿರ್ದೇಶನಾಲಯ:**

- **ಬೆಂಗಳೂರು ಸಬ್–ಅರ್ಬನ್ ರೈಲು ವ್ಯವಸ್ಥೆ:**
- 23,093 ಕೋಟಿ ರೂ. ಅಂದಾಜು ಮೊತ್ತದ ಬೆಂಗಳೂರು ಉಪ ನಗರ ರೈಲು ಸೇವೆ ಯೋಜನೆಗೆ ಚಾಲನೆ ನೀಡಲಾಗಿದೆ. ವಿಶೇಷ ಉದ್ದೇಶಿತ ವಾಹಕ, ಬೆಂಗಳೂರು ಮೂಲಸೌಕರ್ಯ ಅಭಿವೃದ್ಧಿ ನಿಗಮವನ್ನು (B-RIDE) ಸ್ಥಾಪಿಸಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳಿಸಲು ಕ್ರಮ.
- ಹೆಬ್ಬಾಳ, ಬೈಯಪ್ಪನಹಳ್ಳಿ, ಕೆ.ಆರ್.ಪುರಂ, ಕಾಡುಗೋಡಿ, ಚಲ್ಲಘಟ್ಟ ಮತ್ತು ಪೀಣ್ಯ ಪ್ರದೇಶಗಳಲ್ಲಿ ಬಹುಮಾದರಿ ಪ್ರಯಾಣ ಹಬ್ (Multi Modal Transit Hub) ಕಾರ್ಯಸಾಧ್ಯತೆ ಅಧ್ಯಯನ.
- ಬೆಂಗಳೂರಿನ ಪ್ರಮುಖ ಸ್ಥಳಗಳಾದ ಯಶವಂತಪುರ, ಬನಶಂಕರಿ, ವಿಜಯನಗರ, ಪೀಣ್ಯ ಮತ್ತು ಇತರೆ ಪ್ರದೇಶಗಳಲ್ಲಿ ಮೆಟ್ರೊ ರೈಲು ಮತ್ತು ಟಿ.ಟಿ.ಎಂ.ಸಿ.ಗಳ ಅಂತರ್ ಕ್ರಮ ಸಂಯೋಜನೆ ವಿನ್ಯಾಸ ಹಾಗೂ ಮೂಲಸೌಕರ್ಯ ಅಭಿವೃದ್ಧಿ.







- ಟೈರ್–2 ನಗರಗಳಲ್ಲಿ ಒಂದು ಪಾರ್ಕಿಂಗ್ ನಿಯಮ ಮತ್ತು ಅನುಷ್ಠಾನ ಯೋಜನೆ ಜಾರಿ ಹಾಗೂ ಸುಧಾರಿತ ಸಂಚಾರ ಮಾಹಿತಿ ಮತ್ತು ನಿರ್ವಹಣಾ ವ್ಯವಸ್ಥೆಯ ಅಧ್ಯಯನಕ್ಕೆ ಕ್ರಮ.
- ಮೈಸೂರು, ಮಂಗಳೂರು ಹಾಗೂ ಹುಬ್ಬಳ್ಳಿ–ಧಾರವಾಡ ನಗರಗಳಲ್ಲಿ ಮೆಟ್ರೋ ರೈಲು ಯೋಜನೆ ಬಗ್ಗೆ ಪೂರ್ವ ಕಾರ್ಯ ಸಾಧ್ಯತಾ ವರದಿ ತಯಾರಿಕೆ ಪರಿಶೀಲನೆ.

**ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ:**

- ಮೆಟ್ರೋ ಮತ್ತು ಬಸ್ ಸೇವೆಗಳಲ್ಲಿ ಬಳಸಬಹುದಾದ ಚಾಲನೆ ಕಾರ್ಡ್‌ಗಳ ಪ್ರಾರಂಭ.
- 3 ಕೋಚ್‌ಗಳಿರುವ ಎಲ್ಲಾ 50 ರೈಲು ಸೆಟ್‌ಗಳನ್ನು 6 ಕೋಚ್‌ಗಳ ಸೆಟ್‌ಗಳಾಗಿ ಪರಿವರ್ತನೆ.
- ಆಯ್ದ 10 ಮೆಟ್ರೋ ನಿಲ್ದಾಣಗಳಲ್ಲಿ ದ್ವಿಚಕ್ರ ವಾಹನಗಳಿಗೆ ವಿದ್ಯುತ್ ಚಾರ್ಜಿಂಗ್ ಸೌಕರ್ಯ.
- ಕೊನೆಯ ಮೈಲಿನ ಸಂಪರ್ಕ ಸೇವೆಯಾಗಿ ಆಯ್ದ 10 ಮೆಟ್ರೋ ನಿಲ್ದಾಣಗಳಲ್ಲಿ ಬಿ.ಎಂ.ಟಿ.ಸಿ. ಇಂದ ಸಣ್ಣ ಸಾಮರ್ಥ್ಯದ ಬಸ್‌ಗಳ ಸೌಲಭ್ಯ.
- ಯಶವಂತಪುರದಲ್ಲಿ ರೈಲ್ವೇ ಮತ್ತು ಮೆಟ್ರೋ ನಿಲ್ದಾಣಗಳ ನಡುವೆ ಪಾದಚಾರಿ ಮೇಲ್ಸೇತುವೆ ನಿರ್ಮಾಣ.
- ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರಂ ಮತ್ತು ಹೆಬ್ಬಾಳ ಮಾರ್ಗವಾಗಿ ಹೊರ ವರ್ತುಲ ರಸ್ತೆ – ವಿಮಾನ ನಿಲ್ದಾಣ ಮಾರ್ಗ ನಿರ್ಮಾಣ; 16,579 ಕೋಟಿ ರೂ. ಅನುದಾನ.
- ಕೆಂಗೇರಿ ಮೆಟ್ರೋ ಜಾಲದ ಪಶ್ಚಿಮ ತುದಿ ವಿಸ್ತರಿಸಿ ಚಲ್ಲಘಟ್ಟದಲ್ಲಿ ಹೆಚ್ಚುವರಿ ನಿಲ್ದಾಣವನ್ನು ಸ್ಥಾಪಿಸಲಾಗುವುದು.

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ:**

- 17,200 ಕೋಟಿ ರೂ. ವೆಚ್ಚದ ಫೆರಿಫೆರಲ್ ರಿಂಗ್ ರಸ್ತೆ ಯೋಜನೆಗೆ 2019–20ನೇ ಸಾಲಿಗೆ 1,000 ಕೋಟಿ ರೂ. ಅನುದಾನ.

**ಬೆಂಗಳೂರು ಜಲ ಮಂಡಳಿ**

- ಬೆಂಗಳೂರಿನಲ್ಲಿರುವ ಜಲ ಸಂಪನ್ಮೂಲ ಬಳಸಿ, ಅರ್ಕಾವತಿ ಮತ್ತು ದಕ್ಷಿಣ ಪಿನಾಕಿನಿ ನದಿಗಳಲ್ಲಿ ಮತ್ತೆ ನೀರು ಹರಿಸುವ ಯೋಜನೆ; ಬಿಎಂಆರ್‌ಡಿಎ ಪ್ರದೇಶದಲ್ಲಿ ಮಳೆನೀರು ಕೊಯ್ಲು, ಎಲ್ಲ ಕೆರೆ ಹಾಗೂ ನೀರು ನಿಲ್ಲುವ ತಾಣಗಳ ಸಂರಕ್ಷಣೆ, ತ್ಯಾಜ್ಯ ನೀರು ಮರುಬಳಕೆ, ಅರ್ಕಾವತಿ ಮತ್ತು ದಕ್ಷಿಣ ಪಿನಾಕಿನಿ ನದಿಗಳ ಪಕ್ಕ ಇರುವ ಸಾರ್ವಜನಿಕ ಸ್ಥಳಗಳನ್ನು ಶುಚಿಯಾಗಿಡಲು ಕ್ರಮ. ಇದರಿಂದ 1400 ಎಂಎಲ್‌ಡಿ ನೀರು ಹೆಚ್ಚುವರಿಯಾಗಿ ಲಭ್ಯ. ಈ ಯೋಜನೆ ಅನುಷ್ಠಾನಕ್ಕೆ ಮುಖ್ಯಮಂತ್ರಿ ಅಧ್ಯಕ್ಷತೆಯ ಸಮಿತಿ ರಚನೆ; ಯೋಜನೆಗೆ 50 ಕೋಟಿ ರೂ. ಅನುದಾನ.
- ಜೈಕಾ ನೆರವಿನೊಂದಿಗೆ 5550 ಕೋಟಿ ರೂ. ಗಳ ಕಾವೇರಿ ನೀರು ಸರಬರಾಜು ಯೋಜನೆಯ 5ನೇ ಹಂತ ಅನುಷ್ಠಾನಕ್ಕೆ 2019–20ರಲ್ಲಿ 500 ಕೋಟಿ ರೂ. ಅನುದಾನ.
- ಬೆಂಗಳೂರು ನಗರದಲ್ಲಿ 914 ಸ್ಥಳಗಳಲ್ಲಿ ಮಳೆನೀರು ಚರಂಡಿಗೆ ತ್ಯಾಜ್ಯನೀರು ಸೇರುವುದನ್ನು ತಡೆಗಟ್ಟಲು 2 ವರ್ಷದಲ್ಲಿ 76.55 ಕೋಟಿ ರೂ. ಕಾಮಗಾರಿ.

**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ:**

- ಮಂಡಳಿಯ ಒಂದೇ ಸೂರಿನಡಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಗಟು ನೀರು ಸರಬರಾಜು ಯೋಜನೆಗಳ ಸಮಗ್ರ ನಿರ್ವಹಣೆ, ಎಸ್‌ಎಫ್‌ಸಿ ಅನುದಾನಡಿ ವೆಚ್ಚ ಭರಿಸಲು ಕ್ರಮ.
- ನಗರ ಪ್ರದೇಶದ ತ್ಯಾಜ್ಯ ಸಂಸ್ಕರಣಾ ಘಟಕಗಳ ನಿರ್ವಹಣೆ, ಆರ್ದ್ರ ಬಾವಿಗಳು ಮತ್ತು ಒಳಚರಂಡಿ ಯೋಜನೆಯಡಿ ಸಂಯೋಜಿತ ಕಾಮಗಾರಿಗಳ ನಿರ್ವಹಣಾ ವೆಚ್ಚ ಎಸ್‌ಎಫ್‌ಸಿ ಅನುದಾನದಡಿ ಭರಿಸಲು ಕ್ರಮ.
- ಪ್ರಾಯೋಗಿಕವಾಗಿ ಎಸ್.ಟಿ.ಪಿ.ಗಳಲ್ಲಿ ಕಲ್ಮಶ ನಿರ್ವಹಣಾ ಘಟಕ ಸ್ಥಾಪನೆ.

## ಕಂದಾಯ

- ಕಂದಾಯ ಇಲಾಖೆಯಲ್ಲಿ ಆಯುಕ್ತಾಲಯ ರಚಿಸಲು ಪರಿಶೀಲನೆ.
- ರಾಮನಗರ ಜಿಲ್ಲೆಯ ಹಾರೋಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆಯ ಚೇಳೂರು, ಬಾಗಲಕೋಟೆ ಜಿಲ್ಲೆಯ ತೇರದಾಳ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕಳಸ ಹೊಸ ತಾಲ್ಲೂಕುಗಳ ರಚನೆ.
- ಕಲಬುರಗಿ, ವಿಜಯಪುರ, ದಕ್ಷಿಣ ಕನ್ನಡ, ಮೈಸೂರು, ಗದಗ, ದಾವಣಗೆರೆ, ಧಾರವಾಡ ಹಾಗೂ ಕೊಡಗು ಜಿಲ್ಲೆಗಳಲ್ಲಿ ಡ್ರೋನ್‌ಗಳ ಮೂಲಕ ರೀ–ಸರ್ವೆ ಕಾರ್ಯ.
- ಹಿಂದೂ ರುದ್ರಭೂಮಿಗಳ ಅಭಿವೃದ್ಧಿಗೆ 20 ಕೋಟಿ ರೂ. ಅನುದಾನ.
- ಕೊಡಗು ಪುನರ್ ನಿರ್ಮಾಣ, ಪುನರ್ವಸತಿ ಮತ್ತು ಅಭಿವೃದ್ಧಿ ಪ್ರಾಧಿಕಾರದ ದೈನಂದಿನ ಕಾರ್ಯಚಟುವಟಿಕೆಗಳಿಗೆ 2 ಕೋಟಿ ರೂ. ಅನುದಾನ.



downloaded from: www.kpscvaani.com

- ಮುಜರಾಯಿ ಇಲಾಖೆಯ ವ್ಯಾಪ್ತಿಯ ಅನುಸೂಚಿತ ಸಂಸ್ಥೆಗಳ ಜಮೀನುಗಳ ಸರ್ವೆ ಕಾರ್ಯವನ್ನು ಪ್ರಾರಂಭಿಸಲಾಗುವುದು.
- ಮಾನಸ ಸರೋವರ ಯಾತ್ರಿಗಳ ಪ್ರೋತ್ಸಾಹಧನ 30,000 ರೂ.ಗಳಿಗೆ ಹೆಚ್ಚಳ.
- ಐತಿಹಾಸಿಕ ಮೇಲುಕೋಟೆಯ ಸಮಗ್ರ ಅಭಿವೃದ್ಧಿಗೆ ಮೇಲುಕೋಟೆ ಅಭಿವೃದ್ಧಿ ಪ್ರಾಧಿಕಾರ ರಚನೆ; 5 ಕೋಟಿ ರೂ. ಅನುದಾನ.
- 2019-20ನೇ ಸಾಲಿನಲ್ಲಿ ರಾಜ್ಯದ ವಿವಿಧ ಮಠಗಳು ಹಾಗೂ ಇತರ ಧಾರ್ಮಿಕ ಸಂಸ್ಥೆಗಳಿಗೆ 60 ಕೋಟಿ ರೂ.ಗಳ ಅನುದಾನ.

## ಇಂಧನ

- ರೈತರಿಗೆ ಉಚಿತವಾಗಿ ನೀಡಲಾಗುತ್ತಿದ್ದ ನೀರಾವರಿ ಪಂಪ್‌ಸೆಟ್, ಭಾಗ್ಯ ಜ್ಯೋತಿ, ಕುಟೀರಜ್ಯೋತಿ ಗ್ರಾಹಕರ ಸಹಾಯಧನ 11,250 ಕೋಟಿ ರೂ.ಗಳಿಗೆ ಹೆಚ್ಚಳ.
- Roof-top ಸೌರ ಶಕ್ತಿ ಉತ್ಪಾದನೆಯನ್ನು ಹೆಚ್ಚಿಸಲು ಆದ್ಯತೆ.
- ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಹಗಲಿನಲ್ಲಿ ವಿದ್ಯುತ್ ಒದಗಿಸಲು ಕ್ರಮ.
- ರೈತರಿಗೆ ಗುಣಮಟ್ಟದ ವಿದ್ಯುಚ್ಛಕ್ತಿ ಒದಗಿಸಲು 40,000 ಹೊಸ ಟ್ರಾನ್ಸ್‌ಫಾರ್ಮರ್ ಅಳವಡಿಕೆ.

## ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ

- ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (SHDP) ಅಡಿ ಒಟ್ಟು 10,000 ಕೋಟಿ ರೂ.ಗಳಲ್ಲಿ 7,940 ಕಿ.ಮೀ ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.
- 5,690 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಮತ್ತು ಸೇತುವೆಗಳ ಸುಧಾರಣೆ ಮತ್ತು ನವೀಕರಣ ಕಾಮಗಾರಿ ಕೈಗೆತ್ತಿಕೊಳ್ಳಲು ಕ್ರಮ.
- ಮಲೆನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ "ಶಾಲಾ ಸಂಪರ್ಕ ಸೇತು" ಯೋಜನೆಯಡಿ 1,317 ಸಂಖ್ಯೆಯ ಕಿರು ಸೇತುವೆಗಳನ್ನು ಪೂರ್ಣಗೊಳಿಸಲು ಕ್ರಮ.



- ರಸ್ತೆಗಳ ಪಕ್ಕದಲ್ಲಿ ಬರುವ ಕೆರೆಗಳು, ನಾಲೆಗಳು ಹಾಗೂ ಇತರೆ ಜಲಮೂಲಗಳ ಬಳಿ ಸುರಕ್ಷಾ ಬ್ಯಾರಿಯರ್ ಅಳವಡಿಸಲು 100 ಕೋಟಿ ರೂ. ಅನುದಾನ.

## ಮೂಲಸೌಲಭ್ಯ ಅಭಿವೃದ್ಧಿ

**ರಾಜ್ಯದ ವಿಮಾನ ನಿಲ್ದಾಣಗಳ ಮೂಲಭೂತ ಸೌಲಭ್ಯಗಳ ಸಮಗ್ರ ಅಭಿವೃದ್ಧಿಗೆ ಕೈಗೆತ್ತಿಕೊಳ್ಳಲಾಗುವ ಯೋಜನೆಗಳು:**

- 2019-20ರಲ್ಲಿ ಬೀದರ್ ನಾಗರಿಕ ವಿಮಾನ ನಿಲ್ದಾಣ ಕಾರ್ಯಾಚರಣೆ ಪ್ರಾರಂಭಿಸಲು ಕ್ರಮ. ವಿಮಾನ ನಿಲ್ದಾಣದ ಹೊಸ ಟರ್ಮಿನಲ್ ಕಟ್ಟಡ ಅಭಿವೃದ್ಧಿಗೆ 32 ಕೋಟಿ ರೂ. ಅನುದಾನ.
- ಕಲಬುರಗಿ ವಿಮಾನನಿಲ್ದಾಣ ಕಾರ್ಯಾಚರಣೆ ಶೀಘ್ರ ಪ್ರಾರಂಭ.
- ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಏರ್‌ಸ್ಟ್ರಿಪ್ ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿ ಹಾಗೂ ಹಾಸನ ವಿಮಾನನಿಲ್ದಾಣದ ಅಭಿವೃದ್ಧಿಗೆ ಕ್ರಮ.
- ರಸ್ತೆ ಮೇಲುಸೇತುವೆ / ಕೆಳಸೇತುವೆಗೆ ಭೂಸ್ವಾಧೀನ ಹಾಗೂ ನಿರ್ಮಾಣಕ್ಕಾಗಿ 2019-20ರ ಆಯವ್ಯಯದಲ್ಲಿ 70 ಕೋಟಿ ರೂ. ಅನುದಾನ.

## ವಾಣಿಜ್ಯ ಮತ್ತು ಕೈಗಾರಿಕೆ

- ತುಮಕೂರು ಜಿಲ್ಲೆಯ ವಸಂತನರಸಾಪುರದ 9,629 ಎಕರೆ ಪ್ರದೇಶದಲ್ಲಿ ಚೆನ್ನೈ-ಬೆಂಗಳೂರು ಕೈಗಾರಿಕಾ ಕಾರಿಡಾರ್ ಯೋಜನೆಯಡಿ "ತುಮಕೂರು ಕೈಗಾರಿಕಾ ನೋಡ್" ಅಭಿವೃದ್ಧಿಗೆ ಕ್ರಮ. ಇದರಿಂದ ಪ್ರಸ್ತಾವಿತ 50,000 ಕೋಟಿ ರೂ. ವರೆಗೆ ಬಂಡವಾಳ ಹೂಡಿಕೆಯಾಗಲಿದ್ದು, 2 ಲಕ್ಷ ಜನರಿಗೆ ಉದ್ಯೋಗಾವಕಾಶದ ನಿರೀಕ್ಷೆ. ವಸಂತನರಸಾಪುರ, ತುಮಕೂರು ಹಾಗೂ ರಾಮನಗರ ಮತ್ತು ಬೆಂಗಳೂರು ನಡುವೆ ಪ್ರತ್ಯೇಕ ಟ್ರಾಕ್‌ಗಳ ಮೇಲೆ ರೇಲ್ ಆಧಾರಿತ ಸಮರ್ಥ ಮತ್ತು ಅನುಕೂಲಕರ ಸಾಮೂಹಿಕ ಸಾಗಾಣಿಕೆ ವ್ಯವಸ್ಥೆ ಸ್ಥಾಪನೆಗೆ ಕ್ರಮ.
- ನೂತನ ಕೈಗಾರಿಕಾ ನೀತಿ ಜಾರಿ; ಹಿಂದುಳಿದ ಪ್ರದೇಶಗಳು ಮತ್ತು ಟೈರ್ 2 ಮತ್ತು 3 ಕೇಂದ್ರಗಳಿಗೆ ಬಂಡವಾಳ ಆಕರ್ಷಣೆ, ವಿನೂತನ ತಂತ್ರಜ್ಞಾನ ಮತ್ತು ಹೆಚ್ಚಿನ ಉದ್ಯೋಗ ಸೃಷ್ಟಿಗೆ ಅವಕಾಶವಿರುವ ವಲಯಗಳಿಗೆ ಆದ್ಯತೆ.
- ಕಾಂಪೀಟ್ ವಿತ್ ಚೈನಾ ಯೋಜನೆ ಅನುಷ್ಠಾನಕ್ಕೆ 2019-20ರಲ್ಲಿ 110 ಕೋಟಿ ರೂ. ಅನುದಾನ.
- ಜನವರಿ-2020ರಲ್ಲಿ ಬೆಂಗಳೂರಿನಲ್ಲಿ "ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ" ಆಯೋಜಿಸಲು ಕ್ರಮ.
- ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಹಾಸನ ಜಿಲ್ಲೆಯ ಅರಸೀಕೆರೆ, ಮಂಡ್ಯ ಜಿಲ್ಲೆಯ ನಾಗಮಂಗಲ, ಕಲಬುರಗಿ ಜಿಲ್ಲೆಯ ಚಿತ್ತಾಪುರ, ವಿಜಯಪುರ ಜಿಲ್ಲೆಯ ಮುಳವಾಡ, ಬೆಳಗಾವಿ ಜಿಲ್ಲೆಯ ಕಣಗಲಾ ಮತ್ತು ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿ.



downloaded from: www.kpscvaani.com

- ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಉತ್ಪನ್ನಗಳನ್ನು ಮಾರುಕಟ್ಟೆಗೆ ತರುವಲ್ಲಿ ಎದುರಾಗುವ ತೊಂದರೆ ನಿವಾರಣೆಗೆ "ಎಂ.ಎಸ್.ಎಂ.ಇ. - ಸಾರ್ಥಕ್" ಯೋಜನೆ ಜಾರಿಗೆ 5 ಕೋಟಿ ರೂ. ಅನುದಾನ.
- ತೆಂಗಿನ ನಾರಿನ ಉದ್ಯಮಕ್ಕೆ ಪ್ರೋತ್ಸಾಹ ನೀಡಲು 'ಕಲ್ಪವೃಕ್ಷ ಕಾಯಕ - ಸಮಗ್ರ ತೆಂಗಿನ ನಾರಿನ ನೀತಿ' ಜಾರಿಗೆ ಕ್ರಮ; ಇದಕ್ಕಾಗಿ 80 ಕೋಟಿ ರೂ. ಅನುದಾನ.
- ರಾಷ್ಟ್ರ ಮಟ್ಟದ ಡಿಸೈನ್ ಸಂಸ್ಥೆಗಳ ಸಹಯೋಗದೊಂದಿಗೆ ಡಿಸೈನ್ ಕ್ಲಿನಿಕ್‌ಗಳನ್ನು ಸ್ಥಾಪಿಸಲು 2 ಕೋಟಿ ರೂ. ಅನುದಾನ.
- ವಿದ್ಯುತ್ ಮಗ್ಗಗಳ ಘಟಕಕ್ಕೆ ಅಕೋಸ್ಟಿಕ್ ಉಪಕರಣಗಳ ಅಳವಡಿಕೆಗೆ ಶೇ.75ರಷ್ಟು ಸಹಾಯಧನ ನೀಡಲು 5 ಕೋಟಿ ರೂ. ಅನುದಾನ.
- ಸೀವಿಂಗ್ ಮೆಷಿನ್ ಆಪರೇಟರ್ ತರಬೇತಿ ಪಡೆದ ಮಹಿಳಾ ಅಭ್ಯರ್ಥಿಗಳಿಗೆ ಇಂಡಸ್ಟ್ರೀಯಲ್ ಸೀವಿಂಗ್ ಮೆಷಿನ್ ಖರೀದಿಗೆ ಶೇ.50ರಷ್ಟು ಸಹಾಯಧನ ನೀಡಲು 2 ಕೋಟಿ ರೂ. ಅನುದಾನ.
- ಮಂಡ್ಯದ ಮೈಸೂರ್ ಶುಗರ್ ಕಾರ್ಖಾನೆಯನ್ನು ಹೊಸದಾಗಿ ನಿರ್ಮಿಸಿ, ಡಿಸ್ಟಿಲರಿ ಘಟಕ, ಸಕ್ಕರೆ ಘಟಕ, ಬಾಯ್ಲಿಂಗ್ ಹೌಸ್‌ನ ದುರಸ್ತಿ ಮತ್ತು ಎಥನಾಲ್ ಯಂತ್ರೋಪಕರಣಗಳು ಹಾಗೂ ಮೊಲಾಸಸ್ ಟ್ಯಾಂಕ್ ಅಳವಡಿಸಲು 100 ಕೋಟಿ ರೂ. ಅನುದಾನ.
- ಕೈಗಾರಿಕಾ ಶೆಡ್‌ಗಳನ್ನು ಅಭಿವೃದ್ಧಿಪಡಿಸಲು ಖಾಸಗಿ ಬಂಡವಾಳ ಹೂಡಿಕೆದಾರರಿಗೆ ಪ್ರೋತ್ಸಾಹಧನ ನೀಡಲು 50 ಕೋಟಿ ರೂ. ಅನುದಾನ.
- ಮಂಡ್ಯ ಜಿಲ್ಲೆಯ ಸಮಗ್ರ ಕೈಗಾರಿಕಾ ಅಭಿವೃದ್ಧಿ ಹಾಗೂ ಜಿಲ್ಲೆಯ ಸುತ್ತಮುತ್ತ ಉದ್ಯೋಗಾವಕಾಶ ಸೃಜಿಸಲು 50 ಕೋಟಿ ರೂ.ಗಳ ಪ್ಯಾಕೇಜ್ ಘೋಷಣೆ.
- ಬೆಂಗಳೂರಿನ ದೊಡ್ಡಬಿದರಕಲ್ಲು ಬಳಿ ಕಾವೇರಿ ಎಂಪೋರಿಯಂ ಒಡೆತನದ ಜಾಗದಲ್ಲಿ ಕಲಾಗ್ರಾಮ ನಿರ್ಮಿಸಿ, ಕರಕುಶಲಕರ್ಮಿಗಳಿಗೆ ಉತ್ತೇಜನ ನೀಡಲು ಹಾಗೂ ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿ ಪಡಿಸಲು 10 ಕೋಟಿ ರೂ. ಅನುದಾನ.

## ಗಣಿ ಮತ್ತು ಭೂವಿಜ್ಞಾನ

- ದೇಶದಲ್ಲೇ ಮೊದಲ ಬಾರಿಗೆ, ರಾಜ್ಯದ ಗಣಿ ಗುತ್ತಿಗೆಗಳಲ್ಲಿ 82 ಕೋಟಿ ರೂ. ಗಳಲ್ಲಿ ನೂತನ ಡ್ರೋನ್ ತಂತ್ರಜ್ಞಾನ ಮತ್ತು ಡಿಜಿಪಿಎಸ್ ತಂತ್ರಜ್ಞಾನ ಬಳಸಿ ಸಮೀಕ್ಷೆ ಕೈಗೊಳ್ಳಲು ಕ್ರಮ.

## ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ

- ರಾಜ್ಯದ "ಮಾಹಿತಿ ತಂತ್ರಜ್ಞಾನ ಪಾಲಿಸಿ" ಯ ಪರಿಷ್ಕರಣೆ ; ದ್ವಿತೀಯ, ತೃತೀಯ ದರ್ಜೆ ನಗರಗಳಲ್ಲಿ ಹೂಡಿಕೆಗೆ ಅವಕಾಶ.



- ಸ್ಟಾರ್ಟ್‌ಅಪ್‌ಗಳಿಗೆ ಬೆಂಬಲ ಒದಗಿಸಲು ಪರಿಪೋಷಣಾ ಕೇಂದ್ರ (Incubation centres) ಬಲಪಡಿಸಲು ಹಾಗೂ ಹೊಸ ಪರಿಪೋಷಣಾ ಕೇಂದ್ರಗಳ ಸ್ಥಾಪನೆ.
- ತುಮಕೂರಿನಲ್ಲಿ ಹೊಸ ಉದ್ದಿಮೆಗಳ ಪ್ರೋತ್ಸಾಹಕ್ಕೆ 7 ಕೋಟಿ ರೂ. ವೆಚ್ಚದಲ್ಲಿ 'K-Tech ನಾವೀನ್ಯತೆ ಕೇಂದ್ರ' (Innovation Hub) ಸ್ಥಾಪನೆ.

## ಇ-ಆಡಳಿತ

- ಎಲ್ಲ ಇಲಾಖೆಗಳ ಯೋಜನೆಯಡಿ ಫಲಾನುಭವಿಗಳಿಗೆ ಆಧಾರ್ ಆಧಾರಿತ ವಿನೂತನವಾದ "ನೇರ ನಗದು ವರ್ಗಾವಣೆ" ನಗದು ಪಾವತಿಗೆ ಕ್ರಮ.
- "ಮನೆ ಬಾಗಿಲಿಗೆ ಸರ್ಕಾರದ ನಾಗರೀಕ ಸೇವೆಗಳು" ಯೋಜನೆಯ ಮೂಲಕ ಆಯ್ದ ಸೇವೆಗಳನ್ನು ನಾಗರೀಕರ ಮನೆ ಬಾಗಿಲಿಗೆ ತಲುಪಿಸುವ ವ್ಯವಸ್ಥೆ.
- ನಮ್ಮ ಸರ್ಕಾರವು ಆಧುನಿಕ ಚಾಟ್‌ಬಾಟ್ (chat bot) ಮತ್ತು ಬಿಗ್‌ಡಾಟಾ (big data) ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು, ಅಗತ್ಯವಾದ ಮೂಲಭೂತ ಸೌಕರ್ಯ ಸ್ಥಾಪಿಸಲು ಕ್ರಮ.
- ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸಲು ಸಚಿವಾಲಯದಲ್ಲಿ ಎಲ್ಲಾ ಕಛೇರಿಗಳಲ್ಲಿ "ಇ-ಆಫೀಸ್" ಕಡ್ಡಾಯ; ರಾಜ್ಯ ಸರ್ಕಾರದ ಜಾಲತಾಣಗಳನ್ನು ಏಕರೂಪ ಟೆಂಪ್ಲೇಟ್‌ಗೆ ಅಳವಡಿಸಲು ಹಾಗೂ ವಿಕಲಚೇತನ ಸ್ನೇಹಿ ಮಾರ್ಗದರ್ಶಿಕೆಯಡಿ ಅಭಿವೃದ್ಧಿಪಡಿಸಲು ಕ್ರಮ.
- ಆಡಳಿತ ತರಬೇತಿ ಕೇಂದ್ರ, ಮೈಸೂರು ಮತ್ತು ಪ್ರತಿ ಜಿಲ್ಲಾ ತರಬೇತಿ ಕೇಂದ್ರಗಳಲ್ಲಿ ಇ-ಆಡಳಿತ ತರಬೇತಿ ಕೋಶ ಸ್ಥಾಪನೆಗೆ ಕ್ರಮ.
- ಉದಯೋನ್ಮುಖ ಕಂಪನಿ ಹಾಗೂ ಸಂಸ್ಥೆಗಳಿಗೆ ಸಮಂಜಸ ದರಕ್ಕೆ ಅಗತ್ಯ ಮಾಹಿತಿ ಒದಗಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ದಲ್ಲಿ "ಇನ್‌ಫೋನೋಮಿಕ್ಸ್" ಶಾಖೆ ಪ್ರಾರಂಭಿಸಲು ಕ್ರಮ.



## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ

- ಸರ್ಕಾರಿ ನೌಕರರ ವರ್ಗಾವಣೆಯಲ್ಲಿ ಪಾರದರ್ಶಕತೆ ತರಲು ಎಲ್ಲಾ ಇಲಾಖೆಗಳಲ್ಲಿನ ಗ್ರೂಪ್ 'ಸಿ' ಮತ್ತು 'ಡಿ' ವೃಂದದ ನೌಕರರ ವರ್ಗಾವಣೆಗಳನ್ನು ಕೌನ್ಸಿಲಿಂಗ್ ಮುಖಾಂತರ ನಡೆಸಲು ಅಗತ್ಯ ಕಾಯ್ದೆ ಜಾರಿ.

## ಪ್ರವಾಸೋದ್ಯಮ

- ಬಾದಾಮಿಯನ್ನು ವಿಶ್ವವಿಖ್ಯಾತ ಪ್ರವಾಸಿ ತಾಣವನ್ನಾಗಿ ಮತ್ತು ಕರಕುಶಲ ಮಾರುಕಟ್ಟೆಯನ್ನಾಗಿ ಅಭಿವೃದ್ಧಿ ಪಡಿಸಲು 25 ಕೋಟಿ ರೂ. ಅನುದಾನ.
- ವಿಶ್ವ ವಿಖ್ಯಾತ ಮೈಸೂರಿನ ಪ್ರವಾಸಿ ತಾಣಗಳ ವೀಕ್ಷಣೆಗೆ ಕೆಎಸ್‌ಟಿಡಿಸಿ ವತಿಯಿಂದ ಲಂಡನ್ ಬಿಗ್ ಬಸ್ ಮಾದರಿಯ 06 ಡಬಲ್ ಡೆಕ್ಕರ್ ತೆರೆದ ಬಸ್ ಸೇವೆ ಪ್ರಾರಂಭ; 5 ಕೋಟಿ ರೂ. ಅನುದಾನ.
- ಪ್ರವಾಸಿಗರನ್ನು ಆಕರ್ಷಿಸಲು "ಕರ್ನಾಟಕ ಅಂತರಾಷ್ಟ್ರೀಯ ಪ್ರವಾಸೋದ್ಯಮ ಪ್ರದರ್ಶನ" ಆಯೋಜನೆಗೆ 2 ಕೋಟಿ ರೂ. ಅನುದಾನ.
- ಹಂಪಿಯಲ್ಲಿ "ಹಂಪಿ ವ್ಯಾಖ್ಯಾನ ಕೇಂದ್ರ" ಹಾಗೂ ವಿಜಯಪುರದಲ್ಲಿ "ವಿಜಯಪುರ ಪ್ರವಾಸೋದ್ಯಮ ವ್ಯಾಖ್ಯಾನ ಕೇಂದ್ರ"ವನ್ನು ಸ್ಥಾಪಿಸಲು ತಲಾ 1 ಕೋಟಿ ರೂ. ಅನುದಾನ.




- ಪಣಂಬೂರು ಮತ್ತು ಸಸಿಹಿತ್ಲುವಿನಲ್ಲಿ ಕಡಲ ತೀರದ ಪ್ರವಾಸೋದ್ಯಮ ಅಭಿವೃದ್ಧಿಗೆ 7 ಕೋಟಿ ರೂ. ಅನುದಾನ.
- ಇಲಾಖೆಯ ಒಟ್ಟು 834 ಸಂರಕ್ಷಿತ ಸ್ಮಾರಕಗಳಲ್ಲಿ, 600 ಸ್ಮಾರಕಗಳ ಸಮೀಕ್ಷೆ ಹಾಗೂ ಸಂರಕ್ಷಣೆಗೆ ಕ್ರಮ.

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ

- ಗಾಂಧೀಜಿಯವರ 150ನೇ ಜನ್ಮದಿನ ಆಚರಣೆಗೆ 5 ಕೋಟಿ ರೂ. ವಿಶೇಷ ಅನುದಾನ.
- ಸರ್ಕಾರದ ಯೋಜನೆಗಳ ಪ್ರಚಾರ ಕಾರ್ಯಗಳನ್ನು ಸಮರ್ಥವಾಗಿ ಕೈಗೊಳ್ಳಲು ಬೆಂಗಳೂರಿನಲ್ಲಿ ಸಾಮಾಜಿಕ ಜಾಲತಾಣ ಘಟಕವನ್ನು ಪ್ರಾರಂಭಿಸಲು ಕ್ರಮ.
- ತುಳು, ಕೊಡವ ಮತ್ತು ಕೊಂಕಣಿ ಭಾಷಾ ಚಲನಚಿತ್ರಗಳನ್ನು ಪ್ರೋತ್ಸಾಹಿಸಲು ವಿಶೇಷ ಕಾರ್ಯಕ್ರಮ; 1 ಕೋಟಿ ರೂ. ಅನುದಾನ.
- ಕಾರ್ಯನಿರತ ಪತ್ರಕರ್ತರ ಕ್ಷೇಮ ನಿಧಿ ದತ್ತಿ ಹಾಗೂ ಹಿರಿಯ ಪತ್ರಕರ್ತರ ಕ್ಷೇಮನಿಧಿ ದತ್ತಿಗಳಿಗೆ ತಲಾ 2 ಕೋಟಿ ರೂ. ಹೆಚ್ಚುವರಿ ಅನುದಾನ.

## ಒಳಾಡಳಿತ

- ಬೆಂಗಳೂರು ನಗರದಲ್ಲಿ 8 ಹೊಸ ಸೈಬರ್ ಎಕಾನಾಮಿಕ್ ನಾರ್ಕೋಟಿಕ್ ವಿಂಗ್ ಪ್ರಾರಂಭಿಸಲು 4 ಕೋಟಿ ರೂ. ಅನುದಾನ.
- ಪೊಲೀಸ್ ಕಾಲೋನಿಗಳಲ್ಲಿ ಮೂಲಸೌಲಭ್ಯ ಒದಗಿಸಲು 20 ಕೋಟಿ ರೂ. ಅನುದಾನ.
- ಅಪರಾಧ ನಿಯಂತ್ರಣ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡಲು Drone Surveillance System ಜಾರಿ.
- ತಲಾ 100 ಕೋಟಿ ರೂ.ಗಳ ಯೋಜನಾ ವೆಚ್ಚದಲ್ಲಿ ವಿಜಯಪುರ ಮತ್ತು ಬೀದರ್‌ಗಳಲ್ಲಿ ತಲಾ 1,000 ಬಂಧಿಗಳ ಸಾಮರ್ಥ್ಯವುಳ್ಳ ಪ್ರತ್ಯೇಕ ವಿಶಿಷ್ಟ ಕೇಂದ್ರ ಕಾರಾಗೃಹ ಹಾಗೂ ಅರಸೀಕೆರೆಯಲ್ಲಿ 200 ಬಂಧಿ ಸಾಮರ್ಥ್ಯವುಳ್ಳ ಉಪಕಾರಾಗೃಹ ನಿರ್ಮಾಣ. ಈ ಆಯವ್ಯಯದಲ್ಲಿ 30 ಕೋಟಿ ರೂ. ಅನುದಾನ.
- ರಾಜ್ಯದಲ್ಲಿ 5 ಕೋಟಿ ರೂ. ವೆಚ್ಚದಲ್ಲಿ Emergency Response Support System ಯೋಜನೆ ಅನುಷ್ಠಾನ.
- ಅಗ್ನಿಶಾಮಕ ಇಲಾಖೆಯಿಂದ ಗಗನಚುಂಬಿ ಕಟ್ಟಡಗಳ ಬೆಂಕಿ ಅವಘಡ ತಡೆಯಲು, 90 ಮೀಟರ್ ಎತ್ತರ ತಲುಪಬಲ್ಲ ಏರಿಯಲ್ ಲ್ಯಾಡರ್ ಪ್ಲಾಟ್‌ಫಾರ್ಮ್ ವಾಹನ ಖರೀದಿಸಲು ಕ್ರಮ.
- ಒಳಾಡಳಿತ ಇಲಾಖೆಯ ಪೊಲೀಸ್ ಪೇದೆಗಳಿಗೆ ನೀಡಲಾಗುವ ಕಷ್ಟ ಪರಿಹಾರ ಭತ್ಯೆ 2,000 ರೂ.ಗಳಿಗೆ ಹೆಚ್ಚಳ; 103 ಕೋಟಿ ರೂ. ಅನುದಾನ.

## ಸಾರಿಗೆ

- ಸಾರ್ವಜನಿಕ – ಖಾಸಗಿ ಸಹಭಾಗಿತ್ವದಲ್ಲಿ ದಾವಣಗೆರೆ, ಹೊಸಕೋಟೆ ಮತ್ತು ಮದ್ದೂರು ನಗರಗಳಲ್ಲಿ ಸ್ವಯಂಚಾಲಿತ ವಾಹನ ತಪಾಸಣಾ ಮತ್ತು ಪ್ರಮಾಣೀಕರಣ ಕೇಂದ್ರಗಳ ಸ್ಥಾಪನೆ.
- 2019–20ನೇ ಸಾಲಿಗೆ ನಾಲ್ಕು ಸಾರಿಗೆ ಸಂಸ್ಥೆಗಳಿಗೆ 3544 ವಿವಿಧ ಮಾದರಿಯ ಬಸ್‌ಗಳನ್ನು ಸೇರ್ಪಡೆ ಹಾಗೂ ಹೊಸದಾಗಿ 44 ಬಸ್ ನಿಲ್ದಾಣಗಳು ಮತ್ತು 10 ಬಸ್ ಘಟಕಗಳ ಸ್ಥಾಪನೆಗೆ ಕ್ರಮ.
- ಎಲ್ಲಾ ಜಿಲ್ಲಾ ಮತ್ತು ಪ್ರಮುಖ ತಾಲ್ಲೂಕು ಕೇಂದ್ರ ಬಸ್ ನಿಲ್ದಾಣಗಳಲ್ಲಿ ಮಗುವಿನ ಆರೈಕೆ ಕೊಠಡಿ ಪ್ರಾರಂಭ.
- 2019–20ನೇ ಸಾಲಿಗೆ 7100 ಕೋಟಿ ರೂ.ಗಳ ಸಂಗ್ರಹಣೆ ಗುರಿ ನಿಗದಿ.

## ಬೆಳೆ ಸಾಲ ಮನ್ನಾ ಯೋಜನೆ

- ರೈತರ ಬೆಳೆ ಸಾಲ ಮನ್ನಾ ಯೋಜನೆಯಡಿ 6,500 ಕೋಟಿ ರೂ. ಅನುದಾನ ವಾಣಿಜ್ಯ ಬ್ಯಾಂಕುಗಳಿಗೆ ಹಾಗೂ 6,150 ಕೋಟಿ ರೂ. ಸಹಕಾರಿ ಕ್ಷೇತ್ರಕ್ಕೆ ನಿಗದಿ. ಸಹಕಾರ ಬ್ಯಾಂಕ್‌ಗಳ ಸಾಲ ಮನ್ನಾ ಪ್ರಕ್ರಿಯೆ ಜೂನ್–2019 ರೊಳಗೆ ಪೂರ್ಣ; ವಾಣಿಜ್ಯ ಬ್ಯಾಂಕುಗಳ ಸಾಲ ಯೋಜನೆಯೂ 2019–20 ರಲ್ಲಿ ಪೂರ್ಣ.






- 2019–20ರ ಆಯವ್ಯಯದಲ್ಲಿ ಕೃಷಿ ಹಾಗೂ ಸಂಬಂಧಿತ ಇಲಾಖೆಗಳ ಯೋಜನೆಗಳಿಗೆ ಒಟ್ಟು 46,853 ಕೋಟಿ ರೂ. ಅನುದಾನ.

## ತೆರಿಗೆ ಪ್ರಸ್ತಾವನೆಗಳು

**ವಾಣಿಜ್ಯ ತೆರಿಗೆಗಳು**

**ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ)**

- ಸರಕು ಮತ್ತು ಸೇವಾ ತೆರಿಗೆಯಡಿ ರಾಜಸ್ವ ಅಂತರ ಸರಿದೂಗದಿದ್ದರೆ, ರಾಜ್ಯಗಳಿಗೆ ಪರಿಹಾರ ಕಾಯ್ದೆಯಲ್ಲಿ ನಿಗದಿಪಡಿಸಿದಂತೆ, ಸಾಕಷ್ಟು ಪರಿಹಾರವನ್ನು 2025ನೇ ಸಾಲಿನವರೆಗೂ ನೀಡಲು ಕೇಂದ್ರಕ್ಕೆ ಒತ್ತಾಯ.
- ವಾಣಿಜ್ಯ ತೆರಿಗೆ ಇಲಾಖೆಗೆ 76046 ಕೋಟಿ ರೂ. ರಾಜಸ್ವ ಸಂಗ್ರಹಣೆಯ ಗುರಿ ನಿಗದಿ.
- ಜಿಎಸ್‌ಟಿ ಜಾರಿಗೆ ಹಿಂದಿನ ತೆರಿಗೆ ಬಾಕಿ ಕಡಿತಗೊಳಿಸಲು ಸಮಗ್ರ ಕರ ಸಮಾಧಾನ ಯೋಜನೆ ಜಾರಿ.

**ನೋಂದಣಿ ಮತ್ತು ಮುದ್ರಾಂಕ**

- 2019–20ನೇ ಸಾಲಿಗೆ 11,828 ಕೋಟಿ ರೂ.ಗಳ ರಾಜಸ್ವ ಸಂಗ್ರಹಣೆ ಗುರಿ ನಿಗದಿ.

**ಅಬಕಾರಿ**

- ಬಿಯರ್, ಡ್ರಾಟ್ ಬಿಯರ್, ಮೈಕ್ರೊ ಬ್ರಿವರಿಯಲ್ಲಿ ತಯಾರಾಗುವ ಬಿಯರ್ ಹಾಗೂ ಲೋ ಆಲ್ಕೊಹಾಲಿಕ್ ಬಿವರೇಜಸ್ ಮೇಲಿನ ಹೆಚ್ಚುವರಿ ಅಬಕಾರಿ ಸುಂಕ ಹೆಚ್ಚಳ.
- 2019–20ನೇ ಆರ್ಥಿಕ ವರ್ಷಕ್ಕೆ 20,950 ಕೋಟಿ ರೂ. ರಾಜಸ್ವ ಸಂಗ್ರಹಣೆ ಗುರಿ.



downloaded from: www.kpscvaani.com



## ಜಂಟಿ ಅಧಿವೇಶನವನ್ನುದ್ದೇಶಿಸಿ

# ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಸಂಕ್ಷಿಪ್ತ ವಿವರ

**ಕರ್ನಾಟಕ ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಗಳೇ,**
**ಕರ್ನಾಟಕ ವಿಧಾನಸಭೆಯ ಸನ್ಮಾನ್ಯ ಸಭಾಧ್ಯಕ್ಷರೇ,**
**ಸನ್ಮಾನ್ಯ ಕರ್ನಾಟಕದ ಮುಖ್ಯಮಂತ್ರಿಯವರೇ,**
**ಸನ್ಮಾನ್ಯ ಕರ್ನಾಟಕದ ಉಪ ಮುಖ್ಯಮಂತ್ರಿಯವರೇ,**
**ಸನ್ಮಾನ್ಯ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರೇ,**
**ಸನ್ಮಾನ್ಯ ವಿಧಾನಸಭೆಯ ವಿರೋಧ ಪಕ್ಷದ ನಾಯಕರೇ,**
**ಸನ್ಮಾನ್ಯ ಸಚಿವರೇ ಹಾಗೂ**
**ಕರ್ನಾಟಕ ವಿಧಾನಮಂಡಲದ ಸನ್ಮಾನ್ಯ ಸದಸ್ಯರೇ,**

ಕರ್ನಾಟಕ ವಿಧಾನಮಂಡಲದ ಜಂಟಿ ಅಧಿವೇಶನಕ್ಕೆ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಹೊಸ ವರ್ಷದ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ. ಈ ಅಧಿವೇಶನವು, ರಾಜ್ಯವು ಎದುರಿಸುತ್ತಿರುವ ವಿವಿಧ ಸಮಸ್ಯೆಗಳು ಮತ್ತು ಸವಾಲುಗಳ ಮೇಲಿನ ಅರ್ಥಪೂರ್ಣ ಚರ್ಚೆಗಳಿಗೆ ಸಾಕ್ಷಿಯಾಗುವುದೆಂದು ಮತ್ತು ಯೋಜನೆಗಳ ಅನುಷ್ಠಾನ ಮತ್ತು ಸೇವಾ ಪೂರೈಕೆಯನ್ನು ಸುಧಾರಿಸುವುದಕ್ಕಾಗಿ ಉತ್ತಮ ಚಿಂತನೆಯುಳ್ಳ ಸೃಜನಾತ್ಮಕ ಸಲಹೆಗಳು ಮೂಡಿಬರುವುದಕ್ಕೆ ಕಾರಣವಾಗುತ್ತದೆಂದು ನಾನು ಆಶಿಸುತ್ತೇನೆ.

- 2018ರ ಮುಂಗಾರು ಅವಧಿಯಲ್ಲಿ 100 ತಾಲ್ಲೂಕುಗಳು ಮತ್ತು 2018ರ ಹಿಂಗಾರು ಅವಧಿಯಲ್ಲಿ 156 ತಾಲ್ಲೂಕುಗಳು ಬರಪೀಡಿತವಾಗಿದೆ ಎಂಬುದು ಕಳವಳಕಾರಿಯಾದ ಸಂಗತಿಯಾಗಿದೆ. ನನ್ನ ಸರ್ಕಾರವು, ಈ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಪೂರೈಕೆ, ಮೇವು ಲಭ್ಯತೆ ಮತ್ತು ಉದ್ಯೋಗ ಸೃಜನೆಯನ್ನು ಖಚಿತ ಪಡಿಸಲು ಯುಕ್ತ ಕ್ರಮಗಳನ್ನು ಕೈಗೊಂಡಿದೆ. ಯಾವುದೇ ವಿಪತ್ತುಗಳನ್ನು ಎದುರಿಸುವುದಕ್ಕಾಗಿ ಜಿಲ್ಲೆಗಳಿಗೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದೆ. ಮೇವಿನ ಕೊರತೆಯನ್ನು ನಿರ್ವಹಿಸುವುದಕ್ಕಾಗಿ ಮುನ್ನೆಚ್ಚರಿಕೆ ಕ್ರಮವಾಗಿ ಹಸಿರು ಮೇವನ್ನು ಬೆಳೆಸಲು ರೈತರಿಗೆ 8.11 ಲಕ್ಷ ಮೇವು 'ಮಿನಿಕಿಟ್'ಗಳನ್ನು ಉಚಿತವಾಗಿ ವಿತರಿಸಲಾಗಿದೆ. ಈ ಕಾರ್ಯಕ್ರಮದಿಂದ ಸುಮಾರು 30 ಲಕ್ಷ ಟನ್‌ಗಳಷ್ಟು ಹಸಿರು ಮೇವಿನ ಉತ್ಪಾದನೆಯಾಗಬಹುದೆಂದು ನಿರೀಕ್ಷಿಸಲಾಗಿದೆ.
- ಬರಪರಿಸ್ಥಿತಿ ಇರುವ ಈ ಸಂದರ್ಭದಲ್ಲಿ, ಬಾಧಿತ ಜನರಿಗೆ ಜೀವನೋಪಾಯವನ್ನು ಕಲ್ಪಿಸಲು ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಜನೆ ಮಾಡುವುದು ಅತ್ಯಾವಶ್ಯಕವಾಗಿದೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (MGNREGS) ಅಡಿಯಲ್ಲಿ 2018–19ನೇ ಸಾಲಿನ 31ನೇ ಜನವರಿ 2019ರವರೆಗೆ 18.56 ಲಕ್ಷ ಕುಟುಂಬಗಳಿಗೆ ಉದ್ಯೋಗವನ್ನು ಕಲ್ಪಿಸಲಾಗಿದೆ, ಹಾಗೂ 812 ಲಕ್ಷಕ್ಕೂ ಹೆಚ್ಚಿನ ಮಾನವ ದಿನಗಳನ್ನು ಸೃಜಿಸಲಾಗಿದೆ. ಬರ ಪೀಡಿತ ತಾಲ್ಲೂಕುಗಳಲ್ಲಿ ಪ್ರತಿಯೊಬ್ಬ 'ಉದ್ಯೋಗ ಕಾರ್ಡು'ದಾರನಿಗೆ 150 ದಿನಗಳವರೆಗೆ ಕೆಲಸ ನೀಡಲಾಗುತ್ತದೆ.
- ನನ್ನ ಸರ್ಕಾರ, ದೀರ್ಘಕಾಲೀನವಾದ ಮತ್ತು ಪುನರಾವರ್ತಿತವಾಗುತ್ತಿರುವ ಬರಪರಿಸ್ಥಿತಿಯಿಂದ ಉಂಟಾದ ಬಿಕ್ಕಟ್ಟನ್ನು ನಿವಾರಿಸಲು ದೀರ್ಘಾವಧಿ ಕ್ರಿಯಾ ಯೋಜನೆಯ ಅಗತ್ಯವಿದೆಯೆಂಬುದನ್ನು ಮನಗಂಡಿದೆ. ಜಲ ಸಂಪನ್ಮೂಲಗಳ ಸಂರಕ್ಷಣೆಯನ್ನು ಖಚಿತ ಪಡಿಸಲು ಸೂಕ್ಷ್ಮ–ನೀರಾವರಿ ವ್ಯವಸ್ಥೆಗಳಿಗೆ ಮತ್ತು ಮಳೆ ನೀರು ಕೊಯ್ಲಿಗೆ ಉತ್ತೇಜನ ನೀಡುವುದನ್ನು ನಾವು ಮುಂದುವರೆಸುತ್ತೇವೆ. ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ಮತ್ತು ಇಸ್ರೇಲಿ ಮಾದರಿಯ ಅಳವಡಿಕೆಯಂತಹ ಉಪಕ್ರಮಗಳ ಮೂಲಕ ಕೃಷಿ ಪದ್ಧತಿಗಳಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗಳನ್ನು ತರಲು ಸಹ ನಾವು ಉದ್ದೇಶಿಸಿದ್ದೇವೆ. ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿಯನ್ನು ಜಾರಿಗೆ ತರಲು ಒಂದು ವಿಶೇಷ ಅಭಿಯಾನ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದೆ.
- ನನ್ನ ಸರ್ಕಾರವು, ರಾಜ್ಯದಲ್ಲಿ ಹಸಿರು ವಲಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ "ಹಸಿರು ಕರ್ನಾಟಕ" ಆಂದೋಲನವನ್ನು ಪ್ರಾರಂಭಿಸಿದೆ. ಈ ಆಂದೋಲನವು ಜನರ ಪಾಲ್ಗೊಳ್ಳುವಿಕೆಯೊಂದಿಗೆ ಸಸಿಗಳನ್ನು ನೆಡುವ ಗುರಿಯನ್ನು ಹೊಂದಿದೆ. 2019ರ ಮಳೆಗಾಲದ ಅವಧಿಯಲ್ಲಿ 652 ಲಕ್ಷ ಸಸಿಗಳನ್ನು ನೆಡುವ ಗುರಿಯೊಂದಿಗೆ ಪೂರ್ವಸಿದ್ಧತಾ ಚಟುವಟಿಕೆಗಳು ನಡೆಯುತ್ತಿವೆ. ನಮ್ಮ ನದಿಗಳ ನೀರಿನ ಒಳಹರಿವನ್ನು ಹೆಚ್ಚಿಸುವುದಕ್ಕಾಗಿ ಕರ್ನಾಟಕ ನದಿ ಸಂರಕ್ಷಣಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಅರಣ್ಯ ಭದ್ರತೆ ಮತ್ತು ಸಂರಕ್ಷಣೆಯನ್ನು ಬಲಪಡಿಸುವ ದೃಷ್ಟಿಯಿಂದ 2018–19ನೇ ಸಾಲಿನಲ್ಲಿ ಅರಣ್ಯ ಇಲಾಖೆಯ ವಿವಿಧ ವೃಂದಗಳಲ್ಲಿ ಖಾಲಿಯಿರುವ 666 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ. 3,085 ಅರಣ್ಯ ಅಧಿಕಾರಿಗಳು/ಸಿಬ್ಬಂದಿಯ ಹೆಚ್ಚುವರಿ ಹುದ್ದೆಗಳನ್ನು ಮಂಜೂರು ಮಾಡಲಾಗಿದ್ದು, ಅವುಗಳನ್ನು ಹಂತಹಂತವಾಗಿ ನೇಮಕ ಮಾಡಿಕೊಳ್ಳಲಾಗುತ್ತದೆ.
- ನನ್ನ ಸರ್ಕಾರವು, ನೂತನ ಬೆಳೆ ಸಾಲ ಮನ್ನಾ ಯೋಜನೆಯ ಅನುಷ್ಠಾನವನ್ನು ಮನಃಪೂರ್ವಕವಾಗಿ ಪ್ರಾರಂಭಿಸಿದೆ. 31ನೇ ಜನವರಿ 2019ರವರೆಗೆ, 3.28 ಲಕ್ಷ ರೈತರ ಬೆಳೆ ಸಾಲಮನ್ನಾಕ್ಕಾಗಿ 1611 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಸಹಕಾರ ಸಂಘಗಳಲ್ಲಿ ಮತ್ತು ವಾಣಿಜ್ಯ ಬ್ಯಾಂಕುಗಳಲ್ಲಿ ಬಾಕಿ ಇರುವ ಎಲ್ಲಾ ಅರ್ಹ ಬೆಳೆ ಸಾಲಗಳನ್ನು ಇದರ ವ್ಯಾಪ್ತಿಗೆ ತರುವ ಗುರಿಯೊಂದಿಗೆ ಈ ಸಾಲಮನ್ನಾ ಯೋಜನೆಯ ಅನುಷ್ಠಾನವನ್ನು ತ್ವರಿತಗೊಳಿಸಲಾಗುತ್ತಿದೆ.



- ಕರ್ನಾಟಕದ ಕೃಷಿ ಮಾರುಕಟ್ಟೆ ಸುಧಾರಣೆಗಳು ರೈತರು ಶೇಕಡ 38 ಹೆಚ್ಚುವರಿ ಆದಾಯವನ್ನು ಗಳಿಸುವುದಕ್ಕೆ ಸಹಾಯಕವಾಗಿವೆ. ಆನ್‌ಲೈನ್ ಮತ್ತು ಏಕೀಕೃತ ಮಾರುಕಟ್ಟೆ ವೇದಿಕೆಯು ಇಲ್ಲಿಯವರೆಗೆ ಅಂದಾಜು 1.21 ಲಕ್ಷ ಕೋಟಿ ರೂ.ಗಳ ಮೌಲ್ಯದ 5.48 ಕೋಟಿ ಮೆಟ್ರಿಕ್ ಟನ್‌ಗಳಷ್ಟು ಕೃಷಿ ಉತ್ಪನ್ನಗಳ ವಹಿವಾಟನ್ನು ನಡೆಸಿದೆ. ಪ್ರಸ್ತುತ, ಕೃಷಿ ಉತ್ಪನ್ನಗಳ ಬಾಳಿಕೆಯನ್ನು ಹೆಚ್ಚಿಸುವುದಕ್ಕಾಗಿ ಇರೇಡಿಏಷನ್ (ವಿಕಿರಣ) ಘಟಕಗಳಂತಹ ಸೌಲಭ್ಯಗಳನ್ನು ಮತ್ತು ರೈತರ ಪ್ರಯೋಜನಕ್ಕಾಗಿ ಸ್ವಚ್ಛತೆ, ಶ್ರೇಣೀಕರಣ ಮತ್ತು ಪ್ಯಾಕಿಂಗ್‌ನಂತಹ ಮೌಲ್ಯವರ್ಧಿತ ಸೇವಾ ಸೌಲಭ್ಯಗಳನ್ನು ನನ್ನ ಸರ್ಕಾರವು ಸ್ಥಾಪಿಸುತ್ತಿದೆ.
- ರಾಜ್ಯವು ರೇಷ್ಮೆ ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದೆ. ಸುಮಾರು 1.30 ಲಕ್ಷ ರೈತ ಕುಟುಂಬಗಳು ಮತ್ತು 7 ಸಾವಿರ ನೇಯ್ಗೆ ಕುಟುಂಬಗಳು ರೇಷ್ಮೆ ಉದ್ಯಮವನ್ನು ಅವಲಂಬಿಸಿವೆ. ನೂತನ ತಂತ್ರಜ್ಞಾನವನ್ನು ಅಳವಡಿಸುವುದರತ್ತ ಮತ್ತು ಪೂರಕ ಮೂಲ ಸೌಕರ್ಯವನ್ನು ಸೃಜಿಸುವುದರತ್ತ ನಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿದ್ದೇವೆ. ರೇಷ್ಮೆ ಉದ್ಯಮವು, 2018–19ನೇ ಸಾಲಿನಲ್ಲಿ ರೇಷ್ಮೆಗೂಡು ಬೆಲೆಗಳಲ್ಲಿ ಇಳಿಕೆ ಕಂಡಿರುವುದರಿಂದ ರೈತರ ಹಿತಾಸಕ್ತಿಯನ್ನು ರಕ್ಷಿಸುವುದಕ್ಕಾಗಿ ರೇಷ್ಮೆಗೂಡಿಗೆ ರಕ್ಷಣಾತ್ಮಕ ದರ ನೀಡಿ ಪ್ರೋತ್ಸಾಹಿಸಲಾಗಿದೆ.
- ಕರ್ನಾಟಕ ರಾಜ್ಯವು 5.93 ಲಕ್ಷ ಹೆಕ್ಟೇರುಗಳಷ್ಟು ಒಳನಾಡು ಜಲ ಸಂಪನ್ಮೂಲಗಳೊಂದಿಗೆ 320 ಕಿಲೋ ಮೀಟರ್ ಉದ್ದದ ಕರಾವಳಿ ತೀರವನ್ನು ಹೊಂದಿದ್ದು, ಅದು ಮೀನುಗಾರಿಕೆ ಅಭಿವೃದ್ಧಿಗೆ ವಿಪುಲ ಅವಕಾಶವನ್ನು ಕಲ್ಪಿಸಿದೆ. ರಾಜ್ಯದಲ್ಲಿನ ಒಟ್ಟು ಮೀನು ಉತ್ಪಾದನೆಯು ಅಂದಾಜು 6 ಲಕ್ಷ ಟನ್‌ಗಳಷ್ಟಿದೆ. ಮೀನುಗಾರಿಕೆ ವಲಯದಲ್ಲಿ ಉದ್ಯೋಗ ಸೃಜಿಸುವುದಕ್ಕೆ ಮತ್ತು ವರಮಾನವನ್ನು ಹೆಚ್ಚಿಸುವುದಕ್ಕೆ ಅಗಾಧ ಅವಕಾಶವಿದೆ ಎಂಬುದನ್ನು ಮತ್ತು ಹೆಚ್ಚಿನ ರಫ್ತು ಸಾಮರ್ಥ್ಯಹೊಂದಿದೆ ಎಂಬುದನ್ನು ನನ್ನ ಸರ್ಕಾರ ಮನಗಂಡಿದೆ. ರಾಜ್ಯದಲ್ಲಿ ಮೀನುಗಾರಿಕೆ ಅಭಿವೃದ್ಧಿಯನ್ನು ಮತ್ತಷ್ಟು ಹೆಚ್ಚಿಸಲು ಸೂಕ್ತ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಕ್ಕೆ ತರಲಾಗುತ್ತಿದೆ. ಮೀನು ಕೆಡದಂತೆ ಸಂರಕ್ಷಿಸಿಡಲು "ಮತ್ಸ್ಯ ಜೋಪಾಸನೆ ಯೋಜನೆ"ಯ ಅಡಿಯಲ್ಲಿ ಹತ್ತು ಶೀತಲೀಕರಣ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ.
- ತೋಟಗಾರಿಕೆ ಬೆಳೆಗಳ ಉತ್ಪಾದಕತೆ ಮತ್ತು ಉತ್ಪನ್ನವನ್ನು ಹೆಚ್ಚಿಸುವುದಕ್ಕೆ ವಿಪುಲ ಅವಕಾಶಗಳಿವೆ. ಪ್ರಸಕ್ತ ವರ್ಷಾವಧಿಯಲ್ಲಿ, ತೋಟಗಾರಿಕೆ ಬೆಳೆ ಬೆಳೆಯುವ ಕ್ಷೇತ್ರವ್ಯಾಪ್ತಿಯನ್ನು 42,000 ಹೆಕ್ಟೇರುಗಳಿಗೆ ವಿಸ್ತರಿಸುವುದಕ್ಕಾಗಿ ಅರ್ಹ ರೈತರಿಗೆ ನೆರವನ್ನು ಒದಗಿಸಲಾಗಿದೆ; 51.49 ಲಕ್ಷ ಸಸಿ / ಕಸಿಗಳನ್ನು ವಿತರಿಸಲಾಗಿದೆ. ಪಾಲಿಹೌಸ್‌ಗಳಲ್ಲಿ ಅಧಿಕ ಮೌಲ್ಯದ ತೋಟಗಾರಿಕಾ ಬೆಳೆಗಳನ್ನು ಬೆಳೆಯಲು ಸುಮಾರು 60 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ.
- ನನ್ನ ಸರ್ಕಾರವು, ಸಕ್ಕರೆ ಕಾರ್ಖಾನೆಗಳು 2018ನೇ ಸಾಲಿನ ಏಪ್ರಿಲ್ ತಿಂಗಳಲ್ಲಿ ರೈತರಿಗೆ ಕೊಡಬೇಕಾಗಿದ್ದ 2135 ಕೋಟಿ





downloaded from: www.kpscvaani.com

# ರಾಮಕೃಷ್ಣಹೆಗ್ಡೆ ಹೇಳಿದ ಗಾಂಧಿಯ ಕಥನ

ಡಾ. ಎನ್. ಜಗದೀಶ್ ಕೊಪ್ಪ




" ಗಾಂಂಧೀಜಿ ಭಾರತದಲ್ಲಿ ಕೇವಲ ಒಬ್ಬ ವ್ಯಕ್ತಿಯಾಗಿ ಮಾತ್ರ ಬದುಕಿರಲಿಲ್ಲ. ಅತಿ ದೊಡ್ಡ ನೈತಿಕ ಶಕ್ತಿಯಾಗಿ ಬದುಕಿದ್ದರು. ಅನಕ್ಷರಸ್ಥರ ನಾಡಾಗಿದ್ದ ಅಂದಿನ ಭಾರತದಲ್ಲಿ ಯಾವೊಂದು ಮಾಧ್ಯಮಗಳ ನೆರವಿಲ್ಲದೆ ಮಹಾತ್ಮನ ಬದುಕು ಮತ್ತು ಸಂದೇಶಗಳು ಬಾಯಿಂದ ಬಾಯಿಗೆ ಹರಡುವುದರ ಮೂಲಕ ದೇಶದ ಜನರನ್ನು ಸದಾ ಎಚ್ಚರದಲ್ಲಿಡುವುದರ ಜೊತೆಗೆ ಜಾತಿ, ಧರ್ಮದ ಸೋಂಕಿಲ್ಲದೆ ಬದುಕುವಂತೆ ಪ್ರೇರೇಪಿಸುತ್ತಿದ್ದವು.ಇದಕ್ಕೆ ಉದಾಹರಣೆಯಾಗಿ ಮಾಜಿ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗ್ಡೆಯವರು ಹೇಳಿರುವ ತಮ್ಮ ಬಾಲ್ಯದ ಅನುಭವ ಮನಕಲಕುವಂತಿದ್ದು ನಮ್ಮ ಮುಂದಿದೆ"

ಇದು ಸುಮಾರು ಹದಿನೇಳು ವರ್ಷಗಳ ಹಿಂದಿನ ಘಟನೆ. ರಾಮಕೃಷ್ಣಹೆಗ್ಡೆಯವರ ನೇತೃತ್ವದ ಜನತಾ ಸರ್ಕಾರ ರಾಜ್ಯದಲ್ಲಿ ಅಧಿಕಾರ ಕಳೆದುಕೊಂಡು, ಎಸ್.ಎಂ. ಕೃಷ್ಣ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಿತ್ತು. ಅಧಿಕಾರ ಕಳೆದುಕೊಂಡ ನಂತರ ಹೆಗಡೆಯವರು ಮೇಲಿಂದ ಮೇಲೆ ಉತ್ತರ ಕರ್ನಾಟಕ ಪ್ರವಾಸ ಕೈಗೊಳ್ಳುತ್ತಿದ್ದರು. ಅವರ ಜೊತೆಯಲ್ಲಿ ಎಂ.ಪಿ. ಪ್ರಕಾಶ್, ಭೈರೇಗೌಡ, ಪಿ.ಜಿ.ಆರ್ ಸಿಂಧ್ಯಾ ಇವರೆಲ್ಲರೂ ಸದಾ ಇರುತ್ತಿದ್ದರಿಂದ ಹುಬ್ಬಳ್ಳಿ ನಗರಕ್ಕೆ ಬಂದರೆ, ಪತ್ರಕರ್ತರ ಜೊತೆ ಒಂದು ಖಾಸಗಿ ಚರ್ಚೆ, ಊಟ ಇವೆಲ್ಲವೂ ಸಾಮಾನ್ಯವಾಗಿತ್ತು.

ಆ ಕಾಲದಲ್ಲಿ ಈಗಿನ ಹಾಗೆ ಪತ್ರಕರ್ತರಿಗೆ ಯಾವುದೆ ಧಾವಂತ ಇರಲಿಲ್ಲ. ಜಿಲ್ಲಾ ಅಥವಾ ನಗರ ಕೇಂದ್ರಗಳಲ್ಲಿ ಐದಾರು ಮಂದಿ ಪತ್ರಕರ್ತರು ಇರುತ್ತಿದ್ದರು. ಯಾವುದೇ ರಾಜಕಾರಣಿ ಹುಬ್ಬಳ್ಳಿಗೆ ಬಂದರೆ, ಸ್ವತಃ ಫೋನ್ ಮಾಡಿ ಆಹ್ವಾನ ನೀಡುತ್ತಿದ್ದರು., ಒಂದು ಸುದ್ದಿಗೋಷ್ಠಿಯಾಗಲಿ, ಮಾತುಕತೆಯಾಗಲಿ, ಪರಸ್ಪರ ಚರ್ಚೆಯಾಗಲಿ ಪ್ರಶಾಂತ ವಾತಾವರಣದಲ್ಲಿ ನೆರವೇರುತ್ತಿತ್ತು. ಎಷ್ಟೋ ಬಾರಿ ತಮ್ಮ ಮನದ ಸಂಕಟಗಳನ್ನು, ಮತ್ತು ತಾವು ಅಧಿಕಾರದಲ್ಲಿ ಮಾಡಿದ ತಪ್ಪುಗಳನ್ನು ಪತ್ರಕರ್ತರೊಂದಿಗೆ ಬಿಚ್ಚು ಮನಸ್ಸಿನಿಂದ ಹಂಚಿಕೊಳ್ಳುತ್ತಿದ್ದರು. ಸಲಹೆ ಕೇಳುತ್ತಿದ್ದರು. ಅವರು ಹೇಳಿದ ಮಾತುಗಳನ್ನು ಆಫ್ ದ ರೆಕಾರ್ಡ್ ಎಂಬ ನೈತಿಕ ಗೆರೆಯೊಳಗೆ ಪತ್ರಕರ್ತರು ಹೊರಜಗತ್ತಿಗೆ ತಿಳಿಯದಂತೆ ಮುಚ್ಚಿ ಇಡುತ್ತಿದ್ದರು. ಈಗಿನ ರೀತಿ ಬ್ರೇಕಿಂಗ್ ನ್ಯೂಸ್ ಹೆಸರಿನಲ್ಲಿ ವೈಯಕ್ತಿಕ ಚಾರಿತ್ರ್ಯದ ವಧೆಗೆ ಇಳಿಯುತ್ತಿರಲಿಲ್ಲ. ಅವರು ಆತ್ಮೀಯ ಬಂಧು ಅಥವಾ ಗೆಳೆಯ ಎಂದು ಪರಿಗಣಿಸಿ ಹೇಳಿದ ಮಾತುಗಳ ಗೌಪ್ಯ ಕಾಪಾಡಬೇಕಾದ್ದು ಪತ್ರಕರ್ತರ ನೈತಿಕ ಕರ್ತವ್ಯವಾಗಿತ್ತು.

ಇಂತಹದೇ ಒಂದು ದಿನ ರಾಮಕೃಷ್ಣ ಹೆಗ್ಡೆಯವರು ಹುಬ್ಬಳ್ಳಿಗೆ ಬಂದರು. ಆ ದಿನ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಮಾತೃ ಸಂಸ್ಥೆಯಾದ ಲೋಕ ಶಿಕ್ಷಣ ಟ್ರಸ್ಟ್, ಕೃತಿಗಳ ಬಿಡುಗಡೆ ಕಾರ್ಯಕ್ರಮ ಆಯೋಜಿಸಿತ್ತು. ಆಗ ತಾನೆ ಲೇಖಕಿಯಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದ,ಮೂಲತಃ ಹುಬ್ಬಳ್ಳಿಯವರಾದ ಇನ್ಫೋಸಿಸ್ ಸಂಸ್ಥೆಯ ಸುಧಾ ಮೂರ್ತಿಯವರ ಪ್ರವಾಸ ಕಥನ ಮತ್ತು ಉತ್ತರ ಕನ್ನಡ ಜಿಲ್ಲೆಯ ಕರ ನಿರಾಕರಣೆ ಚಳುವಳಿಯ ಇತಿಹಾಸ ಕುರಿತ ಎರಡು ಪುಸ್ತಕಗಳನ್ನು ಹೆಗ್ಡೆಯವರು ಬಿಡುಗಡೆ ಮಾಡುವ ಕಾರ್ಯಕ್ರಮವಿತ್ತು. ಸಂಜೆ ಆರು ಗಂಟೆಗೆ ಇದ್ದ ಕಾರ್ಯಕ್ರಮಕ್ಕೆ ಐದು ಗಂಟೆಗೆ ಬನ್ನಿ, ನಿಮ್ಮ ಜೊತೆ ಒಂದಿಷ್ಟು ಖಾಸಾಗಿಯಾಗಿ ಮಾತನಾಡುವ ಕಾರ್ಯಕ್ರಮವಿದೆ ಎಂದು ಹೆಗ್ಡೆಯವರು ಪತ್ರಕರ್ತ ಮಿತ್ರರಿಗೆ ಸಂದೇಶ ರವಾನಿಸಿದ್ದರು. ನಾವು ಸಂಯುಕ್ತ ಕರ್ನಾಟಕ ಪತ್ರಿಕೆಯ ಕಛೇರಿಗೆ ಹೋದಾಗ ಲೋಕಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರ ಕಛೇರಿಯಲ್ಲಿ ಹೆಗ್ಡೆಯವರು ನಮಗಾಗಿ ಕಾಯುತ್ತಿದ್ದರು. ನಾವು ಯಾವುದೋ ರಾಜಕೀಯ ಬಾಂಬ್ ಸಿಡಿಸಬಹುದೆಂದು ಲೆಕ್ಕಾಚಾರ ಹಾಕಿದ್ದೆವು. ಇದಕ್ಕೆ ತದ್ವಿರುದ್ಧವಾಗಿ ತಮ್ಮ ತಣ್ಣನೆಯ ಶಾಂತ ಧ್ವನಿಯಲ್ಲಿ ಮಾತನಾಡಿದ ಹೆಗ್ಡೆಯವರು, ಈ ದಿನ ನನ್ನ ನೆಲದ " ಕರ ನಿರಾಕರಣೆ ಚಳುವಳಿಯ ಪುಸ್ತಕ ಬಿಡುಗಡೆ ಮಾಡುವ ಸಂದರ್ಭದಲ್ಲಿ ನನ್ನದೊಂದು ಬಾಲ್ಯದ ನೆನಪು ಎಡಬಿಡದೆ ಕಾಡುತ್ತಿದೆ ಅದನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಕರೆದೆ ಎಂದರು. ನಮಗೆ ಉಪ್ಪಿಟ್ಟು, ಕಾಫಿ ತರಿಸಿ, ಅವರು ತಮ್ಮ ಬಾಲ್ಯಕ್ಕೆ ಜಾರಿದರು.  ಅವರ ಮುಂದಿನ ಮಾತುಗಳನ್ನು ಹೆಗ್ಡೆಯವರ ಮಾತುಗಳಲ್ಲಿ ಕೇಳಿ...

" ಅವು ಸ್ವಾತಂತ್ರ್ಯ ಹೋರಾಟದ ದಿನಗಳು. 1930 ರಲ್ಲಿ ಗಾಂಧೀಜಿ ಬೆಳಗಾವಿ ನಗರಕ್ಕೆ ಬಂದು ಹೋದ ನಂತರ ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ಕಿಚ್ಚು ಪ್ರತಿ ಮನೆ ಮತ್ತು ಮನಕ್ಕೂ ಕಾಡ್ಗಿಚ್ಚಿನಂತೆ ಹರಡಿತ್ತು. ನನಗಾಗ ಸುಮಾರು ಏಳು ಅಥವಾ ಎಂಟು ವರ್ಷ. ಸಿದ್ದಾಪುರದ ಬಳಿಯ ಗದ್ದೆಯಲ್ಲಿದ್ದ ನಮ್ಮ ಹೆಂಚಿನ ಮನೆ ಆ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಅಡಗುತಾಣವಾಗಿತ್ತು. ಶಿವಮೊಗ್ಗ ಮತ್ತು ಉತ್ತರಕನ್ನಡ ಜಿಲ್ಲೆಯ ಗಡಿ ಭಾಗದಲ್ಲಿ ಇದ್ದ ಕಾರಣ, ನಮ್ಮ ಮನೆ ಏಕ ಕಾಲಕ್ಕೆ ಎರಡು ಜಿಲ್ಲೆಗಳ ಸ್ವಾತಂತ್ರ್ಯ ಹೋರಾಟಗಾರರ ಮೆಚ್ಚಿನ ತಾಣವಾಗಿತ್ತು. ಶಿವಮೊಗ್ಗ ಪೊಲೀಸರು ಬೆನ್ನಟ್ಟಿದರೆ ಗಡಿ ದಾಟಿ ನಮ್ಮ ಮನೆಗೆ ಬರುತ್ತಿದ್ದರು. ಅದೇ ರೀತಿ ಉತ್ತರ ಕನ್ನಡ ಜಿಲ್ಲೆಯ ಪೊಲೀಸರು ಬೆನ್ನಟ್ಟಿದರೆ,ನಮ್ಮ ಜಿಲ್ಲೆಯ ಹೋರಾಟಗಾರರು ನಮ್ಮ ಗದ್ದೆಯ ಬೇಲಿ ನೆಗೆದು ಶಿವಮೊಗ್ಗ ಗಡಿ ಪ್ರವೇಶ ಮಾಡಿ ಓಡಿ ಹೋಗುತ್ತಿದ್ದರು. ನಮ್ಮ ಮನೆಯ ಮೇಲೆ ಅಪ್ಪ ಇವರಿಗಾಗಿ ಒಂದು ಅಟ್ಟ ಸಿದ್ಧಪಡಿಸಿದ್ದರು. ಯಾರೇ ನಮ್ಮ ಮನೆಗೆ ಬಂದರೂ ಅಟ್ಟದ ಮೇಲಿನ ಕಿಟಕಿಯಿಂದ ದೂರದಿಂದ ಅವರು ಬರುತ್ತಿರುವಾಗಲೆ ತಿಳಿದು ಹೋಗುತ್ತಿತ್ತು, ಈಗಾಗಿ ನಮ್ಮ ಮನೆ ಆಗಿನ ಬ್ರಿಟೀಷ್ ಸರ್ಕಾರಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿತ್ತು, ಅಂತಿಮವಾಗಿ ಧಾರವಾಡದಲ್ಲಿ ಇದ್ದ ಬ್ರಿಟೀಷ್ ಜಿಲ್ಲಾಧಿಕಾರಿಯ ಆದೇಶದ ಮೇರೆಗೆ ಒಂದು ದಿನ ಏಕಾ ಏಕಿ



ಮನೆಗೆ ನುಗ್ಗಿದ ಪೊಲೀಸರು ಇಡೀ ಮನೆಯನ್ನು ಧ್ವಂಸಗೊಳಿಸಿ ದವಸ ಧಾನ್ಯಗಳನ್ನು ಹೊತ್ತೊಯ್ದರು. ನಾನು, ನನ್ನ ಅಣ್ಣ ಗಣೇಶ, ಅಪ್ಪ, ಅಮ್ಮ ಅಕ್ಷರಶಃ ಬಟಾ ಬಯಲಿನಲ್ಲಿ ಅನಾಥರಾಗಿ ನಿಂತಿದ್ದೆವು. ಸುದ್ದಿ ತಿಳಿದ ಸುತ್ತ ಮುತ್ತಲಿನ ಊರಿನ ಜನ ಅಕ್ಕಿ, ಬೇಳೆ, ಉಪ್ಪು, ಕಾರದಪುಡಿ, ಹುಣಸೆ ಹಣ್ಣು ತಂದುಕೊಟ್ಟರು. ಅಪ್ಪ ನನ್ನನ್ನು ತನ್ನ ಹೆಗಲ ಮೇಲೆ ಕೂರಿಸಿಕೊಂಡು ಸಿದ್ದಾಪುರದ ಸಂತೆಗೆ ಹೋಗಿ ಒಂದಿಷ್ಟು ಮಡಕೆಗಳನ್ನು ಕೊಂಡು ತಂದರು. ಅಮ್ಮ ಬಯಲಿನಲ್ಲಿ ಕಲ್ಲುಗಳ ಮೇಲೆ ಮಡಕೆಗಳನ್ನು ಇಟ್ಟು ಅನ್ನ ಬೇಯಿಸಿ, ತರಕಾರಿ ಇಲ್ಲದ ಬೇಳೆ ಸಾರು ಮಾಡಿದರು. ಆ ದಿನ ನಮ್ಮ ಇಡೀ ಕುಟುಂಬ ನಮ್ಮ ಊರಿನ ಜನ ತಂದು ಕೊಟ್ಟ ದಿನಸಿಯಲ್ಲಿ ಊಟ ಮಾಡಿ ಬಯಲಿನಲ್ಲಿ ಮಲಗಿತು. ಅಕ್ಕಿ ತಂದುಕೊಟ್ಟವರು ಯಾವ ಜಾತಿ? ಬೇಳೆ ಕೊಟ್ಟವರು ಯಾವ ಜಾತಿ? ಎಂದು ನಾವ್ಯಾರು ಪ್ರಶ್ನಿಸಿಕೊಳ್ಳಲಿಲ್ಲ, ಅಥವಾ ಚಿಂತಿಸಲಿಲ್ಲ. ನನ್ನ ಕುಟುಂಬ ಹೀಗೆ ಬೀದಿಗೆ ಬಿದ್ದು ಹೋಯಿತಲ್ಲ ಎಂದು ಅಪ್ಪನ ಮುಖದಲ್ಲಾಗಲಿ. ಅಮ್ಮನ ಮುಖದಲ್ಲಾಗಲಿ ನೋವಿನ ಎಳೆಗಳಿರಲಿಲ್ಲ. ಊರಿನ ಜನ ತಂದು ಕೊಟ್ಟ ಕಂಬಳಿ ಹೊದ್ದು ಮಲಗುವಾಗ, ಅಪ್ಪ ಗಾಂಧೀಜಿಯವರು ಅರೆ ಬೆತ್ತಲಾಗಿ ದೇಶ ತಿರುಗುವ ಕತೆ ಹೇಳುತ್ತಾ ನಮ್ಮನ್ನು ತಟ್ಟಿ ಮಲಗಿಸುತ್ತಿದ್ದರು"

ರಾಮಕೃಷ್ಣ ಹೆಗ್ಡೆಯವರು ತೀರಾ ಭಾವುಕರಾಗಿ ಈ ಕಥೆ ಹೇಳುತ್ತಿದ್ದಾಗ ಧಾರಾಕಾರವಾಗಿ ಅವರ ಕಣ್ಣುಗಳಿಂದ ಸುರಿಯುತ್ತಿದ್ದ ಕಣ್ಣೀರು ಅವರ ಮುಖದ ಮೇಲಿನ ಗಡ್ಡದಲ್ಲಿ ಲೀನವಾಗುತ್ತಿದ್ದವು. ಅವರ ಕಥೆ ಕೇಳಿದ ನಮ್ಮ ಕಣ್ಣುಗಳಲ್ಲೂ ನೀರು ಹರಿಯುತ್ತಿದ್ದವು. ಇದು ರಾಮಕೃಷ್ಣ ಹೆಗ್ಡೆಯವರ ಕುಟುಂಬದ ಕಥೆ ಮಾತ್ರವಲ್ಲ, ಉತ್ತರ ಕರ್ನಾಟಕದ ಮತ್ತು ಉತ್ತರ ಕನ್ನಡ ಜಿಲ್ಲೆಯ ಪ್ರತಿ ಮನೆಗಳಲ್ಲೂ ಇಂತಹ ನೂರಾರು ಕಥನಗಳಿವೆ. ನಮ್ಮ ನಡುವಿನ ಹಿರಿಯ ವಿಮರ್ಶಕ ಪ್ರೊ. ಜಿ.ಎಚ್. ನಾಯಕರ ಬಾಳು" ಎಂಬ ಆತ್ಮ ಕಥನದಲ್ಲಿ ಅಂಕೋಲಾ ತಾಲ್ಲೂಕಿನಲ್ಲಿ ಅವರ ಕುಟುಂಬವೂ ಸೇರಿದಂತೆ, ನೂರಾರು ಕುಟುಂಬಗಳು ಬ್ರಿಟೀಷ್ ಸರ್ಕಾರಕ್ಕೆ ಕಂದಾಯ ಪಾವತಿಸಲು ನಿರಾಕರಿಸಿ, ಜೈಲು ಸೇರಿ, ಕುಟುಂಬವನ್ನು ಬೀದಿ ಪಾಲು ಮಾಡಿ, ತಾವು ಬೀದಿ ಪಾಲಾದ ತ್ಯಾಗಮಯ ಹೋರಾಟದ ಕಥನಗಳಿವೆ. ತಾವೆಂದೂ ನೋಡದ, ತಾವೆಂದೂ ಕೇಳದ ಗಾಂಧಿ ಎಂಬ ವ್ಯಕ್ತಿಯ ಸಂದೇಶವನ್ನು ಮತ್ತು ಅವರ ಕರೆಯನ್ನು ತಮ್ಮ ಎದೆಗಿಳಿಸಿಕೊಂಡು ಹೋರಾಡಿದ ಈ ಮಹಾ ಮಹಿಮರನ್ನು ನೆನದಾಗ, ಗಾಂಧೀಜಿಯ ಅಂತಃಶಕ್ತಿ ಎಂತಹದ್ದು ಎಂಬುದು ನಮಗೆ ಅರಿವಾಗುತ್ತದೆ. ■





downloaded from: www.kpscvaani.com



# ವಿಶ್ವ ಧೂಮಪಾನ ವಿರೋಧಿ ದಿನ

– ಡಾ. ಗುರಲಿಂಗಪ್ಪ ಅಂಕದ

**ಧೂ**ಮಪಾನ ನಿಷೇಧಿಸಿದೆ', 'ತಂಬಾಕು ಕೊಲ್ಲುತ್ತದೆ' ಎಂಬ ಸೂಚನಾ ಫಲಕಗಳನ್ನು ನಾವು ಪ್ರತಿನಿತ್ಯ ನೋಡುತ್ತೇವೆ. 'ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕರ' ಎಂದು ಸಿಗರೇಟು, ಗುಟಕಾ ಮುಂತಾದ ತಂಬಾಕುಯುಕ್ತ ಪದಾರ್ಥಗಳ ಪಾಕೀಟಿನ ಮೇಲೆ ಓದುತ್ತೇವೆ ಜೊತೆಗೆ ಶ್ವಾಸಕೋಶಗಳ ಹಾಳಾದ ಚಿತ್ರ, ಚೇಳಿನ-ಅಸ್ಥಿಪಂಜರದ ಚಿತ್ರ ಹೀಗೆ ಹಲವಾರು ಭಯಾನಕ ಚಿತ್ರಗಳನ್ನೂ ಕಾಣುತ್ತೇವೆ. ಇದರ ಅರ್ಥ ತಂಬಾಕು ಸೇವನೆ ಚೇಳಿನ ವಿಷಕ್ಕಿಂತಲೂ ಹೆಚ್ಚು ವಿಷಕಾರಿ ಎಂದು ತಿಳಿದೂ ಜನರು ಇದಕ್ಕೆ ದಾಸರಾಗಿರುವುದು ನಿಜಕ್ಕೂ ವಿಷಾದನೀಯ.

ಇಂಗ್ಲೆಂಡಿನ ಪ್ರಮುಖರು 1984 ರಲ್ಲಿ ಧೂಮಪಾನಕ್ಕೆ ವಿರೋಧ ವ್ಯಕ್ತಪಡಿಸಿ ಇದಕ್ಕಾಗಿ ರಾಷ್ಟ್ರೀಯ ಮಟ್ಟದಲ್ಲಿ ಮಾರ್ಚ್ ತಿಂಗಳ ಎರಡನೇ ಬುಧುವಾರದಂದು "ಧೂಮಪಾನ ವಿರೋಧಿ ದಿನ"ವಾಗಿ ಆಚರಿಸಬೇಕೆಂದು ನಿರ್ಣಯಿಸಿದರು. ಧೂಮಪಾನದಿಂದ ತಮ್ಮ ಮತ್ತು ಇತರರ ಆರೋಗ್ಯ ಹಾಳು ಮಾಡುತ್ತಿರುವ ವಿಷಯ ಜನರಿಗೆ ತಿಳಿಸುವುದೇ ಇದರ ಮುಖ್ಯ ಉದ್ದೇಶವಾಗಿದೆ.

ಭಾರತದಲ್ಲಿ ತಂಬಾಕಿನ ಅನೇಕ ಉತ್ಪನ್ನಗಳು ಮಾರುಕಟ್ಟೆಯಲ್ಲಿದ್ದು, ಬೀಡಿ, ಸಿಗರೇಟ್, ಗುಟ್ಕಾ ಇವು ಧೂಮಪಾನ ರೂಪದಲ್ಲಿ ತಂಬಾಕು ಸೇವನೆಯ ವಿಧಗಳು. ಇವುಗಳಲ್ಲಿ 4 ಸಾವಿರಕ್ಕೂ ಹೆಚ್ಚು ರಾಸಾಯನಿಕಗಳು ಮತ್ತು ಅಮೋನಿಯಾ, ಅರ್ಸೆನಿಕ್, ಕಾರ್ಬನ್ ಮೊನಾಕ್ಸೈಡ್, ಹೈಡ್ರೋಜನ್, ನ್ಯಾಪ್ತಲಿನ್, ನಿಕೋಟಿನ್, ಟಾರ್ ಮುಂತಾದ 60 ಕ್ಕೂ ಹೆಚ್ಚು ಕ್ಯಾನ್ಸರ್ ಕಾರಕ ವಸ್ತುಗಳಿವೆ. ಇನ್ನು ಧೂಮರಹಿತ ಉತ್ಪನ್ನಗಳಾದ ಅಗಿಯುವಂತಹ ಜರ್ದಾ, ಖೈನೀ, ಗುಟ್ಕಾ, ತಂಬಾಕುಯುಕ್ತ ಪಾನಮಸಾಲಾ, ಮಾವಾ ಇತ್ಯಾದಿಗಳಲ್ಲಿ ನಿಕೋಟಿನ್, ಫಾರ್ಮಾಲ್ಡಿಹೈಡ್, ಮೆಂಥಾಲ್, ಕ್ಯಾಡ್ಮಿಯಮ್ ಮತ್ತು ಸತುಗಳಿರುತ್ತವೆ.

ಮೊದಮೊದಲು ಕೇವಲ ಶೋಕಿಗಾಗಿ ಸಿಗರೇಟ್, ಗುಟ್ಕಾ, ತಂಬಾಕು ಸೇವನೆ ಪ್ರಾರಂಭವಾಗಿ ನಂತರ ಅವು ಚಟವಾಗಿ ಪರಿಣಮಿಸಿ ಬಿಡಲು ಸಾಧ್ಯವೇ ಇಲ್ಲ ಎಂಬ ಹಂತಕ್ಕೆ ತಲುಪುವರು. ಅತಿಯಾಗಿ ತಂಬಾಕು ಸೇವಿಸುವವರು ಇತರರಿಗಿಂತ ಹೆಚ್ಚು ಚಹಾ, ಕಾಫಿ ಮದ್ಯ ಸೇವಿಸುತ್ತಾರೆ. ಇಂಥವರಿಗೆ ವ್ಯಾಯಾಮ ಮಾಡಲಾಗುವುದಿಲ್ಲ, ಮಾಡಿದರೂ ಬೇಗ ಸುಸ್ತಾಗುತ್ತಾರೆ, ಉಸಿರಾಟದ ತೊಂದರೆ, ಓಡುವಾಗ ಆಟವಾಡುವಾಗ ಬಳಲುತ್ತಾರೆ. ಯುವಕರು ಮತ್ತು ಮಧ್ಯವಯಸ್ಕರು ಖಿನ್ನತೆಗೆ ತುತ್ತಾಗಿ ತಮ್ಮ ಜೀವನ ಹಾಳುಮಾಡಿಕೊಳ್ಳುತ್ತಿದ್ದಾರೆ. 'ಒಬ್ಬ ತಾಯಿ ಮಗುವಿಗೆ ಹಾಲುಣಿಸುವುದನ್ನು ನಿಲ್ಲಿಸಿದರೆ ಮಗು ಕೂಡಲೇ ಹೇಗೆ ಚಡಪಡಿಸುತ್ತದೋ ಹಾಗೆ ತಂಬಾಕು ಸೇವನೆ ನಿಲ್ಲಿಸಿದ ಮನುಷ್ಯ ಚಡಪಡಿಸುತ್ತಾನೆ'.

ಸಿಗರೇಟ್ ಸೇದುವುದರಿಂದ ಮತ್ತು ತಂಬಾಕು ಅಗಿಯುವುದರಿಂದ ಏನೋ ಒಂಥರಾ ಖುಷಿ-ಕಿಕ್ ಕೊಟ್ಟು ಮೆದುಳು ಚುರುಕುಗೊಂಡಂತೆ ಭಾಸವಾಗುವುದು. ವಿಚಾರಶಕ್ತಿ ತುಂಬಾ ರಚನಾತ್ಮಕವಾಗಿ ಸಾಗುವುದು. ಇದರಿಂದ ಇನ್ನಷ್ಟು ಸೇವಿಸುವಂತೆ ಪ್ರಚೋದಿಸುತ್ತದೆ. ಸಿಗರೇಟ್-ತಂಬಾಕು ಸೇವನೆಯ ನಂತರ ವ್ಯಕ್ತಿಯ ರಕ್ತದೊತ್ತಡ ಹಠಾತ್ತಾಗಿ ಸ್ವಲ್ಪ ಹೆಚ್ಚಾಗುವುದು. ಆದರೆ ದೇಹದ ಎಲ್ಲ ರಕ್ತನಾಳಗಳಲ್ಲಿರುವ ರಕ್ತಣಾ ಪೂರೆಗೆ ಧಕ್ಕೆ ಬಂದಿರುತ್ತದೆ. ಇದರಿಂದ ವಿಶೇಷವಾಗಿ ಪಾದಗಳಿಗೆ ರಕ್ತದ ಹರಿವನ್ನು ಕಡಿಮೆ ಮಾಡಿ ಕಾಲಿನಲ್ಲಿ ಗ್ಯಾಂಗ್ರೀನ್(ಸ್ಮೋಕರ್ಸ್ ಗ್ಯಾಂಗ್ರೀನ್) ಆಗುವ ಸಾಧ್ಯತೆ ಹೆಚ್ಚಾಗುವುದು. ರಕ್ತದಲ್ಲಿರುವ ಒಳ್ಳೆಯ ಕೊಬ್ಬಿನಾಂಶವನ್ನು ತಂಬಾಕು ಕಡಿಮೆ ಮಾಡುತ್ತದೆ. ಸಿಗರೇಟ್-ತಂಬಾಕು ಸೇವನೆ ಹೆಚ್ಚಾದಂತೆ ಹೃದಯದ ಕಾಯಿಲೆಗಳು, ಕೆಮ್ಮು, ಅಸ್ತಮಾ, ಕ್ಷಯ, ಲಕ್ವ ಮತ್ತು ಮುಖ್ಯವಾಗಿ ಕ್ಯಾನ್ಸರ್ ರೋಗಗಳ ಸಾಧ್ಯತೆ ಹೆಚ್ಚಾಗುವುದು. ಸಾವು ಇತರರಿಗಿಂತ 2-4 ಪಟ್ಟು ಬೇಗನೆ ಸಂಭವಿಸುವುದು. ಇನ್ನು ಮಹಿಳೆಯರಲ್ಲಿ ಅಂಡಗಳ ಫಲವತ್ತತೆಯಲ್ಲಿ ಕ್ಷೀಣತೆ, ಗರ್ಭಪಾತ, ಕಡಿಮೆ ತೂಕದ ಶಿಶು ಜನನ, ಗರ್ಭಕಂಠದ ಕ್ಯಾನ್ಸರ್ ಕಂಡುಬರುತ್ತವೆ.

ತಂಬಾಕಿನಿಂದ ಮುಖ್ಯವಾಗಿ ಬಾಯಿ, ಗಂಟಲು, ಶ್ವಾಸಕೋಶ, ಅನ್ನನಾಳ, ಕರುಳು, ಮೂತ್ರಪಿಂಡ ಇವೇ ಮೊದಲಾದ ಅಂಗಗಳು ಕ್ಯಾನ್ಸರ್‌ಗೆ ತುತ್ತಾಗುತ್ತವೆ. ಸಾಮಾನ್ಯವಾಗಿ ಧೂಮಪಾನ ಮಾಡುವವರು ಹೆಚ್ಚಾಗಿ ಶ್ವಾಸಕೋಶದ ಕ್ಯಾನ್ಸರ್‌ಗೆ ತುತ್ತಾಗುತ್ತಾರೆ ಎಂಬ ಭೀತಿ ಜನರಲ್ಲಿದೆ. ಇದು ಸತ್ಯವಾದರೂ ಎಲ್ಲ ಧೂಮಪಾನಿಗಳೂ ಶ್ವಾಸಕೋಶದ ಕ್ಯಾನ್ಸರ್‌ಗೆ ತುತ್ತಾಗುತ್ತಾರೆ ಎಂದಲ್ಲ. ಸಂಶೋಧನೆಗಳ ಪ್ರಕಾರ ಸಿಗರೇಟ್ ಸೇದುವವರಿಗೆ ಈ ವ್ಯಾಧಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವುದು ಗೊತ್ತಾಗಿದೆ. ನಾನು ಸಿಗರೇಟ್ ಸೇದುವುದಿಲ್ಲ ಎಂದು ನಿಶ್ಚಿಂತರಾದರೆ ಸಾಲದು! ಕುಟುಂಬದಲ್ಲಿರುವ ಒಬ್ಬ ಧೂಮಪಾನಿಯಿಂದ ಇತರ ಸದಸ್ಯರಿಗೂ ತೊಂದರೆ ತಪ್ಪಿದ್ದಲ್ಲ. ಪ್ರತೀ ದಿನ 2 ಪ್ಯಾಕ್ ಧೂಮಪಾನ ಮಾಡುವ ವ್ಯಕ್ತಿಯೊಂದಿಗೆ ಜೀವಿಸುವ ವ್ಯಕ್ತಿಯೂ ಪರೋಕ್ಷವಾಗಿ ದಿನಕ್ಕೆ 3 ಸಿಗರೇಟ್ ಸೇದಿದಂತಾಗುತ್ತದೆ. ಪರೋಕ್ಷ ಧೂಮಪಾನ ಮಾಡಿದವರ ಮೂತ್ರ ಪರೀಕ್ಷೆಯಿಂದ ಅವರ ಮೂತ್ರದಲ್ಲಿ ನಿಕೋಟಿನ್ ಅಂಶ ಕಂಡುಬಂದಿದೆ. ಈ ಪರೋಕ್ಷ ಧೂಮಪಾನಿಗಳಿಗೆ 'ಪ್ಯಾಸೀವ್ ಸ್ಮೋಕರ್ಸ್' ಎನ್ನುವರು.



ಜನಸಾಮಾನ್ಯರನ್ನು ತಂಬಾಕಿನ ದುಷ್ಪರಿಣಾಮಗಳಿಂದ ರಕ್ಷಿಸಲು ಭಾರತ ಸರ್ಕಾರವು ಒಂದು ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾಯ್ದೆಯನ್ನು ಜಾರಿಗೊಳಿಸಿದೆ. ಈ ಕಾಯ್ದೆಯಡಿ

ಸಾರ್ವಜನಿಕ ಪ್ರದೇಶ ಹಾಗು ಕೆಲಸ ಮಾಡುವ ಸ್ಥಳಗಳಲ್ಲಿ ಧೂಮಪಾನ ಮಾಡುವುದು, ತಂಬಾಕು ಉತ್ಪನ್ನಗಳ ಜಾಹೀರಾತು ನೀಡುವುದು, 18 ವರ್ಷದೊಳಗಿನ ಮಕ್ಕಳಿಗೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದು, ಶಾಲಾ ಕಾಲೇಜುಗಳ 100 ಅಡಿಗಳ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದು, ತಂಬಾಕು ಉತ್ಪನ್ನಗಳ ಮೇಲೆ ಚಿತ್ರಗಳಿಂದ ಕೂಡಿದ ಎಚ್ಚರಿಕೆಯನ್ನು ಹಾಕದೇ ಇರುವುದು ಅಪರಾಧವಾಗುತ್ತವೆ.

**ಧೂಮಪಾನ ತ್ಯಜಿಸುವುದರಿಂದ ಆಗುವ ಲಾಭಗಳು:**

ಧೂಮಪಾನ ಬಿಟ್ಟ 2 ಗಂಟೆಗಳ ನಂತರ-ದೇಹದಿಂದ ನಿಕೋಟಿನ್ ಅಂಶ ಮರೆಯಾಗುತ್ತದೆ, 12 ಗಂಟೆಗಳ ನಂತರ-ಕಾರ್ಬನ್ ಮೊನಾಕ್ಸೈಡ್ ದೇಹದಿಂದ ಮರೆಯಾಗಿ ಶ್ವಾಸಕೋಶದ ಚಟುವಟಿಕೆ ಹೆಚ್ಚಾಗುತ್ತದೆ, 2 ತಿಂಗಳ ನಂತರ-ಶ್ವಾಸಕೋಶ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ, ಮತ್ತು ಅಂಗಾಂಗಗಳಿಗೆ ರಕ್ತ ಚಲನೆ ವೃದ್ಧಿಸುತ್ತದೆ. 12 ತಿಂಗಳ ನಂತರ-

**ತಂಬಾಕು ಸಂಬಂಧಿತ ಅಂಕಿಅಂಶಗಳು:**

- ವಿಶ್ವದಾದ್ಯಂತ ತಡೆಗಟ್ಟಬಹುದಾದ ಕಾಯಿಲೆ ಮತ್ತು ಮರಣಗಳ ಕಾರಣಗಳಲ್ಲಿ ತಂಬಾಕು ಸೇವನೆಯು ಏಕೈಕ ಪ್ರಮುಖ ಕಾರಣವಾಗಿದೆ.
- ಪ್ರತೀ ವರ್ಷ ವಿಶ್ವದಾದ್ಯಂತ 55 ಲಕ್ಷಕ್ಕೂ ಹೆಚ್ಚು ಜನರು ತಂಬಾಕು ಸೇವನೆಯಿಂದ ಸಾಯುತ್ತಿದ್ದಾರೆ.
- ಪ್ರತೀ ವರ್ಷ ಭಾರತದಲ್ಲಿ 10 ಲಕ್ಷ ಜನರು ತಂಬಾಕು ಸೇವನೆಯಿಂದ ಸಾಯುತ್ತಿದ್ದಾರೆ.
- ಇದು ಏಡ್ಸ್, ಕ್ಷಯ ಹಾಗೂ ಮಲೇರಿಯಾ ಈ ಮೂರು ರೋಗಗಳಿಂದ ಒಟ್ಟಾರೆಯಾಗಿ ಸಾಯುವ ಜನರಿಗಿಂತ ಹೆಚ್ಚಿನ ಸಂಖ್ಯೆಯಾಗಿದೆ.
- ತಂಬಾಕಿನಿಂದ ಸಾವನ್ನಪ್ಪುವವರ ಪೈಕಿ ಶೇ.80 ರಷ್ಟು ಜನ ಗ್ರಾಮೀಣ ಭಾಗದವರು ಎಂಬುದು ಆಘಾತಕಾರಿ ಸಂಗತಿ.
- ಭಾರತದಲ್ಲಿ ಪುರುಷರು ಮತ್ತು ಮಹಿಳೆಯರಿಗೆ ತಂಬಾಕಿನಿಂದ ಬರುವ ಕ್ಯಾನ್ಸರ್‌ನ ಪ್ರಮಾಣ ಕ್ರಮವಾಗಿ ಶೇ. 56.4 ಮತ್ತು ಶೇ. 44.6 ಆಗಿದೆ.
- ಭಾರತದ ಪ್ರತೀ 100 ಕ್ಯಾನ್ಸರ್ ಪ್ರಕರಣಗಳಲ್ಲಿ 40 ತಂಬಾಕು ಸೇವನೆಗೆ ಸಂಬಂಧಿಸಿದ್ದಾಗಿವೆ.
- ಸುಮಾರು ಶೇ. 95 ರಷ್ಟು ಬಾಯಿ ಕ್ಯಾನ್ಸರ್‌ಗೆ ಕಾರಣ ತಂಬಾಕು ಸೇವನೆಯಾಗಿದೆ.
- ತಂಬಾಕು ಸೇವಿಸುವವರು ತಂಬಾಕು ಸೇವಿಸದವರಿಗಿಂತ 10 ವರ್ಷ ಹೆಚ್ಚು ವಯಸ್ಸಾದಂತೆ ಕಾಣುತ್ತಾರೆ.





downloaded from: www.kpscvaani.com



ಧೂಮಪಾನ ಮುಂದುವರೆಸಿದ ವ್ಯಕ್ತಿಗೆ ಉಂಟಾಗುವ ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳ ಅಪಾಯ ಅರ್ಧದಷ್ಟು ಕಡಿಮೆಯಾಗುತ್ತವೆ. 10 ವರ್ಷಗಳ ನಂತರ ಧೂಮಪಾನ ಮುಂದುವರೆಸಿದ ವ್ಯಕ್ತಿಗೆ ಉಂಟಾಗುವ ಶ್ವಾಸಕೋಶದ ಕ್ಯಾನ್ಸರ್‌ನ ಅಪಾಯ ಅರ್ಧದಷ್ಟು ಕಡಿಮೆಯಾಗುತ್ತವೆ. 15 ವರ್ಷಗಳ ನಂತರ–ಧೂಮಪಾನ ಮಾಡದೇ ಇರುವ ವ್ಯಕ್ತಿಗೆ ಇರುವಷ್ಟೇ ಹೃದಯಾಘಾತ ಮತ್ತು ಪಾರ್ಶ್ವವಾಯು ಅಪಾಯ ಇರುತ್ತದೆ.

ತಂಬಾಕು ನಿರ್ಮೂಲನೆ ಖಂಡಿತ ಸಾಧ್ಯ. ನಿಮಗೆ ಬೇಕಾಗಿರುವುದು ನಿಮ್ಮ ಮನೋ ದೃಢತೆ, ಅಚಲ ನಿರ್ಧಾರ ಹಾಗು ಮನೋವೈದ್ಯರ ಸಹಾಯ ಹಸ್ತ. ಶೇ.70–80 ಜನರು ತಂಬಾಕು ಸಿಗರೇಟ್ ಸೇವನೆ ಬಿಡಲು ಪ್ರಯತ್ನಿಸುತ್ತಾರೆ. ಆದರೆ ವೈದ್ಯರ ಮತ್ತು ಆಪ್ತಸಮಾಲೋಚಕರ ಮಾರ್ಗದರ್ಶನವಿಲ್ಲದೇ ಅವರ ಪ್ರಯತ್ನ ವಿಫಲವಾಗುವುದು. ಇದಕ್ಕಾಗಿ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ 'ಜಿಲ್ಲಾ ತಂಬಾಕು ನಿಯಂತ್ರಣ ಘಟಕ' ಸ್ಥಾಪಿಸಲಾಗಿದೆ. ಇಲ್ಲಿ ತಂಬಾಕು ಸೇವನೆ ಬಿಡಲು ಸಿದ್ಧವಿರುವವರಿಗೆ ತಂಬಾಕಿನಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳು, ಸಂಸಾರದ ಆರ್ಥಿಕ ಪರಿಸ್ಥಿತಿ ಹದಗೆಡುವ ಬಗ್ಗೆ ತಿಳಿಹೇಳಲಾಗುವುದು. ಮತ್ತು ಅಗತ್ಯವಿದ್ದರೆ ಮನೋವೈದ್ಯರಿಂದ ಔಷಧೋಪಚಾರವನ್ನೂ ಮಾಡಲಾಗುವುದು. ತಂಬಾಕು–ಸಿಗರೇಟ್ ಬಿಡಲು ಇಚ್ಛಿಸುವವರು ಈ ತಂಬಾಕು ನಿಯಂತ್ರಣ ಘಟಕದ ಸದುಪಯೋಗ ಪಡೆದುಕೊಳ್ಳಬಹುದು.

ಇನ್ನು ಮಾರುಕಟ್ಟೆಯಲ್ಲಿ ಸಿಗುವ ನಿಕೋಟಿನ್ ಗಮ್, ಮಾತ್ರೆಗಳು, ಪ್ಯಾಚ್‌ಗಳೂ ನಿಮಗೆ ಸಹಾಯ ಮಾಡಬಲ್ಲವು. ವೈದ್ಯರ ಸಲಹೆ, ಮನೋವಿಶ್ಲೇಷಣೆ, ಖಿನ್ನತೆ ನಿವಾರಣಾ ಔಷಧಿಗಳು ನಿಮ್ಮ ಮನಸ್ಸನ್ನು ಇನ್ನಷ್ಟು ಗಟ್ಟಿಗೊಳಿಸುತ್ತವೆ. ಇದಕ್ಕೆ ನೀವು ಮಾಡಬೇಕಾದದ್ದು ದೃಢನಿರ್ಧಾರ, ಯಾವುದೇ ಬಗೆಯ ತಂಬಾಕು, ಲೈಟರ್, ಬೆಂಕಿ ಪೊಟ್ಟಣ, ಆ್ಯಶ್ ಟ್ರೇಗಳನ್ನು ನಾಶಪಡಿಸಿರಿ ಇನ್ನು ಅವುಗಳ ಅವಶ್ಯಕತೆ ನಿಮಗಿಲ್ಲ. ನಿಮಗೆ ಧೂಮಪಾನ ಮಾಡಲು ಪ್ರಚೋದಿಸುವ ಸಂಗತಿಗಳನ್ನು (ಸಿಗರೇಟ್ ಅಂಗಡಿ, ಧೂಮಪಾನ ಮಾಡುವವರನ್ನು ನೋಡುವುದು) ಗುರುತಿಸಿ ಅವುಗಳಿಂದ ದೂರವಿರಿ.

ಇಂದಿನ ದಿನಗಳಲ್ಲಿ ಮಕ್ಕಳು ತಮ್ಮ 14 ನೇ ವಯಸ್ಸಿಗೇ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಆದ್ದರಿಂದ ಪೋಷಕರು ಮಕ್ಕಳೊಂದಿಗೆ ಮುಕ್ತವಾಗಿ ತಂಬಾಕಿನ ದುಷ್ಪರಿಣಾಮಗಳನ್ನು ಚರ್ಚಿಸಬೇಕು. ಮಾಧ್ಯಮ ಜಾಹಿರಾತುಗಳಿಗೆ ಮಕ್ಕಳು ಬೇಗನೆ ಆಕರ್ಷಿತರಾಗುತ್ತಾರೆ. ಆದ್ದರಿಂದ ಅದರ ಸತ್ಯಾಂಶಗಳನ್ನು ಪೋಷಕರೇ ನೇರವಾಗಿ ತಿಳಿಸಿ ಹೇಳಬೇಕು.

ಈ ಧೂಮಪಾನಿಗಳು ತಮ್ಮ ಜೊತೆಗೆ ಇತರರ ಆರೋಗ್ಯವನ್ನೂ ಹಾಳುಮಾಡುತ್ತಿದ್ದಾರೆ. ಜನನಿಬಿಡ ಪ್ರದೇಶಗಳಾದ ಬಸ್‌ನಿಲ್ದಾಣ, ಚಿತ್ರಮಂದಿರ, ಉದ್ಯಾನ, ಆಸ್ಪತ್ರೆ, ಶಾಲಾ ಕಾಲೇಜ್ ಆವರಣದಲ್ಲಿ ಇವರು ನಿರಾತಂಕವಾಗಿ ಧೂಮಪಾನ ಮಾಡುತ್ತಿದ್ದಾರೆ. ಸರ್ಕಾರ 'ಧೂಮಪಾನ ನಿಷೇಧಿಸಿದೆ', 'ಧೂಮಪಾನ ದಂಡಕ್ಕೆ ಕಾರಣ' ಎಂತೆಲ್ಲ ಸೂಚನಾ ಫಲಕಗಳನ್ನು ಹಾಕಿದರೂ ಪ್ರಯೋಜನವಾಗಿಲ್ಲ. ಕಾರಣ ಜನಸಾಮಾನ್ಯರಾದ ನಾವುಗಳು ಕನಿಷ್ಟಪಕ್ಷ 'ಇಲ್ಲಿ ಧೂಮಪಾನ ಮಾಡಬೇಡಿ' ಎಂದು ವಿನಯಪೂರ್ವಕವಾಗಿ ಒಂದು ಮಾತನ್ನಾದರೂ ಹೇಳುವುದರಿಂದ ನೂರರಲ್ಲಿ ಒಬ್ಬರಾದರೂ ಸಾರ್ವಜನಿಕ ಪ್ರದೇಶಗಳಲ್ಲಿ ಧೂಮಪಾನ ಮಾಡುವುದನ್ನು ನಿಲ್ಲಿಸಿದರೆ ಅದು ಈ ಸಮಾಜಕ್ಕೆ ನಿಮ್ಮ ಕೊಡುಗೆಯೇ ಸರಿ.

ನಾನು ಸುಡುತ್ತಿರುವ ಸಿಗರೇಟ್ ನನ್ನನ್ನೂ, ನನ್ನ ಸುತ್ತಲ ಪ್ರಪಂಚವನ್ನೂ ಒಟ್ಟಿಗೆ ಸುಡುತ್ತದೆ, ಎಂಬ ಪುಟ್ಟದೊಂದು ಅರಿವು ಧೂಮಪಾನಿಗೆ ಇದ್ದರೆ ಸಾಕು. ಅದು ವ್ಯಸನದಿಂದ ಹೊರಗೆ ಬರಲು ಒಂದು ಹೆಜ್ಜೆ ಇಟ್ಟಂತೆ.



downloaded from: www.kpscvaani.com



# ಪ್ರಜ್ವಲಿಸುವ ಪರಮಾತ್ಮ ಡಾ. ಪುಟ್ಟರಾಜ ಗವಾಯಿಗಳು

ಸುರೇಶ ಗೋವಿಂದರಾವ್ ದೇಸಾಯಿ

"ಶಿಷ್ಯಾದಿಚ್ಛೇತ್ ಪರಾಜಯಂ"! ಎಂಬುದು ನಿಜವಾದ ಗುರುವು ತನ್ನ ಶಿಷ್ಯನಿಂದ ನಿರೀಕ್ಷಿಸುವ ಫಲಿತಾಂಶ! ಇದಕ್ಕೆ ಅತ್ಯಂತ ಸೂಕ್ತ ನಿದರ್ಶನವೆಂದರೆ ಪಂಡಿತ ಶ್ರೀಗಾನ ಯೋಗಿ ಪಂಚಾಕ್ಷರ ಶಿವಯೋಗಿಗಳು ಮತ್ತು ಪಂಡಿತ ಡಾ.ಪುಟ್ಟರಾಜ ಗವಾಯಿಗಳು. ಸಂಗೀತ ಲೋಕದ ಇಬ್ಬರು ಮಹಾನ್ ಸಾಧಕರು ಮತ್ತು ಅನುಭಾವಿಗಳು. ಈ ಇಬ್ಬರು ಗುರು–ಶಿಷ್ಯರಿಂದಾಗಿ ಗದಗ ನಗರಕ್ಕೆ ಭಾರತದಲ್ಲಿ ಹಾಗೂ ಸಂಗೀತ ಲೋಕದಲ್ಲಿ ವಿಶೇಷ ಸ್ಥಾನ ಲಭಿಸಿದೆ. ಇವರಿಬ್ಬರಿಗೂ ಕಣ್ಣು ಇಲ್ಲದಿದ್ದರೂ ತಮ್ಮಲ್ಲಿನ ಆತ್ಮ ಸ್ಥೈರ್ಯದಿಂದಾಗಿ ಬದುಕಿಗೊಂದು ಅರ್ಥಪೂರ್ಣತೆ ತಂದುಕೊಂಡ ಗುರು–ಶಿಷ್ಯರು. ವಿಕಲಚೇತನರು ಮತ್ತು ಬಡವಿದ್ಯಾರ್ಥಿಗಳಿಗಾಗಿ ನಡೆಸಿದ ಕಾರ್ಯ ಅಭೂತಪೂರ್ವ. ಇದು ಇವರಿಬ್ಬರಿಗೆ ಸಂಗೀತಲೋಕದ ಸೂರ್ಯ–ಚಂದ್ರರೆಂಬ ಅಭಿದಾನವನ್ನು ತಂದುಕೊಟ್ಟಿದೆ.

ಶ್ರೀ ಪುಟ್ಟರಾಜರು ಬೆಳೆದದ್ದು ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಪುಟ್ಟಗ್ರಾಮ ಹೊಸಪೇಟೆಯಲ್ಲಿ. ಜನಿಸಿದ್ದು ತಾಯಿಯ ತವರು ಮನೆ "ದೇವಗಿರಿ"ಯ ಶ್ರೀ ಗಡ್ಡದ ದೇವರ ಮಠದಲ್ಲಿ, 1914 ನೇ ಮಾರ್ಚ್ 3 ರಂದು ತಾಯಿಯ ಒಡಲಿನಿಂದ ಪೊಡವಿಗೆ ಬಂದ ಈ ಮಗುವಿಗೆ "ಪುಟ್ಟಯ್ಯ" ಎಂದು ನಾಮಕರಣ ಮಾಡಿದರು. ಮುದ್ದಾದ ಮಗುವನ್ನು ಹೆತ್ತ ತಾಯಿ ಸಿದ್ದಮ್ಮ ಹಿಗ್ಗಿ ಹೀರೆಕಾಯಿಯಾದಳು. ತಂದೆ ರೇವಯ್ಯನ ಆನಂದಕ್ಕೆ ಪಾರವೇ ಇಲ್ಲದಂತಾಯ್ತು. ಆದರೆ ಈ ಹಿಗ್ಗು ಆರು ತಿಂಗಳಲ್ಲೇ ಕುಗ್ಗಿ ಹೋಯಿತು. ಕಣ್ಣು ಬೇನೆಯಿಂದ ಬಳಲುತ್ತಿದ್ದ ಮಗುವಿನ ಕಣ್ಣುಗಳಿಗೆ ಹಳ್ಳಿಯ ಅಜ್ಞಾನಿ ವೈದ್ಯನೊಬ್ಬನ ಮಾತು ಕೇಳಿ–ರಕ್ತ ಹೀರುವ ತೊಣಸಿ ಹುಳುಗಳನ್ನು ಕಣ್ಣಿನಲ್ಲಿ ಬಿಟ್ಟರು. ಆ ಹುಳುಗಳು ಕಣ್ಣಿನ ಪೊರೆಯನ್ನೇ ಹರಿದು ತಿಂದು ಧರೆಯಸಿರಿಯನ್ನು ನೋಡುವ ಸೌಭಾಗ್ಯವನ್ನು ಕಿತ್ತುಕೊಂಡವು.

ಪುಟ್ಟಯ್ಯ ಮುಂದೆ ಮೂರನೇ ವರ್ಷಕ್ಕೆ ತಂದೆಯನ್ನು ಕಳೆದುಕೊಂಡರು. ಸೋದರಮಾವ ಶ್ರೀ ಚಂದ್ರಶೇಖರಯ್ಯ ತಾಯಿ–ಮಗನನ್ನು ದೇವಗಿರಿಗೆ ಕರೆದೊಯ್ದನು. ಪುಟ್ಟಯ್ಯ 'ಪರಪುಟ್ಟನಂತೆ ಮಾವನ ಆಶ್ರಯದಲ್ಲೇ ಉಳಿದು ಬಾಲ್ಯಕಳೆಯಬೇಕಾಯಿತು. ಚಂದ್ರಶೇಖರಯ್ಯನವರು ಸಂಗೀತ ಮತ್ತು ಸಾಹಿತ್ಯವನ್ನು ಬಲ್ಲವರಾಗಿದ್ದರು. ಪುಟ್ಟಯ್ಯನಿಗೆ ಸಂಗೀತವೆಂದರೆ ತುಂಬಾ ಇಷ್ಟ ಎಂದರಿತ ಅವರು ಸಂಗೀತ ಪಾಠ ಆರಂಭಿಸಿದರು. ಶಾಸ್ತ್ರ, ಪುರಾಣ, ಪುಣ್ಯಕತೆಗಳನ್ನು ಹೇಳುವ ಮೂಲಕ ಸಾಹಿತ್ಯ ಸುಧೆಯನ್ನು ಹರಿಸತೊಡಗಿದರು. ಬುದ್ಧಿಶಾಲಿಯಾದ ಪುಟ್ಟಯ್ಯ ಲೀಲಾಜಾಲವಾಗಿ ಸಂಗೀತ ಸಾಹಿತ್ಯಗಳಲ್ಲಿ ಪರಿಣಿತನಾಗತೊಡಗಿದನು. ಹಾರ್ಮೋನಿಯಂ ಬಾರಿಸುವಾಗ ಪುಟ್ಟಯ್ಯನ ಕೈ ಬೆರಳುಗಳ ಕುಣಿತ ಕಂಡ ಮಾವ ಬೆಕ್ಕಸ ಬೆರಗಾಗುತ್ತಿದ್ದರು. ಸಂಗೀತ ಕಲೆ ಪುಟ್ಟಯ್ಯನಿಗೆ ಪರಮಾತ್ಮನು ಕರುಣಿಸಿದ ವರದಾನ ಎಂದುಕೊಂಡು ಹೆಚ್ಚಿನ



# ಸರ್ವಂ ಶಿವಮಯಂ

ಬಲ್ಲೇನಹಳ್ಳಿ ಮಂಜುನಾಥ

**'ಮೃತ್ಯುಂಜಯಾಯ ರುದ್ರಾಯ**
**ನೀಲಕಂಠಾಯ ಶಂಭುವೆ**
**ಅಮೃತೇಶಾಯ ಸರ್ವಾಯ**
**ಮಹಾದೇವಾಯ ನಮಃ'**

...... ಎಂದು ಎಷ್ಟು ಸೊಗಸಾಗಿ ನಮ್ಮ ಹಿರಿಯರು ಶಿವನ ಮಹಿಮೆಯನ್ನು ಹಾಡಿ ಹೊಗಳಿದ್ದಾರೆ ನೋಡಿ, ಜಗತ್ತಿನ ರಕ್ಷಕನಾದ, ಜಗತ್ತಿನ ಒಡೆಯನಾದ ಶಿವ ಸದಾಶಿವ ಮಾತ್ರವಲ್ಲ ಆತ ಪರಮಶಿವ! "ಸತ್ಯಂ ಶಿವಂ ಸುಂದರಂ" ಎಂಬ ಲೋಕೋಕ್ತಿಗೆ ಮತ್ತೊಂದು ಹೆಸರೇ ಈಶ್ವರನಾಗಿದ್ದಾನೆ. ಸಹಸ್ರಾರು ನಾಮಗಳಿಂದ ಅರ್ಚಿಸಲ್ಪಡುವ ಅವನ ಹಬ್ಬ ಕೇವಲ ಮಾನವರಿಗೆ ಮಾತ್ರವಲ್ಲ, ಪಶು-ಪಕ್ಷಿ, ಪ್ರಾಣಿ, ಕ್ರಿಮಿ-ಕೀಟಗಳಿಂದ, ಭೂತ ಗಣಗಳವರೆವಿಗೂ ಹಬ್ಬದೆ. ಆದ್ದರಿಂದಲೇ 'ಸರ್ವಂ ಶಿವಮಯಂ" ಎಂದಿರುವುದು.

ದ್ವಾದಶ ಜ್ಯೋತಿರ್ಲಿಂಗ ಸ್ವರೂಪಿಯಾದ ಶಿವನು ಲಿಂಗಸ್ವರೂಪಿಯಾಗಿ, ಬೇಡಿ ಬಂದವರ ಪಾಲಿನ ಕಲ್ಪವೃಕ್ಷವಾಗಿ ಅನಾದಿಕಾಲದಿಂದಲೂ ಭಕ್ತರ ಪ್ರೀತಿಗೆ ಪಾತ್ರನಾಗಿದ್ದಾನೆ. 'ಶಿವ' ಎಂಬ ಎರಡೇ ಅಕ್ಷರ ಜಗತ್ತಿನ ರಕ್ಷಕವಾಗಿದೆ. 'ಓಂಕಾರ' ಪ್ರಿಯನಾದ ಶಿವ ಹಿಂದೂ ಪಂಚಾಂಗದ ಪ್ರಕಾರ 'ಲಯ' ಸ್ವರೂಪಿ! ಸೃಷ್ಠಿ-ಸ್ಥಿತಿ-ಲಯಗಳ ಕಾಯಕದಲ್ಲಿ ಶಿವನ ಪಾತ್ರ ದೊಡ್ಡದು. ಶಿವನಿಗೆ ರೂಪವಿಲ್ಲ, ಭಾವವಿಲ್ಲ, ಅವನೊಬ್ಬನನ್ನ ಹೇಗಾದರೂ ಪೂಜಿಸಬಹುದು. ಆದ್ದರಿಂದಲೇ ನಮ್ಮ ಹಿರಿಯರು 'ನೆನೆದೋರ ಮನದಲ್ಲಿ ಶಿವ' ಎಂದಿದ್ದಾರೆ.

ಹರನು ನಮ್ಮ ತಂದೆ, ಗಿರಿಜೆ ನಮ್ಮ ತಾಯಿ

ಶರಣರು ನಮ್ಮ ಬಳಗ

ಕೈಲಾಸಗಿರಿ ಕಾಣಿ ನಮ್ಮ ತವರೂರು"..... ಎಂದು ಜನಪದರಿಂದಲೂ ಹಾಡಿ ಹೊಗಳಿಸಿಕೊಂಡಿರುವ ಶಿವ, ಪರಮಶಿವ ಮಾತ್ರ! ಆಕಾಶ-ಭೂಮಿಗಳೆಲ್ಲೆಡೆಯಲ್ಲಿ ಸರ್ವಾಂತರಮಯಿಯಾಗಿರುವ ಶಿವ ಅನಾದಿಕಾಲದಿಂದ ಇವತ್ತಿನವರಿವಿಗೂ ತನ್ನ ಅಸ್ತಿತ್ವವನ್ನು ಮಾನವ ಕೋಟಿಯಲ್ಲಿ ಉಳಿಸಿಕೊಂಡೇ ಬಂದಿದ್ದಾನೆ. ಭಕ್ತರಪ್ರಿಯ, ಬಡವರ ಬಂಧು, ಸ್ಮಶಾನವಾಸಿಯಾದ ಶಿವ ನಿರಾಡಂಬರದ, ನಿರಾಭರಣದ ಪುರುಷೋತ್ತಮ! ಭಕ್ತನಿಗಾಗಿ ತನ್ನ ಆತ್ಮಲಿಂಗವನ್ನೇ ಧಾರೆ ಎರೆದ ಮಹಾದಾನಿ! ಸ್ತ್ರೀ ಸಮಾನತೆಯನ್ನು ಎಂದೋ ಪ್ರತಿಪಾದಿಸಿ ತನ್ನ ಶರೀರದ ಅರ್ಧಭಾಗವನ್ನೇ ಪತ್ನಿ ಪಾರ್ವತಿಗೆ ಬಿಟ್ಟುಕೊಟ್ಟು ಅರ್ಧನಾರೀಶ್ವರನಾದವ!

ಇಂತಹ ದೈವೋತ್ತಮನ ಬಗೆಗೆ ಮನುಜರಾದ ನಾವು ಎಷ್ಟು ಹೇಳಿದರೂ ಅದು ಪದಗಳ ಅಲಂಕರಣವಷ್ಟೆ! ಇಂತಹ ಮಹಾಮಹಿಮನ ವಿಶೇಷ ಪರ್ವ ಬಂದಿದೆ. ಅದೇ ಮಹಾಶಿವರಾತ್ರಿ. ಅದೂ ಮಾಘ ಮಾಸದ ಬಹುಳ ಚತುರ್ದಶಿಯೇ ಮಹಾಶಿವರಾತ್ರಿ, ಶಿವಭಕ್ತರಿಗೆ, ಶಿವಶರಣರಿಗೆ ಬಹು ಪ್ರಶಸ್ತವಾದ ದಿನವೇ ಮಹಾಶಿವರಾತ್ರಿ ಆದ್ದರಿಂದಲೇ "ಮಾಘಕೃಷ್ಣ ಚತುರ್ದಶ್ಯಾಂ ಶಿವಪೂಜಾ ಸುದುರ್ಲಭಂ" ಎಂದು ಹೇಳಲಾಗಿದೆ.

**"ಅಲಂಕಾರ ಪ್ರಿಯೋ ವಿಷ್ಣು**
**ಅಭಿಷೇಕ ಪ್ರಿಯೋ ಶಿವ**
**ನಮಸ್ಕಾರ ಪ್ರಿಯೋ ಭಾನುಃ**
**ಶಿವಸ್ತೋತ್ರ ಪ್ರಯೋಗಣಾಂ"**

ಎಂದು ಬ್ರಹ್ಮರ್ಷಿಗಳಿಂದ ಪ್ರಶಂಸಿಸಿಕೊಂಡಿರುವ ಪರಶಿವ ಲಿಂಗರೂಪಿ! ಲಿಂಗರೂಪದಲ್ಲಿಯೇ ಅವನಿಗೆ ಸಾಕಾರಪೂಜೆ!.

ಆದಿಕಾಲದಲ್ಲಿ ಮನುಷ್ಯನಿಗೆ ಪ್ರಕೃತಿಯ ವಿಸ್ಮಯಗಳಿಂದ ಭಯ-ಭೀತಿ ಉಂಟಾಯಿತು. ತನಗಿಂತ ಬೇರೆ ಯಾವುದೋ ಶಕ್ತಿ ಇದೆ ಎಂಬ ಭಾವನೆ ಮೂಡಿತು. ಅಂತಹ ಶಕ್ತಿಯನ್ನು ಆತ ಚಿತ್ರ ರೂಪದಲ್ಲಾಗಲೀ, ಮೂರ್ತಿಯ ರೂಪದಲ್ಲಾಗಲೀ ಕಲ್ಪಿಸಿಕೊಳ್ಳುವಷ್ಟು ಬುದ್ಧಿವಂತನಾಗಿರಲಿಲ್ಲ. ಆದ್ದರಿಂದ ಆತ ಕಲ್ಲಿನ ರೂಪದಲ್ಲಿ ಪೂಜಿಸಲಾರಂಭಿಸಿದ. ಹೀಗಾಗಿ ಶಿವ ಎಂದರೆ ನಿರಾಕಾರ, ನಿರ್ಗುಣ, ಸಾದಾಚಾರ ಸಂಪನ್ನ 'ಲಿಂಗ' ರೂಪನೆಂದು ಪ್ರಸಿದ್ಧಿಯಾದ. ಹಿಂದೂಸ್ಥಾನವೇಕೆ ಪ್ರಪಂಚದ ಯಾವುದೇ ಭಾಗಕ್ಕೆ ಹೋದರೂ ಮಾನವ ಮೊದಲು ದೇವರೆಂದು ಕಲ್ಪಿಸಿ ಪೂಜಿಸಿರುವುದು 'ಲಿಂಗ' ವನ್ನೇ! ಹಾಗಾಗಿ ಶಿವ 'ಸರ್ವಾಂತರಮಯಿ' ಎಂದು ಪ್ರಸಿದ್ಧಿಯಾದ.

ಶಿವನನ್ನು ಲಿಂಗರೂಪದಲ್ಲಿ ಸಾಕಾರಪೂಜೆ ಮಾಡುವುದು ಬಹು ಹಿಂದಿನಿಂದಲೂ ನಡೆದು ಬಂದ ಆಚರಣೆ. ಶೈವ ಆಗಮನದಲ್ಲಿ ಲಿಂಗಪೂಜೆಯ ಬಗ್ಗೆ ಬಹು ಸುಂದರ ನಿರೂಪಣೆಗಳಿವೆ. ಲಿಂಗವು 'ರೂಪವೂ' ಅಲ್ಲ. 'ಅರೂಪ'ವೂ ಅಲ್ಲ, 'ಸಾಕಾರ'ವೂ ಅಲ್ಲ, 'ನಿರಾಕಾರ'ವೂ ಅಲ್ಲ. ಬೃಹತ್ ವಿಶ್ವವೇ ಒಂದು ಲಿಂಗ, ಸೀಮಾತೀತವಾದುದನ್ನು ಸಾಕಾರ ರೂಪದಲ್ಲಿ ತೋರಿಸಲು ಇರುವ ಒಂದು ದಿವ್ಯ ಸಾಧನವೇ ಲಿಂಗ!" ಆದ್ದರಿಂದಲೇ ಶಿವನನ್ನು 'ಓಂಕಾರ ಪ್ರಿಯ' ಎಂದಿರುವುದು! ಯಾರು ಶಾಸ್ತ್ರೋಕ್ತವಾಗಿ ಲಿಂಗವನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಾರೆಯೋ ಅವರೇ ಸಾಕ್ಷಾತ್ ಶಿವ ಸ್ವರೂಪ ಉಳ್ಳವರಾಗುವರು. ಆದ್ದರಿಂದ ರಾಜ ಮಹಾರಾಜರು ಶಿವಲಿಂಗ ಪ್ರತಿಷ್ಠಾಪನೆಗೆ ಮೊದಲ ಆದ್ಯತೆ ನೀಡಿದರು. ನಾಡಿನ ಮೂಲೆ-ಮೂಲೆಗಳಲ್ಲಿ ಶಿವಲಿಂಗ ಪ್ರತಿಧ್ವನಿಸಿತು. ಚೋಳ ರಾಜವಂಶರೂ ಇಡೀ ಹಿಂದೂಸ್ಥಾನವನ್ನು ಲಿಂಗಮಯಗೊಳಿಸಿದರು. ಹಳ್ಳಿ-ಹಳ್ಳಿಗಳಲ್ಲಿ ಶಿವಲಿಂಗಗಳು ನಾನಾ ಹೆಸರುಗಳಲ್ಲಿ ಪ್ರತಿಷ್ಠಾಪಿಸಲ್ಪಟ್ಟವು. ಅಂತಹವೇ ಪ್ರಯತ್ನ ಕರ್ನಾಟಕದಲ್ಲಿಯೂ ಆಯಿತು. 'ದಕ್ಷಿಣಕಾಶಿ' ಎಂಬ ಅಭಿದಾನಕ್ಕೆ ಕರ್ನಾಟಕ ಪಾತ್ರವಾಯಿತು. ಈ ಹಿನ್ನಲೆಯಲ್ಲೇ ನಮ್ಮ ಜನಪದರು

**"ಜಗದೀಶ ಸರ್ವೇಶ ಮಲ್ಲೇಶ ಗೌರೀಶ**
**ನೂರಾರು ಹೆಸರು ಶಿವನಿಗೆ**
**ನೂರಾರು ಹೆಸರು ನಂಜುಂಡೇಶ್ವರನಿಗೆ**
**ನೆನೆದೋರ ಮನದಲ್ಲಿ ಇರುವವಗೆ**
**ಕಲ್ಲಲ್ಲೂ ಶಿವನುಂಟು, ಮಣ್ಣಲ್ಲೂ**
**ಶಿವನುಂಟು ಹೂವಲ್ಲೂ ಅವನ ನೆರಳುಂಟು**
**ಅವನಿಲ್ಲದೆಡೆಯಿಲ್ಲ, ಅವನಿಲ್ಲದ ಊರಿಲ್ಲ**
**ಎಲ್ಲೆಲ್ಲೂ ನಮ್ಮ ಶಿವನುಂಟು..." !!** ಎಂದು ಹಾಡಿಹೊಗಳಿದ್ದಾರೆ.

ಆದಿಚುಂಚನಗಿರಿಯ ಕಾಲಭೈರವೇಶ್ವರ, ನಂಜನಗೂಡಿನ ನಂಜುಡೇಶ್ವರ, ಮಲೈಮಹದೇಶ್ವರ ಬೆಟ್ಟದ ಮಹದೇಶ್ವರ, ಗೋಕರ್ಣದ ಆತ್ಮಲಿಂಗೇಶ್ವರ, ಧರ್ಮಸ್ಥಳದ ಮಂಜುನಾಥೇಶ್ವರ, ಮಂಗಳೂರಿನ ಕದ್ರಿ ಗೋಕರ್ಣೇಶ್ವರ, ಗೋಕರ್ಣದ ಮಹಾಬಲೇಶ್ವರ, ಮುರ್ಡೇಶ್ವರದ ಮುರ್ಡೇಶ್ವರ, ವಿಟ್ಲದ ಪಂಚಲಿಂಗೇಶ್ವರ, ಮತ್ತೂರಿನ ಮಹಾಲಿಂಗೇಶ್ವರ, ಉಪ್ಪಿನಂಗಡಿಯ ಸಹಸ್ರಲಿಂಗೇಶ್ವರ, ತಲಕಾಡಿನ ಪಂಚಲಿಂಗೇಶ್ವರ, ಕಿಕ್ಕೇರಿಯ ಬ್ರಹ್ಮಲಿಂಗೇಶ್ವರ, ಕೂಡಲು ಸಂಗಮದ ಸಂಗಮೇಶ್ವರ, ಕೊಪ್ಪಳದ ಶರಣ ಸಿದ್ಧರಾಮೇಶ್ವರ, ಬೆಂಗಳೂರಿನ ಕಾಡು ಮಲ್ಲೇಶ್ವರ, ಸಿದ್ಧಗಂಗದ ಗವಿಸಿದ್ಧಲಿಂಗೇಶ್ವರ, ಗವಿ ಗಂಗಾಧರೇಶ್ವರ, ಎಡೆಯೂರಿನ ಸಿದ್ಧಲಿಂಗೇಶ್ವರ, ಶಿವಗಂಗೆಯ ಗಂಗೇಶ್ವರ, ಕೋಲಾರ ಸಮೀಪದ ಬಂಗಾರ ಪೇಟೆಯ ಹತ್ತಿರವಿರುವ ಕೋಟಿಲಿಂಗೇಶ್ವರ... ನಾಡಿನ ಪ್ರಖ್ಯಾತ ಶಿವಕ್ಷೇತ್ರಗಳಾಗಿವೆ. ಶಿವನ ಮಹಿಮೆಯನ್ನು ಸಾರುವ ದ್ವಾದಶ ಜ್ಯೋತಿರ್ಲಿಂಗ ಕ್ಷೇತ್ರಗಳಂತೆಯೇ ನಾಡಿನ ಈ ಕ್ಷೇತ್ರಗಳೂ ಸಹ ಪ್ರಸಿದ್ಧಿಯಾಗಿವೆ. ಶಿವರಾತ್ರಿಯ ಶುಭ ದಿನದಂದು ಇಲ್ಲೆಲ್ಲಾ ವಿಶೇಷ ಪೂಜೆ – ಪುನಸ್ಕಾರಗಳು ನಡೆಯುತ್ತವೆ. ಇಂತಹ ಸಂದರ್ಭದಲ್ಲಿ ಶಿವನ ಬಗ್ಗೆ, ಆತನ ಹಬ್ಬದ ಬಗ್ಗೆ ಒಂದಿಷ್ಟಾದರೂ ತಿಳಿಯದಿದ್ದರೆ ಹೇಗೆ?!

**'ಮೃತ್ಯುಂಜಯಾಯ ರುದ್ರಾಯ**
**ನೀಲಕಂಠಾಯ ಶಂಭುವೆ**
**ಅಮೃತೇಶಾಯ ಸರ್ವಾಯ**
**ಮಹಾದೇವಾಯ ನಮಃ'**

ಎಂಬ ಶ್ಲೋಕ ಈ ದಿನದಲ್ಲಿ ಭಕ್ತರ ಮನದಿಂದ ಉದ್ಗರಿಸಲ್ಪಡುತ್ತದೆ. ಮಾಘಮಾಸದ ಕೃಷ್ಣ ಪಕ್ಷದ ಚತುರ್ದಶಿಯಂದು ಮಹಾಶಿವರಾತ್ರಿ ಬಂದೇ ಬರುತ್ತದೆ. ಸಂವತ್ಸರ ಪೂರ್ತಿ ಮಾಸ ಶಿವರಾತ್ರಿ ಇದ್ದರೂ ಈ ದಿನವನ್ನು ಮಾತ್ರ ಮಹಾಶಿವರಾತ್ರಿಯೆಂದು ನಮ್ಮ ಪುರಾಣಗಳು ಕರೆದಿವೆ. ಶಿವರಾತ್ರಿ ಎಂದರೆ ಮಂಗಳರಾತ್ರಿ, ಶುಭರಾತ್ರಿ ಎಂದರ್ಥ. 'ಶಿವ' ಎಂಬ ಶಬ್ದವೇ 'ಮಂಗಳಕರ', 'ಜ್ಯೋತಿರ್ಮಯ'... ಎಂಬ ಅರ್ಥವನ್ನು ನೀಡುತ್ತದೆ. ಮಂಗಳಕಾರನಾದ ಇಂತಹ ಶಿವನನ್ನು ರಾತ್ರಿಯಲ್ಲಿ ಪೂಜಿಸಿ, ದಿನಪೂರ್ತಿ ಉಪವಾಸವಿದ್ದು ಆತನನ್ನು ಒಲಿಸಿಕೊಳ್ಳುವುದೇ ಶಿವರಾತ್ರಿಯ ವಿಶೇಷವಾಗಿದೆ. ಪುರಾಣಗಳ ಪ್ರಕಾರ ಮಾಘಮಾಸದ ಚತುರ್ದಶಿಯನ್ನು ಮಹಾಶಿವರಾತ್ರಿಯಾಗಿ ಆಚರಿಸಲು ನಾಲ್ಕು ಕತೆಗಳಿವೆ.

ಒಂದು ನಮಗೆಲ್ಲರಿಗೂ ತಿಳಿದಿರುವ ಬೇಡರಕಣ್ಣಪ್ಪನ ಕತೆ, ಎರಡನೆಯದು ಪರಶಿವನು ಜಗತ್ತಿನ ಉಳಿವಿಗಾಗಿ ಕಾರ್ಕೋಟಕ ವಿಷವನ್ನು ಕುಡಿದು ನೀಲಕಂಠನಾದ ನೆನಪಿಗಾಗಿ, ಮೂರನೆಯದು ಶಿವನಿಂದ ವರ ಪಡೆದ ಆತ್ಮಲಿಂಗವನ್ನು ರಾವಣ ಭೂಮಿಯಲ್ಲಿ ಇಟ್ಟ ನೆನಪಿಗಾಗಿ. ಹಾಗೂ ಕೊನೆಯದಾಗಿ ಪರಶಿವನು ಇದೇ ದಿನ ಸ್ವರ್ಗದಿಂದ ಧರೆಗಿಳಿಯಲು ಬಂದ ಗಂಗೆಯ ಪ್ರವಾಹವನ್ನು ಭಗೀರಥನ ಇಚ್ಛೆಯಂತೆ ತನ್ನ ಜಟೆಯಲ್ಲಿ ಬಂಧಿಸಿ, ಭೂಮಿಯನ್ನು ರಕ್ಷಿಸಿ, ಪವಿತ್ರ ಗಂಗಾನದಿ ಧರೆಯ ಮೇಲೆ ಹರಿಯುವಂತೆ ಮಾಡಿದ ನೆನಪಿಗಾಗಿ...

ಭಾನು-ಭುವಿಯನ್ನು ಮೀರಿದ ಶಿವ ಭಕ್ತರ ಪ್ರಿಯ, ತನ್ನ ಭಕ್ತರಿಗಾಗಿ ಎಂತಹ ವರವನ್ನು ಕೇಳಿದರೂ ಕೊಡುವ ದಯಾಮಯಿ. ಹಿಂದೂ ದೇವರುಗಳಲ್ಲಿ ಬ್ರಹ್ಮ-ವಿಷ್ಣುವನ್ನು ಒಲಿಸಿಕೊಳ್ಳುವುದು, ಪೂಜೆ ಮಾಡುವುದು ಕಷ್ಟ. ಆದ್ದರಿಂದ ಶಿವ ಎಲ್ಲರಿಗೂ ಪ್ರಿಯ! ಮಡಿ-ಮೈಲಿಗೆಯಿಂದ ದೂರ, ಗುಡಿ-ಗೋಪುರದಿಂದ ದೂರ, ಸ್ಮಶಾನವೇ ಮನೆ, ದರಿದ್ರವೇ ಪ್ರಿಯ! ಅಲಂಕಾರ ಒಲ್ಲದ ವೈವಿಧ್ಯ ಪೂಜೆ, ಬೇಡದ ಶಿವ ಎಲ್ಲರ ಮನದಲ್ಲೂ ಇದ್ದಾನೆ. ಹಾಗಾಗಿ ಮಹಾಶಿವರಾತ್ರಿ ಪ್ರಮುಖ ಪರ್ವವಾಗಿ ಮಾರ್ಪಟ್ಟಿದೆ.

ಮಹಾಶಿವರಾತ್ರಿಯಂದು ಶಿವನ ಆರಾಧನೆ, ಜಾಗರಣೆ





downloaded from: www.kpscvaani.com



ಮಹತ್ವವಾದುದು! ಈ ದಿನ ಪ್ರಾಂತ್ಯದಲ್ಲಿ ಎದ್ದು, ಸ್ನಾನ-ಪೂಜೆಗಳನ್ನು ಮುಗಿಸಿ ಶಿವಾಲಯಗಳಿಗೆ ಹೋಗಿ, ಬಿಲ್ವಪತ್ರೆಯನ್ನು ಶಿವನ ಶಿರದ ಮೇಲೆ ಇಟ್ಟು, ಲಿಂಗಸ್ವರೂಪಿಯಾದ ಶಿವನ ಮುಂದೆ ನಿಂತು-

"ಬ್ರಹ್ಮ ಮುರಾರಿ ಸುರಾರ್ಚಿತ ಲಿಂಗಂ
ಸುರ-ಗುರು-ಸುರವನ ಶೋಭಿತ ಲಿಂಗಂ
ಪರಮುಪದಂ ಪರಮಾತ್ಮಕಲಿಂಗಂ
ತತ್ ಪ್ರಣಮಾಮಿ ಸದಾಶಿವ ಲಿಂಗಂ"

ಎಂದು ಪ್ರಣಾಮ ಮಾಡಿದರೆ ಆ ಭಕ್ತರ ಪ್ರಿಯ ಸದಾಶಿವ, ಪರಶಿವ, ಮಹಾದೇವ ಖಂಡಿತಾ ಒಲಿದೇ ಒಲಿಯುತ್ತಾನೆ. ಹಾಗೂ ಈ ದಿನ 'ಓಂ ನಮಃ ಶಿವಾಯ' ಮಂತ್ರವನ್ನು ಸಹಸ್ರ ಬಾರಿ ಹೇಳುವುದು, ಶಿವನಿಗೆ ಪ್ರಿಯವಾದ 'ಶಿವಪುರಾಣ'ವನ್ನು ವಾಚಿಸುವುದು, ಲಿಂಗಾಷ್ಟಕ ಸ್ತೋತ್ರ ಪಠಿಸುವುದು. ದಿನವೆಲ್ಲ ಉಪವಾಸವಿದ್ದು ರಾತ್ರಿ ಶಿವನ ಸ್ಮರಣೆಯೊಂದಿಗೆ ಜಾಗರಣೆ ಮಾಡಿದರೆ ಉತ್ತಮ ಫಲಗಳು ದೊರೆತು ಶಿವನ ಸಾನಿಧ್ಯ ಅಂತಿಮದಲ್ಲಿ ದೊರೆಯುತ್ತದೆಂಬ ನಂಬಿಕೆ ಬಹಳ ಹಿಂದಿನಿಂದಲೂ ಇದೆ. ಶಿವರಾತ್ರಿಯ ಮುನ್ನಾದಿನವಾದ ತ್ರಯೋದಶಿಯಂದು ಒಪ್ಪತ್ತು ಊಟ ಮಾಡಬೇಕು, ಶಿವರಾತ್ರಿಯಂದು ಉಪವಾಸವಿರಬೇಕು ಅಮಾವಾಸ್ಯೆಯಂದು ಪಾರಣೆ ಆಚರಿಸಬೇಕೆಂದು ಪುರಾಣಗಳು ತಿಳಿಸುತ್ತವೆ.

ಉಪವಾಸ ಎಂದರೆ, ಅನ್ನ-ನೀರು-ಆಹಾರಾದಿಗಳನ್ನು ತ್ಯಜಿಸಿ ಎಂದಲ್ಲ, 'ಉಪ' ಅಂದರೆ "ಹತ್ತಿರ", 'ವಾಸ' ಎಂದರೆ 'ವಾಸವಾಗಿರುವಿಕೆ' ಎಂದರ್ಥ, ಅಂದರೆ ಶಿವನಿಗೆ ಮಾನಸಿಕವಾಗಿ ಹತ್ತಿರವಿರುವುದೇ ಶಿವರಾತ್ರಿ. ಆದ್ದರಿಂದಲೇ ಮಹಾಶಿವರಾತ್ರಿಯಂದು ನಮ್ಮ ಮನಸ್ಸು ಶಿವನಿಗೆ ಹತ್ತಿರವಾಗಿರಬೇಕೇ ವಿನಃ ಬೇರೆ-ಬೇರೆ ವಿಚಾರಗಳಿಗಲ್ಲ. ಆದ್ದರಿಂದ ಶಿವರಾತ್ರಿಯಂದು ಶಿವನ ಒಲುಮೆ ಗಳಿಸಲು ಆತನ ಕುರಿತು ಧ್ಯಾನ-ತಪದಲ್ಲಿ ನೆಲೆಯಾಗುವುದು ನಮ್ಮೆಲ್ಲರ ಕೆಲಸವಾಗಬೇಕಿದೆ.

'ಶಿವ' ಜ್ಞಾನದ ಸಂಕೇತ ಮಾತ್ರವಲ್ಲ, ಪ್ರಳಯ ಸ್ವರೂಪನು ಆಗಿದ್ದಾನೆ. ಅಂತಹ ಶಿವನು ನಮ್ಮವನನ್ನಾಗಿ ಮಾಡಿಕೊಳ್ಳಬೇಕು. ಆದ್ದರಿಂದಲೇ ಬಸವಣ್ಣನವರು 'ದಯೆಯೇ ಧರ್ಮದ ಮೂಲ' ಎಂದಿದ್ದು, ಅಂತರಂಗ ಶುದ್ಧವಾದಾಗ ಮಾತ್ರ ಬಹಿರಂಗ ಶುದ್ಧವಾಗಲು ಸಾಧ್ಯ. ನುಡಿದಂತೆ ನಡೆಯುವುದನ್ನು ರೂಢಿಸಿಕೊಳ್ಳದಿದ್ದರೆ ಹೃದಯಶಿವ ಖಂಡಿತಾ ಮೆಚ್ಚಲಾರನು. ನಿರಾಕಾರ-ನಿರ್ಗುಣನಾದ ಶಿವ ಅರ್ಧನಾರೀಶ್ವರ ಕೂಡ. ನಾವು ಜೀವನದಲ್ಲಿ ಯಾವುದನ್ನು ಗೆಲ್ಲಬೇಕೆಂದು ಬಯಸುತ್ತೇವೆಯೋ ಅದೆಲ್ಲವನ್ನೂ ಶಿವ ಗೆದ್ದು ತೋರಿಸಿದ್ದಾನೆ. ಅರಿಷಡ್ವರ್ಗಗಳನ್ನು ಗೆದ್ದವ ಖಂಡಿತ ಮುಕ್ತನಾಗಬಲ್ಲ! ನಾವೆಲ್ಲರೂ ನಮ್ಮ-ನಮ್ಮ ಕೆಲಸಗಳಲ್ಲಿ ಶಿವನನ್ನು ಕಂಡುಕೊಳ್ಳೋಣ ಈ ಮಹಾಶಿವರಾತ್ರಿಯಂದು ಆಧ್ಯಾತ್ಮಿಕತೆಯನ್ನು ಸಾಧಿಸೋಣ, ಆಗಲೇ ನಿಜವಾದ ಶಿವರಾತ್ರಿ ಆಚರಿಸದಂತಾಗುತ್ತದೆ. ■



downloaded from: www.kpscvaani.com



# ಮಹಿಳಾ ಅಧ್ಯಯನದ ಅಗತ್ಯತೆ

ಶೋಭಾ ಹೆಚ್. ಜಿ.

**ಮಾ**ರ್ಚ್ 8 ರಂದು 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ'ಯನ್ನು ಆಚರಿಸುವ ಸುಸಂದರ್ಭದಲ್ಲಿ ಮಹಿಳಾ ದೌರ್ಜನ್ಯ ಮತ್ತು ಮಹಿಳೆ ಅಭಿವೃದ್ಧಿ ಕುರಿತಂತೆ ನಮ್ಮೆಲ್ಲರ ಮನದಲ್ಲಿ ಪ್ರಶ್ನೆ ಮೂಡಿದಾಗ ಅನೇಕ ಒಳಹೊರಳುಗಳು ಕಾಣ ಸಿಗುತ್ತವೆ. ಅದರ ಬಗ್ಗೆ ಸಮಗ್ರ ಅಧ್ಯಯನದ ಅಗತ್ಯತೆ ಇದೆ. ಅದಕ್ಕೂ ಮೊದಲು ಮಹಿಳಾ ದಿನಾಚರಣೆಯ ಪ್ರಸ್ತುತತೆ ಬಗ್ಗೆ ಒಂದು ನೋಟ ಹರಿಸೋಣ...



ಮಾನವ ಉಗಮ ಪ್ರಕೃತಿ ಸಹಜವಾದುದು. ಮಾನವರೆಂದರೆ ಸಮೂಹ ಜೀವಿಗಳು. ಈ ಮಾನವ ಸಂತತಿ ಕೂಡಿ ಬಾಳುವ ಪದ್ಧತಿ, ಸಮಾನತೆ, ಪರಸ್ಪರ ತಿಳುವಳಿಕೆ, ಸಹ ಬಾಳ್ವೆಯಂತಹ ಮೌಲ್ಯಯುತ ಜೀವನ ನಿರ್ವಹಣೆಗಳು ಹಿಂದಿನ ಬದುಕಿನ ಮುಖ್ಯ ಲಕ್ಷಣವಾಗಿತ್ತು, ಅಲ್ಲದೆ ಇದು ಪರಂಪರಾಗತವಾಗಿ ನಡೆಯುತ್ತಾ ಬರುತ್ತಿತ್ತು. ಯಾವಾಗ ನಮ್ಮ ಸಮಾಜ, ಸಮುದಾಯಗಳಲ್ಲಿ ಸ್ವಾರ್ಥ, ಲಾಲಸೆಗಳು, ಪ್ರಧಾನತೆ ಅಧೀನತೆ, ಮೇಲು-ಕೀಳು, ಎಂಬ ಯಜಮಾನ್ಯತೆ ತನ್ನ ಕಬಂಧ ಬಾಹುಗಳನ್ನು ಚಾಚಿತೋ ಅಂದೇ ಜೀವ ಪರ ಮಾನವೀಯ ಮೌಲ್ಯಗಳ ಅಧಃಪತನವಾಗಿ ಪುರುಷ ಪ್ರಧಾನ ವ್ಯವಸ್ಥೆಯ ಉದಯಕ್ಕೆ ದಾರಿಯಾಯಿತು.



ಶೋಷಿತ ಗುಂಪೊಂದು ಹುಟ್ಟಿಕೊಂಡಿತು. ಈ ಶೋಷಿತ ಗುಂಪಿನಲ್ಲಿ ಪ್ರಮುಖವಾಗಿ ಇಂದು ಗುರುತಿಸಬೇಕಾಗಿರುವುದು ಬಹು ಮುಖ್ಯವಾಗಿ ಮಹಿಳೆ ಮತ್ತು ಹೆಣ್ಣು ಮಕ್ಕಳನ್ನು ಸಂವಿಧಾನ ಮತ್ತು ಕಾನೂನು ರಕ್ಷಣೆ ಕಾಯ್ದೆಗಳಿದ್ದಾಗ್ಯೂ ಇಂದಿನ ದಿನಗಳಲ್ಲಿ, ಅಸಮಾನತೆ, ಹಿಂಸೆ, ಅತ್ಯಾಚಾರ, ಹತ್ಯೆ, ಮಹಿಳೆ ಮತ್ತು ಹೆಣ್ಣು ಮಕ್ಕಳ ಮಾರಾಟ ಹಾಗೂ ಅಪಹರಣದಂತಹ ಹೇಯ ಕೃತ್ಯಗಳು ದಿನನಿತ್ಯದಲ್ಲಿ ಕಾಣುತ್ತಿರುವುದು ಶೋಚನೀಯ.

ಪ್ರಸ್ತುತ ದಿನಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯದ ಅಂಕಿ ಅಂಶಗಳನ್ನು ಗಮನಿಸಿದರೆ ಆಘಾತವಾಗುತ್ತದೆ. ನಮ್ಮ ದೇಶದಲ್ಲಿ 3 ನಿಮಿಷಕ್ಕೊಂದು ಮಹಿಳೆಯರ ಮೇಲಿನ ಅಪರಾಧ, ಪ್ರತಿ 23 ನಿಮಿಷಕ್ಕೊಬ್ಬರ ಮೇಲೆ ಅತ್ಯಾಚಾರ, 77 ನಿಮಿಷಕ್ಕೊಬ್ಬರು ವರದಕ್ಷಿಣೆ ಕಿರುಕುಳಕ್ಕೆ ಬಲಿ, 7 ನಿಮಿಷಕ್ಕೆ ಒಂದು ಕ್ರೌರ್ಯ ಅಲ್ಲದೆ, ಶೇಕಡ 70 ಮಹಿಳೆಯರು ಇಂದು ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ, ಮತ್ತು 43 ನಿಮಿಷಕ್ಕೊಬ್ಬ ಮಹಿಳೆಯ ಅಪಹರಣ ಹಾಗೂ 2013ರ ಅನ್ವಯದಂತೆ ಪ್ರತಿನಿತ್ಯ ಸರಾಸರಿ 22 ಮಹಿಳೆಯರ ವರದಕ್ಷಿಣೆ ಸಾವು, 51 ನಿಮಿಷಕೊಬ್ಬರಂತೆ ಚುಡಾಯಿಸುವಿಕೆಗೆ ಒಳಗಾಗಿರುವುದು. ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ಒಂದೆಡೆಯಾದರೆ ಮತ್ತೊಂದೆಡೆ ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಶಿಶು ಹತ್ಯೆಯಂತಹ ಹೇಯ ಅಮಾನವೀಯ ಕೃತ್ಯಗಳು, ಚಿಕ್ಕ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಅತ್ಯಾಚಾರ ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಿರುವಂತೆ ಇಡೀ ಸಮಾಜವೇ ತಲೆತಗ್ಗಿಸುವಂತೆ ಹೆತ್ತ ತಂದೆಯೇ ಮಕ್ಕಳ ಮೇಲೆ ದೈಹಿಕ ದೌರ್ಜನ್ಯ, ಅತ್ಯಾಚಾರದಂತಹ ಅನಾಗರಿಕ, ಪೈಶಾಚಿಕ ಕೃತ್ಯವೆಸಗುತ್ತಿರುವುದು, ನಾಚಿಕೆಗೇಡಿನ ಸಂಗತಿಯಾಗಿದೆ. ಹೆಣ್ಣು ಮಕ್ಕಳನ್ನು, ಸಾಗಾಣಿಕೆ ಮಾಡಿ ವೇಶ್ಯಾವೃತ್ತಿಯಂತಹ ಹೇಯ ಕೃತ್ಯಕ್ಕೆ ಬಳಕೆ ಮಾಡುತ್ತಿರುವುದು ಶೋಚನೀಯವಾದುದು. 'ಸ್ತ್ರೀ' ಎಂಬ ಪದದ ಇಂದಿನ ದುಸ್ಥಿತಿಯನ್ನು ಅಳೆಯುತ್ತಾ ಹೋದಂತೆ ಅಭದ್ರತೆಯ ಭಯ ಕಾಡುತ್ತಿದೆ. ಈ ಎಲ್ಲಾ ಅಂಶಗಳಿಗೆ ಪೂರಕವಾಗಿರುವಂತೆ ಲಿಂಗಾನುಪಾತ ನಮ್ಮ ದೇಶದಲ್ಲಿ ಸರಾಸರಿ 100ಕ್ಕೆ 919ರಷ್ಟಿದೆ.

ಮಾತೃ ಪ್ರಧಾನವಾದ ಈ ಭರತ ಭೂಮಿಯಲ್ಲಿ ಇಂತಹ ಹೇಯ ಪೈಶಾಚಿಕ ಕೃತ್ಯ! ಹೆಣ್ಣು ಇಷ್ಟೊಂದು ಅಭದ್ರಳೇ? ತಾಯಿ, ತಂಗಿ, ಸಂಗಾತಿ, ಮಗಳು ಇತ್ಯಾದಿ ಪಾತ್ರಗಳೊಂದಿಗೆ ಈ ಮಾನವ ಸಂಕುಲದ ಜೀವನಾಡಿಯಾಗಿರುವ 'ಸ್ತ್ರೀ' ಇಂದು ಅಬಲೆಯೇ? ಭವ್ಯ ಭಾರತ ನಿರ್ಮಾಣದಲ್ಲಿ ಸ್ತ್ರೀಯರ ಬಗ್ಗೆ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಕಂಡ ಕನಸು ಇದೇ ಏನು?

ಈ ಎಲ್ಲಾ ಅಂಶವನ್ನು ಪರಿಗಣಿಸಿದರೆ ಮುಂದಿನ ದಿನಗಳಲ್ಲಿ ಈ ಘಟನೆಗಳು ಮಾನವನ ಆತ್ಮಾವಲೋಕನದ ಹಾದಿಯಾ? ಅಥವಾ ಸ್ತ್ರೀ ಕುಲದ ವಿನಾಶದ ಪರಮಾವಧಿಯಾ? ಹೇಗೆ ನಿರ್ಧರಿಸುವುದು? "ಹೆಣ್ಣು ಎನ್ನುವುದು ಭೋಗದ ವಸ್ತು ಎಂದು ನಿರ್ಧರಿತಗೊಂಡಂತೆ ನಡೆಯುತ್ತಿದೆ ಎಂದರೆ ತಪ್ಪಾಗಲಾರದು, ಏಕೆಂದರೆ ತಾಯೊಡಲಿನ ಭ್ರೂಣಾವಸ್ಥೆಯಿಂದ ಹಿಡಿದು ಬಾಲ್ಯ, ಯೌವನಾವಸ್ಥೆ, ಗೃಹಸ್ಥಾಶ್ರಮ, ವೃದ್ಧಾಪ್ಯ ಹಾಗೂ ಜೀವಿತದ ಕೊನೆ ಉಸಿರಿನವರೆಗೂ ಅಭದ್ರತೆಯಿಂದ ಕೂಡಿರುವುದೇ





ಸಾಕ್ಷಿಯಾಗಿದೆ. ಈ ಸ್ತ್ರೀ ಸಂಕುಲದ ಉಳಿವಿಗಾಗಿ ಅಲ್ಲದೆ ಹೆಣ್ಣಿನ ಮೇಲೆ ದೌರ್ಜನ್ಯದಂತಹ ಅತಿರೇಕದ ಕೃತ್ಯಗಳು ನಡೆದಾಗ ಹಲವಾರು ಮಹಿಳಾ ಸಂಘಟನೆಗಳು ಬೀದಿಗಿಳಿದು ಹೋರಾಟ ನಡೆಸಿದ, ಪ್ರತಿಭಟಿಸಿದ ಸಂದರ್ಭಗಳು ಸಾವಿರಾರು.

ಏನೇ ಇರಲಿ ಸಮಾಜದ ಸ್ವಾಸ್ಥ್ಯಕ್ಕೆ ಮುಂದಿನ ಸ್ತ್ರೀ ಸಂಕುಲದ ಭದ್ರತೆಗೆ ಕೆಲವೊಂದು ಮಾರ್ಪಾಟುಗಳಾಗಬೇಕಿರುವುದಂತೂ ನಮ್ಮೆಲ್ಲರ ಹಾಗೂ ಕಾನೂನು ಕಾಯ್ದೆಗಳ ಜವಾಬ್ದಾರಿಯಾಗಿರುವುದು ಗಮನಾರ್ಹ ಅಂಶವಾಗಿದೆ. ಗರ್ಭ ಪೂರ್ವ ಮತ್ತು ಪ್ರಸವಪೂರ್ವ ಲಿಂಗಪತ್ತೆ ಕಾಯ್ದೆಯು ಕಟ್ಟುನಿಟ್ಟಾಗಿ ಜಾರಿಯಾಗುವುದು, ಈ ಕಾಯ್ದೆಯಡಿ ರಚಿಸಲಾಗಿರುವ ಜಿಲ್ಲಾ ಮತ್ತು ರಾಜ್ಯ ಸಮಿತಿಗಳು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುವುದು, ಲಿಂಗತ್ವದ ಕುರಿತು ಶಾಲಾ ಪಠ್ಯಕ್ರಮದಲ್ಲಿ ಸೇರಿಸುವುದು, ಅಪರಾಧಿಗಳು ಹಾಗೂ ಆರೋಪಿಗಳಿಗೆ ಜಾಮೀನು ರಹಿತ ಕಠಿಣ ಶಿಕ್ಷೆಗೆ ಒಳಪಡಿಸುವುದು, ಸಾಗಾಣಿಕೆ, ಮಾರಾಟದಂತಹ ದಂಧೆ ನಡೆಸುವ ದಲ್ಲಾಳಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವುದು, ಈ ಎಲ್ಲದರ ನಡುವೆ ನಮ್ಮ ಸುತ್ತಮುತ್ತ ನಡೆಯುವ ಹೆಣ್ಣು ಭ್ರೂಣಹತ್ಯೆಯ ವಿರುದ್ಧ ಸಾರ್ವಜನಿಕವಾಗಿ ಧ್ವನಿ ಎತ್ತುವುದು, ಇಂತಹ ಪ್ರಕರಣಗಳು ಕಂಡುಬಂದಲ್ಲಿ ಪ್ರತಿಯೊಬ್ಬರೂ ವೈಯಕ್ತಿಕವಾಗಿ ಅಧಿಕಾರಿ ಅಥವಾ ಇಲಾಖೆಗಳ ಗಮನಕ್ಕೆ ತರುವುದು. ಇತ್ಯಾದಿ ಕ್ರಮಗಳೊಂದಿಗೆ ಸಾಮಾಜಿಕ ಪಿಡುಗಾಗಿ ಪರಿಣಮಿಸುವ ಈ ಮಹಿಳಾ ದೌರ್ಜನ್ಯಕ್ಕೆ ಕಡಿವಾಣ ಹಾಕುವ ಪ್ರಕ್ರಿಯೆಯಲ್ಲಿ ತೊಡಗಬಹುದು.

ಮಹಿಳಾ ನೀತಿಯ ಬಗ್ಗೆ Working group ಮಾಡಬೇಕು. ಯೋಜನೆಗಳು, ಕಾನೂನು Frame work ಮಾಡಬೇಕು. ಮಹಿಳಾ ಶಿಕ್ಷಣ ಮತ್ತು ಸಾಕ್ಷರತೆ, ಮಹಿಳಾ ಆರೋಗ್ಯ, ಮಹಿಳಾ ಆರ್ಥಿಕ ಅಭಿವೃದ್ಧಿ, ಕೃಷಿ ಮಹಿಳೆಯರು ಮತ್ತು ಉದ್ಯೋಗ ತರಬೇತಿ, ಮಹಿಳೆಯರ ಮೇಲೆ ದೌರ್ಜನ್ಯ ಮತ್ತು ಅತ್ಯಾಚಾರ ಹಾಗೂ ರಾಜಕೀಯದಲ್ಲಿ ಮಹಿಳಾ ಸಶಕ್ತೀಕರಣ ಇದೆಲ್ಲದರ ಕುರಿತು ರಾಜ್ಯದಾದ್ಯಂತ ಸಂಚರಿಸಿ ಸಮೀಕ್ಷೆ ಮಾಡಿ ಸಮಗ್ರವಾದ ವರದಿ ತಯಾರಿಸಿ ಇಡೀ ಮಹಿಳಾ ಸಮುದಾಯದ ಅಭಿವೃದ್ಧಿಗಾಗಿ ಅನುಕೂಲವಾಗುವಂತಹ ಒಂದು ಯೋಜನೆಯೇ ಮಹಿಳಾ ಕ್ರಿಯಾ ಯೋಜನೆ (Women Task Force) ಯನ್ನು ವೈಚಾರಿಕ ದೃಷ್ಟಿಯಿಂದ ಪ್ರಸ್ತುತ ಸಮಗ್ರವಾಗಿ ಯೋಚಿಸಿ, ಕಾರ್ಯಯೋಜನೆ ಆರಂಭಿಸಬೇಕಾಗಿದೆ.

ಹಾಗೆಯೇ ಸರ್ಕಾರ ಮಹಿಳೆಯರ ಅಭಿವೃದ್ಧಿಗಾಗಿ ಏನು ಮಾಡುತ್ತಿಲ್ಲ ಎಂದರೆ ತಪ್ಪಾಗುತ್ತದೆ. ಸರ್ಕಾರ ಕೂಡ ಮಹಿಳೆಯರಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ. ಕಿಶೋರ ಶಕ್ತಿ ಯೋಜನೆ, ಪ್ರಾಯಪೂರ್ವ ಬಾಲಕಿಯರ ಯೋಜನೆ, ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ, ಭಾಗ್ಯಲಕ್ಷ್ಮಿ ಯೋಜನೆ, ಉಜ್ವಲ ಯೋಜನೆ, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಗೌರವಧನ, ಉದ್ಯೋಗಿನಿ ಯೋಜನೆ, ಕಿರುಸಾಲ ಯೋಜನೆ, ಚೇತನ ಯೋಜನೆ, ಸಮೃದ್ಧಿ ಯೋಜನೆ, ಮಾತೃಶ್ರೀ ಯೋಜನೆ, ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆ, ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ, ಸಾಂತ್ವಾನ ಕೇಂದ್ರ, ಉದ್ಯೋಗಸ್ಥ ಮಹಿಳೆಯರ ವಸತಿ ವ್ಯವಸ್ಥೆ, ಮುಂತಾದ ಸರ್ಕಾರದ ಪ್ರಮುಖ ಯೋಜನೆಗಳಿಂದ ಲಕ್ಷಾಂತರ ಹೆಣ್ಣು ಮಕ್ಕಳು ಮತ್ತು ಮಹಿಳೆಯರು ವಿವಿಧ ಸೌಲಭ್ಯಗಳನ್ನು ಪಡೆದುಕೊಂಡು ಸಶಕ್ತರಾಗುತ್ತಿದ್ದಾರೆ.

**ಮಹಿಳೆಯರ ನೆರವಿಗಾಗಿ ಸಹಾಯವಾಣಿ**

ದೌರ್ಜನ್ಯಕ್ಕೊಳಗಾಗುವ ಮಹಿಳೆಯರಿಗೆ ತುರ್ತು ರಕ್ಷಣೆ ಮತ್ತು ನೆರವು ನೀಡುವ ಸಲುವಾಗಿ 24 ಗಂಟೆಗಳ ಕಾಲ ಕಾರ್ಯನಿರ್ವಹಿಸುವ ಮಹಿಳಾ ಸಹಾಯವಾಣಿ 181 ಅನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಪ್ರಾರಂಭಿಸಿದೆ. ಈ ಸಹಾಯವಾಣಿಯ ಮೂಲಕ ಮಹಿಳೆಯರಿಗಾಗಿ ಇಲಾಖೆಯಲ್ಲಿರುವ ಯೋಜನೆಗಳ ಕುರಿತು ಕೂಡ ಮಾಹಿತಿಯನ್ನು ಮಹಿಳೆಯರು ಪಡೆದುಕೊಳ್ಳಬಹುದು.

ಮಹಿಳೆಯ ಅಭಿವೃದ್ಧಿಗಾಗಿ ಯೋಜನೆಗಳನ್ನು ಹಮ್ಮಿಕೊಳ್ಳುವ ಜೊತೆಗೆ ಮಹಿಳಾ ಸಶಕ್ತೀಕರಣಕ್ಕಾಗಿ ಉದ್ಯೋಗಸ್ಥ ಮಹಿಳೆಯರ ಸಮಸ್ಯೆ, ಆರೋಗ್ಯ ಸಮಸ್ಯೆ ರಾಜ್ಯದ ಗಡಿಭಾಗಗಳಲ್ಲಿ ಅಪೌಷ್ಟಿಂಕಾಶದ ಕೊರತೆಯ ಬಗ್ಗೆ, ದೇವದಾಸಿ ಮತ್ತು ಮಂಗಳಮುಖಿಯರ ಸಮಸ್ಯೆಗಳು, ಕೃಷಿಯಲ್ಲಿ ಮಹಿಳೆಯರ ಪಾತ್ರ, ರೈತ ಮಹಿಳೆಯರ ಸಮಸ್ಯೆಗಳು, ಶೈಕ್ಷಣಿಕ ಕ್ಷೇತ್ರದಲ್ಲಿ ಮಹಿಳೆಯರ ಸಮಸ್ಯೆಗಳು, ಮಹಿಳೆಯರ ಆರ್ಥಿಕ ಸ್ವಾವಲಂಬನೆ, ಮಹಿಳೆಯರ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ, ವರದಕ್ಷಿಣೆಯ ಸಮಸ್ಯೆ, ಕೌಟುಂಬಿಕ ಸಮಸ್ಯೆ, ಲಿಂಗಭೇದ, ರಾಜಕೀಯದಲ್ಲಿ ಮಹಿಳಾ ಸಶಕ್ತೀಕರಣದ ಜಾಗೃತಿ, ಗ್ರಾಮೀಣ ಮಹಿಳೆಯರ ಸಮಸ್ಯೆಗಳು, ಸಾರ್ವಜನಿಕವಾಗಿ ಮತ್ತು ಮಾಧ್ಯಮದಲ್ಲಿ ಮಹಿಳೆಯ ವೈಭವೀಕರಣ, ಮಹಿಳಾ ಸಂಬಂಧದ ಕಾನೂನುಗಳ ಪುನರ್ ಪರಿಶೀಲನೆ, ಮಹಿಳಾ ಕಾರ್ಮಿಕರ ಬವಣೆಗಳು, ಹಾಗೂ ಕಾಣೆಯಾಗುತ್ತಿರುವ ಹುಡುಗಿಯರ ಬಗ್ಗೆ ಅಧ್ಯಯನಗಳನ್ನು ಕಾಲಕಾಲಕ್ಕೆ ನಡೆಸುತ್ತಿದ್ದರೆ ಮಹಿಳೆಯರ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸಲು ಸಹಾಯವಾಗಲಿದೆ.





downloaded from: www.kpscvaani.com





# ಉದ್ಯಾನ ನಗರದಲ್ಲಿ ಮೇಳೈಸಿದ ಸಿರಿಧಾನ್ಯಗಳ ಸೊಬಗು

ಸಿ.ಆರ್.ಮಂಜುನಾಥ್

**ಒ**ತ್ತಡದ ಜೀವನದಿಂದ ಬೇಸತ್ತ ನಗರದ ಜನತೆ ಆಗಾಗ ಬದಲಾವಣೆಗೆ ಹಾತೊರೆಯುತ್ತಲೇ ಇರುತ್ತಾರೆ. ಯಾವುದೇ ಸಣ್ಣ ಮಟ್ಟ ಸಭೆ, ಸಮಾರಂಭ, ಮನರಂಜನಾ ಕಾರ್ಯಕ್ರಮಗಳಿದ್ದರೆ ಸಾಕು ಬೇಸರ ಕಳೆಯಲು ಹೊರಟು ನಿಲ್ಲುತ್ತಾರೆ. ಅಂತಹ ಒಂದು ವಿಶಿಷ್ಟ ಕಾರ್ಯಕ್ರಮವೊಂದನ್ನು ರಾಜ್ಯ ಸರ್ಕಾರ ಅರಮನೆ ಮೈದಾನದಲ್ಲಿ, ಅಪ್ಪಟ ಹಳ್ಳಿಯ ಸೊಗಡಿನಲ್ಲಿ ಏರ್ಪಡಿಸಿತ್ತು.

ಅದುವೇ ಕೃಷಿ ಇಲಾಖೆ ಆಯೋಜಿಸಿದ್ದ ಸಾವಯವ ಹಾಗೂ ಸಿರಿಧಾನ್ಯಗಳ ಅಂತರಾಷ್ಟ್ರೀಯ ಮೇಳ. ಮೂರು ದಿನಗಳ ಈ ಮೇಳ ರೈತರ ಮನದಲ್ಲಿ ಹೊಸ ಭರವಸೆ ಮೂಡಿಸಿದ್ದಲ್ಲದೇ ಕೋಟ್ಯಾಂತರ ರೂಪಾಯಿ ವಹಿವಾಟಿಗೆ ದಾರಿ



ಮಾಡಿಕೊಟ್ಟಿತು. ಇದಿಷ್ಟೇ ಅಲ್ಲದೇ ಜನ ಮೇಳದಲ್ಲಿ ಸಿರಿಧಾನ್ಯ ಹಾಗೂ ಸಾವಯವ ಬೆಳೆಗಳು ಹಾಗೂ ಅವುಗಳಿಂದ ತಯಾರಿಸಿದ ಖಾದ್ಯಗಳನ್ನ ಸವಿದು ಸಂಭ್ರಮಿಸಿದರು.

ಗ್ರಾಮೀಣ ಪ್ರದೇಶಗಳ ಮಳಿಗೆಗಳಿಂದ ಆರಂಭವಾಗಿ ಹೊರ ರಾಜ್ಯಗಳಲ್ಲೂ ಮಾರುಕಟ್ಟೆ ಹೊಂದಿರುವ ಸಂಸ್ಥೆಗಳು ತಮ್ಮ ಸಿರಿಧಾನ್ಯ ಹಾಗೂ ಸಾವಯವ ಉತ್ಪನ್ನಗಳನ್ನ ಪ್ರದರ್ಶನಕ್ಕಿಟ್ಟಿದ್ದವು. ಛತ್ತೀಸ್‌ಗಢ, ಅಸ್ಸಾಂ, ಹಿಮಾಚಲಪ್ರದೇಶ, ಪಂಜಾಬ್ ಸೇರಿದಂತೆ 10 ರಾಜ್ಯಗಳ ಸುಮಾರು 350ಕ್ಕೂ ಅಧಿಕ ಮಳಿಗೆಗಳು ತಲೆಯೆತ್ತಿದ್ದು, ರಾಜ್ಯದ ನಾನಾ ಭಾಗಗಳಿಂದ ಸಹಸ್ರಾರು ರೈತರು ಭಾಗವಹಿಸಿದ್ದು ಮೇಳದ ವೈಶಿಷ್ಟ್ಯತೆಯಾಗಿತ್ತು. ಇದು ದೇಶದ ಅತಿ ದೊಡ್ಡ ವಾಣಿಜ್ಯ ಮೇಳವಾಗಿದ್ದು, ಸಾವಯವ ವಲಯ ಮತ್ತು ಸಿರಿಧಾನ್ಯ ಸಮುದಾಯದ ಸಮಾಗಮದ ಜೊತೆಗೆ ಕಲಿಕೆ ಮತ್ತು ವ್ಯಾಪಾರಕ್ಕೆ ವೃತ್ತಿಪರ ವೇದಿಕೆಯನ್ನ ಕಲ್ಪಿಸಿತ್ತು. ರಾಜ್ಯದ ರೈತರಿಗೆ ಕನ್ನಡದಲ್ಲಿ ಪ್ರತ್ಯೇಕ ಕಾರ್ಯಾಗಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು.

---

"ಇಂದು ಆರೋಗ್ಯಕರ ಜೀವನಕ್ಕೆ ಒತ್ತು ಕೊಡುತ್ತಿರುವ ನಗರದ ಜನ, ಸಿರಿಧಾನ್ಯಗಳ ಬಳಕೆಗೆ ಅತೀವ ಆಸಕ್ತಿ ತೋರಿಸುತ್ತಿದ್ದಾರೆ. ಹೀಗಾಗಿ ಮುಂದಿನ ದಿನಗಳಲ್ಲಿ ಸಿರಿಧಾನ್ಯಗಳನ್ನ ಬೆಳೆಯುವ ರೈತರಿಗೆ ವಿಶೇಷವಾದ ಪ್ರೋತ್ಸಾಹ ಹಾಗೂ ಸೂಕ್ತ ಮಾರುಕಟ್ಟೆ ಕಲ್ಪಿಸಲು ಚಿಂತನೆ ನಡೆಸಲಾಗುತ್ತಿದೆ." "ರೈತರು ಕೃಷಿಯಲ್ಲಿ ತಂತ್ರಜ್ಞಾನದ ಬಳಕೆ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಕೊಂಡು ಸ್ವಾವಲಂಬಿಗಳಾಗಬೇಕು. ಪ್ರಸ್ತುತ ಜಾಗತಿಕ ಮಾರುಕಟ್ಟೆಯಲ್ಲಿ ಸಿರಿಧಾನ್ಯಗಳ ಬೇಡಿಕೆ ಹೆಚ್ಚುತ್ತಿರುವುದರಿಂದ, ಇದನ್ನ ಸದುಪಯೋಗಪಡಿಸಿಕೊಂಡು ರೈತರು ಆರ್ಥಿಕ ಪ್ರಗತಿ ಸಾಧಿಸಬಹುದು."

–ಕೃಷಿ ಸಚಿವ ಎನ್ ಎಚ್ ಶಿವಶಂಕರೆಡ್ಡಿ

---

### ಸಾವಯವ ರೈತರಿಗೆ ಉತ್ತೇಜನ

ಈ ಮೇಳವು ಮಾರುಕಟ್ಟೆ ವಿಸ್ತರಣೆಗೆ ನೆರವಾಗಿದ್ದಲ್ಲದೇ ರೈತರನ್ನ ಉತ್ತೇಜಿಸುವುದಕ್ಕೂ ವೇದಿಕೆಯಾಗಿತ್ತು. ದಿ ಆರ್ಗಾನಿಕ್ ವರ್ಲ್ಡ್ ಮಳಿಗೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ತರಕಾರಿ ಮಾರಾಟಕ್ಕಿಡಲಾಗಿತ್ತು, ಹಾಗೆಯೇ ಸೇಫ್ ಹಾರ್ವೆಸ್ಟ್ ಸಂಸ್ಥೆಯು ಅನೇಕ ಗ್ರಾಮಗಳ ರೈತರ ಜತೆಗೆ ಸಂಪರ್ಕ ಹೊಂದಿದ್ದು, ಸಾವಯವ ವಿಧಾನದಲ್ಲಿ ಕೃಷಿ ಮಾಡುವಂತೆ ಪ್ರೋತ್ಸಾಹ ನೀಡುತ್ತಿದೆ. ದ್ವಿದಳ ಧಾನ್ಯ, ಸಿರಿಧಾನ್ಯ, ಮಸಾಲೆ ಪದಾರ್ಥಗಳನ್ನು ಸಾವಯವ ಪದ್ಧತಿಯಲ್ಲಿ ಬೆಳೆದರೆ ಅದಕ್ಕೆ ಮಾರುಕಟ್ಟೆ ಒದಗಿಸುವ ಕೆಲಸವನ್ನು ಸಂಸ್ಥೆ ಮಾಡುತ್ತಿದೆ.

### ಸಿರಿಧಾನ್ಯದ ಸಿಹಿ ಸವಿ ತಿನಿಸುಗಳು

ಬಾಯಲ್ಲಿ ನೀರೂರಿಸುವ ತಿಂಡಿ ತಿನಿಸುಗಳೇ ಮೇಳದ ಪ್ರಮುಖ ಆಕರ್ಷಣೆ. ಆಹಾರ ಮಳಿಗೆಯಲ್ಲಿ ಸಿರಿಧಾನ್ಯದಿಂದ ಮಾಡಿದ ಇಡ್ಲಿ, ಮಸಾಲೆ ದೋಸೆ, ಪಲಾವ್, ಕೇಸರಿ ಬಾತ್ ಕೇರಳ ಪುಟ್ಟು, ರಾಗಿ ರೊಟ್ಟಿ, ಪುಳಿಯೋಗರೆ, ಬಿಸಿಬೇಳೆಬಾತ್, ಉಪ್ಪಿಟ್ಟು, ಹೋಳಿಗೆ ಸೇರಿದಂತೆ ನಾನಾ ಬಗೆಯ ತಿಂಡಿಗಳು ಲಭ್ಯವಿದ್ದವು. ರಾಮಯ್ಯ ವಿಶ್ವವಿದ್ಯಾಲಯದಿಂದ 'ಖಾನಾವಳಿ ಅಡುಗೆ ಕಾರ್ಯಕ್ರಮ' ಏರ್ಪಡಿಸಲಾಗಿತ್ತು. ತಾಜ್ ಹೋಟೆಲ್‌ನ ಬಾಣಸಿಗ ಮಂಜಣ್ಣ

**ರಾಜ್ಯದ ನಾನಾ ಭಾಗದ ರೈತರು ಸೇರಿದಂತೆ ಒಟ್ಟು ಸುಮಾರು 2 ಲಕ್ಷ ಜನ ಮೂರು ದಿನಗಳ ಮೇಳಕ್ಕೆ ಭೇಟಿ ನೀಡಿದ್ದರು. ವಿಶಿಷ್ಟ ರೂಪದಲ್ಲಿ ಅನಾವರಣಗೊಂಡಿದ್ದ ಸಾವಯವ ಮತ್ತು ಸಿರಿಧಾನ್ಯಗಳ ಅಂತರಾಷ್ಟ್ರೀಯ ಮೇಳ ಕೃಷಿ ಕ್ಷೇತ್ರದಲ್ಲಿನ ಹೊಸ, ಹೊಸ ಸಾಧ್ಯತೆಗಳಿಗೆ ವೇದಿಕೆಯಾಯ್ತು**





downloaded from: www.kpscvaani.com

"21ನೇ ಶತಮಾನದ ಪ್ರಜ್ಞಾವಂತ ಆಹಾರ ನಮ್ಮ ರಾಜ್ಯದ ಮೂಲದ್ದು. ಇಡೀ ವಿಶ್ವದಲ್ಲೇ ರಾಜ್ಯದ ಸಿರಿಧಾನ್ಯ ಗುರುತಿಸಿಕೊಂಡಿದೆ. 2023ನ್ನು ವಿಶ್ವ ಸಿರಿಧಾನ್ಯ ದಿನವನ್ನಾಗಿ ಆಚರಿಸಲು ವಿಶ್ವಸಂಸ್ಥೆ ನಿರ್ಧರಿಸಿದೆ. ಇದು ವಿಶ್ವಕ್ಕೆ ಕರ್ನಾಟಕದ ಕೊಡುಗೆ."

– ಗ್ರಾಮೀಣಾಭಿವೃದ್ಧಿ ಹಾಗೂ
ಪಂಚಾಯತ್ ರಾಜ್ ಸಚಿವ ಕೃಷ್ಣ ಬೈರೇಗೌಡ

ಸಿರಿಧಾನ್ಯದಿಂದ ಪಡ್ಡು, ಬಿಸಿಬೇಳೆಬಾತ್ ತಯಾರಿಸುವುದನ್ನು ಹೇಳಿಕೊಟ್ಟರು.

**ಅದಮ್ಯ ಚೇತನದಿಂದ ಪರಿಸರ ಕಾಳಜಿ**

ಮತ್ತೊಂದು ಗಮನಾರ್ಹ ವಿಷಯವೆಂದರೆ, ಸಿರಿಧಾನ್ಯ ಮೇಳದ ಆಹಾರ ಮಳಿಗೆಗಳಿಗೆ ಅದಮ್ಯ ಚೇತನ ಸಂಸ್ಥೆಯು ಉಚಿತವಾಗಿ 20 ಸಾವಿರ ಸ್ಟೀಲ್ ತಟ್ಟೆ, 20 ಸಾವಿರ ಸ್ಟೀಲ್ ಲೋಟ, 50 ಸಾವಿರ ಸ್ಟೀಲ್ ಚಮಚ ಒದಗಿಸಿತ್ತು. ಯಾರು ಬೇಕಾದರು ತಮ್ಮ ಗುರುತಿನ ಚೀಟಿ ನೀಡಿ, ಇವುಗಳನ್ನ ಪಡೆದುಕೊಳ್ಳಬಹುದಾಗಿತ್ತು. ಪ್ಲಾಸ್ಟಿಕ್ ನಿಷೇಧ ಹಾಗೂ ಪರಿಸರ ಕಾಳಜಿ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಅದಮ್ಯ ಚೇತನ ಈ ಕ್ರಮಕೈಗೊಂಡಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯ್ತು.

**ಚಿತ್ರಕಲಾ ಸ್ಪರ್ಧೆ**

ಕೃಷಿ ಇಲಾಖೆಯು 5 ರಿಂದ 16 ವರ್ಷ ವಯಸ್ಸಿನ ಮಕ್ಕಳಿಗೆ ಸಿರಿಧಾನ್ಯ ಹಾಗೂ ಸಾವಯವ ಧಾನ್ಯಗಳ ಮಹತ್ವ ಮತ್ತು ಉಪಯೋಗಗಳ ಕುರಿತು ಚಿತ್ರಕಲಾ ಸ್ಪರ್ಧೆ ಏರ್ಪಡಿಸಿತ್ತು.

**ವಿನೂತನ ಆವಿಷ್ಕಾರಗಳಿಗೆ ವೇದಿಕೆ**

ಮೇಳವು ಅನೇಕ ವಿನೂತನ ಅನ್ವೇಷಣೆಗಳಿಗೆ ವೇದಿಕೆಯಾಯ್ತು. ಮನೆಯಲ್ಲಿಯೇ ಕಸದಿಂದ ಗೊಬ್ಬರ ತಯಾರಿಸುವ ವಿಧಾನವನ್ನು ಯಲಹಂಕ ವಲಯದ ಲಿಂಕ್ ಕಾರ್ಯಕರ್ತರಾದ ವಸಂತ ಮತ್ತು ರೇವತಿ ಹೇಳಿಕೊಟ್ಟರು. ಗ್ರೀನ್ ಟೀ ರೀತಿಯಲ್ಲಿಯೇ ಗ್ರೀನ್ ಕಾಫಿಯನ್ನ ಕೂಡಾ ಮೇಳದಲ್ಲಿ ಪರಿಚಯಿಸಲಾಗಿತ್ತು.

ಸಿರಿಧಾನ್ಯವನ್ನು ಸಂಸ್ಕರಿಸಿ ಕಸ ತೆಗೆಯುವ ಹಾಗೂ ಹಿಟ್ಟು ಮಾಡುವ ಗಿರಣಿ ಯಂತ್ರಗಳನ್ನು ಹಲವು ಕಂಪನಿಗಳು ಪ್ರದರ್ಶಿಸಿದ್ದವು.

ಮನೆಯಲ್ಲೇ ತಯಾರಿಸಬಹುದಾದ ಹೊಟ್ಟು ತೆಗೆಯುವ ಯಂತ್ರವನ್ನು ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ ಅತಿ ಕಡಿಮೆ ವೆಚ್ಚದಲ್ಲಿ ಆವಿಷ್ಕರಿಸಿದೆ. ಸಾಮೆ, ನವಣೆ ಹಾಗೂ ಬರಗು ಧಾನ್ಯಗಳ ಹೊಟ್ಟು ತೆಗೆಯಲು ಈ ಯಂತ್ರ ಸಹಕಾರಿಯಾಗಿದೆ. ಪ್ರತಿ ಧಾನ್ಯಕ್ಕೆ ಒಂದೊಂದು ವೇಗ ನಿಗದಿಪಡಿಸಲಾಗಿದೆ. ಆಸಕ್ತರು ತಮ್ಮ ಮನೆಯಲ್ಲೇ ಯಂತ್ರ ತಯಾರಿಸಿಕೊಳ್ಳಬೇಕಂದ್ರೆ ಅದಕ್ಕೆ ಸಂಬಂಧಿಸಿದಂತೆ ಸೂಕ್ತ ಮಾಹಿತಿ ನೀಡುತ್ತದೆ. www.cftri.com ನಲ್ಲಿ ಟೆಕ್ನಾಲಜಿ ಡೆವಲಪ್‌ಮೆಂಟ್ ವಿಭಾಗದಲ್ಲಿ ತಯಾರಿಕೆಯ ವಿವರಗಳು ಲಭ್ಯವಿದೆ.

**ಬಿಸಿಯೂಟ, ಇಂದಿರಾ ಕ್ಯಾಂಟೀನ್ ಮತ್ತು ಸೈನಿಕರಿಗೆ ಸಿರಿಧಾನ್ಯಗಳ ಆಹಾರ**

ಬಿಸಿಯೂಟ, ಇಂದಿರಾ ಕ್ಯಾಂಟೀನ್ ಮತ್ತು ಸೈನಿಕರಿಗೆ ಸಿರಿಧಾನ್ಯಗಳ ಆಹಾರ ವಿತರಣೆ ಮಾಡುವ ಬಗ್ಗೆ ಮಾತುಗಳು ಕೇಳಿಬಂತು. ಮುಖ್ಯಮಂತ್ರಿ ಕುಮಾರಸ್ವಾಮಿ ಅವರು "ಬಿಸಿಯೂಟ ಮತ್ತು ಇಂದಿರಾ ಕ್ಯಾಂಟೀನ್‌ನಲ್ಲಿ ಸಿರಿಧಾನ್ಯಗಳ ಆಹಾರ ಪೂರೈಕೆಗೆ ಚಿಂತನೆ ನಡೆದಿದೆ" ಎಂಬ ವಿಷಯವನ್ನು ತಿಳಿಸಿದರು. ಹಾಗೆಯೇ ಮೈಸೂರಿನ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯವು ಗಡಿ ಕಾಯುವ ಸೈನಿಕರಿಗೆಂದೆ ಸಿರಿಧಾನ್ಯಗಳಿಂದ ತಯಾರಿಸಿದ ತಿನಿಸುಗಳನ್ನು ಪೂರೈಸಲು ಸಿದ್ಧತೆ ನಡೆಸಿದೆ. ಭಾರತೀಯ ಸೇನೆಯು ಇವುಗಳನ್ನ ಪರಿಶೀಲಿಸಿ ಶೀಘ್ರದಲ್ಲಿ ಒಪ್ಪಿಗೆ ನೀಡಲಿದೆ ಎಂಬ ಸಂಗತಿಯನ್ನು ಸಂಸ್ಥೆಯ ತಾಂತ್ರಿಕ ಅಧಿಕಾರಿ ವಸುದೇಶ್ ತಿಳಿಸಿದರು.

**ರೈತರ ಉತ್ಪಾದಕರ ಸಂಸ್ಥೆಗಳ ನೀತಿ–2018**

ರೈತರ ಬಲವರ್ಧನೆ ಹಾಗೂ ಸಿರಿಧಾನ್ಯಗಳ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ರೈತರ ಉತ್ಪಾದಕರ ಸಂಸ್ಥೆಗಳ ನೀತಿ–2018 ಹೊರತಂದಿತು. ಇದರಡಿ ಮುಂದಿನ ಐದು ವರ್ಷಗಳಲ್ಲಿ ಅಗತ್ಯಕ್ಕೆ ಅನುಗುಣವಾಗಿ ಪ್ರತಿ ಹೋಬಳಿ ಮಟ್ಟದಲ್ಲಿ ಕನಿಷ್ಠ ಒಂದು ರೈತ ಉತ್ಪಾದಕರ ಸಂಸ್ಥೆ ಸ್ಥಾಪಿಸುವ ಗುರಿ ಹೊಂದಲಾಗಿದೆ. ಈ ಮೂಲಕ ಐದು ಲಕ್ಷ ರೈತರನ್ನು ಸಂಘಟಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆ. ಮೇಳದ ಆರಂಭದ ದಿನ ಮುಖ್ಯಮಂತ್ರಿ ಕುಮಾರಸ್ವಾಮಿ ಇದನ್ನು ಬಿಡುಗಡೆಗೊಳಿಸಿದರು. ಈ ಯೋಜನೆಯಡಿಯಲ್ಲಿ ಸಣ್ಣ ರೈತರಿಗೆ ತಂತ್ರಜ್ಞಾನಗಳ ವರ್ಗಾವಣೆ, ಸೂಕ್ತ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಒದಗಿಸಲಾಗುವುದು.

**ಕೋಟ್ಯಾಂತರ ವಹಿವಾಟು, ಹತ್ತಾರು ಒಪ್ಪಂದಗಳು**

ಮೂರು ದಿನಗಳ ಕಾಲ ನಡೆದ ಸಾವಯವ ಹಾಗೂ ಸಿರಿಧಾನ್ಯಗಳ ಮೇಳ ನೂರಾರು ಕೋಟಿ ರೂಪಾಯಿ ವಹಿವಾಟಿಗೆ ವೇದಿಕೆಯಾಯ್ತು. ಸುಮಾರು 240 ಕೋಟಿ ರೂಪಾಯಿಗಳ ವಹಿವಾಟು ನಡೆದಿದ್ದು, 67 ಒಪ್ಪಂದಗಳಿಗೆ ಸಹಿ ಹಾಕಲಾಯ್ತು. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಖರೀದಿದಾರರು 59,511 ಮೆಟ್ರಿಕ್ ಟನ್ ಸಿರಿಧಾನ್ಯಗಳನ್ನು ಖರೀದಿಸಲು ನೇರವಾಗಿ ರೈತರೊಂದಿಗೆ ಒಪ್ಪಂದ ಮಾಡಿಕೊಂಡರು. ಈ ಮೂಲಕ ಇಡೀ ವಿಶ್ವಕ್ಕೆ ಸಿರಿಧಾನ್ಯಗಳ ಮಹತ್ವ ಪರಿಚಯಿಸಿದ ಕೀರ್ತಿ ರಾಜ್ಯಕ್ಕೆ ಸಲ್ಲಲಿದೆ.

**ಸಾಧಕರಿಗೆ ಸಿರಿ–2019 ಪ್ರಶಸ್ತಿ**

ಮೇಳದ ಕೊನೆಯ ದಿನ ಸಾವಯವ ಹಾಗೂ ಸಿರಿಧಾನ್ಯ ಬೆಳೆಗಳಿಗೆ ಸಂಬಂಧಿಸಿದಂತೆ 7 ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಸಿರಿ–2019 ಪ್ರಶಸ್ತಿ ನೀಡಲಾಯ್ತು. ಪ್ರಶಸ್ತಿಯು ಫಲಕ, ಪ್ರಮಾಣಪತ್ರ ಹಾಗೂ 30 ಸಾವಿರ ರೂ. ನಗದು ಬಹುಮಾನ ಒಳಗೊಂಡಿತ್ತು.

ರಾಜ್ಯದ ನಾನಾ ಭಾಗದ ರೈತರು ಸೇರಿದಂತೆ ಒಟ್ಟು ಸುಮಾರು 2 ಲಕ್ಷ ಜನ ಮೂರು ದಿನಗಳ ಮೇಳಕ್ಕೆ ಭೇಟಿ ನೀಡಿದ್ದರು. ವಿಶಿಷ್ಟ ರೂಪದಲ್ಲಿ ಅನಾವರಣಗೊಂಡಿದ್ದ ಸಾವಯವ ಮತ್ತು ಸಿರಿಧಾನ್ಯಗಳ ಅಂತರಾಷ್ಟ್ರೀಯ ಮೇಳ ಕೃಷಿ ಕ್ಷೇತ್ರದಲ್ಲಿನ ಹೊಸ, ಹೊಸ ಸಾಧ್ಯತೆಗಳಿಗೆ ವೇದಿಕೆಯಾಯ್ತು ಎಂಬುದು ಹೆಮ್ಮೆಯ ವಿಚಾರ. ■



# ಮಂಗನ ಕಾಯಿಲೆ ಆತಂಕ ಬೇಡ

ಡಾ. ಕರವೀರಪ್ರಭು ಕ್ಯಾಲಕೊಂಡ

ಶಿವಮೊಗ್ಗ ಜಿಲ್ಲೆಯ ಕೊನ್ನೂರ ಗ್ರಾಮದಲ್ಲಿ ಜ್ವರ ಪೀಡಿತ ರೋಗಿಗಳು 1955ರ ಡಿಸೆಂಬರ್‌ನಲ್ಲಿ ಕಂಡು ಬಂದಾಗ, ವೈದ್ಯರು ಬಾರಿಸಿದ ಎಚ್ಚರಿಕೆಯ ಗಂಟೆಯನಾದ ಯಾರ ಕಿವಿಯ ತಮ್ಮಟೆಯನ್ನು ತಟ್ಟಲಿಲ್ಲ. 1957ರ ಮಾರ್ಚ್‌ನಲ್ಲಿ ಕ್ಯಾಸನೂರ ಕಾಡಿನಲ್ಲಿ ಮಂಗಗಳ ಸಾಂಕ್ರಾಮಿಕ ಸಾವು ಮತ್ತು ಅದೇ ವೇಳೆಗೆ ಮಂಗಗಳಿಂದ ಮನುಷ್ಯರಿಗೆ ರೋಗ ತಗುಲಿದ ವರದಿಗಳು ನಾಡಿನ ನಾನಾ ಪೇಪರಿನಲ್ಲಿ ದಪ್ಪಕ್ಷರದಲ್ಲಿ ಅಚ್ಚಾಗಿ ಜನರ ಚಿತ್ತ ಸೆಳೆಯುವ ಹೊತ್ತಿಗೆ 200 ಚ.ಮೀ.ನಷ್ಟು ಉದ್ದಗಲಗಳವರೆಗೆ ತನ್ನ ಕರಾಳ ಛಾಯೆಯನ್ನು ಚೆಲ್ಲಿತ್ತು. 1964ರಲ್ಲಿ 1500 ಚ.ಮೀ.ಕ್ಕಿಂತಲೂ ಹೆಚ್ಚಿನ ಭಾಗವನ್ನು ಆಕ್ರಮಿಸಿ ಜನರನ್ನು ತಲ್ಲಣಗೊಳಿಸಿತ್ತು.

1960ರ ವರೆಗೆ ಕಾಡಿನ ಮಂಗಗಳಲ್ಲಿಯೇ ಹೆಚ್ಚಾಗಿ ಕಾಣುತ್ತಿದ್ದರೂ, ಆಗಾಗ ಮನುಷ್ಯರಲ್ಲಿಯೂ ಈ ರೋಗ ಕಂಡು ಬರುತ್ತಿತ್ತು. ಹೀಗಾಗಿ ಯಾರ ಗಮನವನ್ನೂ ಸೆಳೆಯುತ್ತಿರಲಿಲ್ಲ. 1968–69 ಮತ್ತು 1974–75ರಲ್ಲಿ ಇದು ಪಿಡುಗು ರೂಪಕ್ಕೆ ತಿರುಗಿತು. ಭಾರತಿಯ ವೈದ್ಯಕೀಯ ಸಂಶೋಧನಾ ಮಹಾಮಂಡಳಿ ಮತ್ತು ರಾಕ್ ಫೆಲ್ಲರ್ ದತ್ತಿ ಯವರು ಜಂಟಿ ಸಂಶೋಧನೆ ಕೈಗೆತ್ತಿಕೊಂಡರು. ರೋಗಕ್ಕೆ ಬಲಿಯಾದ ಮಂಗವೊಂದನ್ನು ವೈದ್ಯಕೀಯ ಪರೀಕ್ಷೆ ಗೊಳಪಡಿಸಿದಾಗ, ಅದರ ಮೆದುಳಿನಿಂದ ರೋಗಕ್ಕೆ ಕಾರಣೀಭೂತವಾದ ವೈರಸ್ ಅನ್ನು ಮೊಟ್ಟ ಮೊದಲಿಗೆ ಪತ್ತೆ ಹಚ್ಚಲಾಯಿತು. ರಕ್ತದ ಪರೀಕ್ಷೆಯಿಂದ ಈ ವೈರಸ್ ರಶಿಯಾದ ಸ್ಪ್ರಿಂಗ್ ಎನ್ ಕೆಫಲೈಟಿಸ್ ಎಂಬ ವೈರಸ್ ಗುಂಪಿಗೆ ಸೇರಿದ್ದು ಎಂದು ಖಚಿತವಾಯಿತು.

**ರೋಗದ ವ್ಯಾಪ್ತಿ:** ಈ ರೋಗದ ವ್ಯಾಪ್ತಿ ಪ್ರಾರಂಭಿಕ ಹಂತದಲ್ಲಿ ಕ್ಯಾಸನೂರು ಕಾಡಿನ ಪರಿಧಿಗೆ ಮಾತ್ರ ಸೀಮಿತವಾಗಿತ್ತು. ಅಂತಲೇ ಇದು ಜಾಗತಿಕ ಆರೋಗ್ಯ ಸಂಸ್ಥೆಯ ರೋಗಗಳ ಪಟ್ಟಿಯಲ್ಲಿ "ಕ್ಯಾಸನೂರು ಕಾಡಿನ ಕಾಯಿಲೆ" ಎಂದೇ ಅಧಿಕೃತವಾಗಿ ದಾಖಲಾಯಿತು. ಇದು ಮಂಗಗಳಿಂದ ಮಾನವರಿಗೆ ಬರುವ ಬೇನೆ ಎಂಬ ನಂಬಿಕೆಯಿಂದ "ಮಂಗನ ಕಾಯಿಲೆ "ಎಂದು ಸ್ಥಳೀಯರು ಕರೆಯುತ್ತಾರೆ. ಇತ್ತೀಚಿನ ಅಧ್ಯಯನದಂತೆ ಶಿವಮೊಗ್ಗ ಜಿಲ್ಲೆಯ ಸೊರಬ, ಸಾಗರ ಮತ್ತು ಶಿಕಾರಿಪುರ ತಾಲೂಕುಗಳು, ಕಾರವಾರ ಜಿಲ್ಲೆಯ ಹೊನ್ನಾವರ ತಾಲೂಕನ್ನು, ದಕ್ಷಿಣ ಕನ್ನಡ ಜಿಲ್ಲೆಯ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಗಡಿ ಪ್ರದೇಶಗಳ ಹಳ್ಳಿಗಳಿಗೆ ಹಬ್ಬಿದೆ. ಕ್ಯಾಸನೂರು ಕಾಡಿನ ಕಾಯಿಲೆ ಪ್ರಕೃತಿಯ ಮೇಲೆ ಮಾನವನ ಅತಿಕ್ರಮಣದಿಂದ ಉಂಟಾದ ಪರಿಣಾಮ."ಕಾಡು ಕಡಿದು ಕಾಯಿಲೆ ಬಂತು"ಎಂಬ ಮಾತು ಈ ರೋಗದಲ್ಲಿ ನೂರಕ್ಕೆ ನೂರು ಸತ್ಯ.

**ರೋಗ ಕಾರಕ :**ಕ್ಯಾಸನೂರು ಕಾಡಿನ ಕಾಯಿಲೆಯ ರೋಗಕಾರಕ ವಿಷಾಣು ರೋಬ್ಯವೈರಸ್ 'ಬಿ'ಗುಂಪಿನ ಜಾತಿಗೆ ಸೇರಿದೆ. ಮಾನವ ಶರೀರ ಸೇರಿದ ಪ್ರಾರಂಭದ 5 ದಿನಗಳ ವರೆಗೆ ಈ ವೈರಸ್ ರಕ್ತದಲ್ಲಿ ಸಂಚರಿಸುವುದರಿಂದ ಇದನ್ನು ರೋಗಿಯ ರಕ್ತದಿಂದ ಬೇರ್ಪಡಿಸಬಹುದು. ಆದರೆ, 11 ದಿನಗಳ ನಂತರ ಇದು ಅಸಾಧ್ಯ. ಹಬ್ಬಿರುವ ವದಂತಿಯಂತೆ ಈ ರೋಗಾಣುಗಳಿಗೆ





downloaded from: www.kpscvaani.com

ಮಂಗಗಳಷ್ಟೇ ಪೋಷಕ ಜೀವಿಗಳಾಗಿರದೇ ಇಲಿ, ಇಣಚಿ, ಹಕ್ಕಿ, ಉರಗ, ದನಕರುಗಳಲ್ಲಿ ಸಹ ಆಶ್ರಯ ಪಡೆಯುತ್ತವೆ. ಆದರೆ, ರೋಗಪ್ರಸಾರದಲ್ಲಿ ಪಾಲ್ಗೊಳ್ಳುವುದು ಉಣ್ಣೆ ಮಾತ್ರ ವಿಷಾಣುಗಳು ರೋಗವಾಹಕ ಉಣ್ಣೆಗಳ ಕಡಿತದಿಂದ ಮಂಗಗಳಿಗೂ, ಮಾನವರಿಗೂ ವರ್ಗಾವಣೆಯಾಗುತ್ತವೆ.ಮಂಗಗಳು ಸಹ ಮಾನವರಂತೆ ಆಕಸ್ಮಿಕ ಪೋಷಕ ಜೀವಿಗಳು. ದನಕರುಗಳಲ್ಲಿ ಈ ವಿಷಾಣುಗಳು ಯಾವುದೇ ರೋಗವನ್ನುಂಟು ಮಾಡುವುದಿಲ್ಲ. ಆದರೆ, ಇವು ಉಣ್ಣೆಗಳ ಬೆಳವಣಿಗೆಗೆ ಪೋಷಕವಾಗಿರುವುದರಿಂದ ರೋಗ ಪ್ರಸಾರದಲ್ಲಿ ಪೂರಕ ಜೀವಿಗಳಂತೆ ಕೆಲಸ ಮಾಡುತ್ತವೆ.

**ರೋಗದ ವೈಶಿಷ್ಟಗಳು:** ಈ ರೋಗವು ಹೆಚ್ಚಾಗಿ ಯುವಕರಲ್ಲಿ ಕಂಡುಬರುತ್ತದೆ. ಏಕೆಂದರೆ ಅವರೇ ಹೆಚ್ಚಾಗಿ ಅರಣ್ಯದಲ್ಲಿ ಸಂಚರಿಸುತ್ತಾರೆ. ಗಂಡಸರಲ್ಲಿ ಇದರ ಹಾವಳಿ ಹೆಚ್ಚು, ಮರ ಕಟುಕರು, ದನಕಾಯುವವರು, ಕಾಡಿನ ಪಕ್ಕದಲ್ಲೇ ಸಾಗುವಳಿ ಮಾಡುವವರಿಗೂ ಈ ರೋಗಕ್ಕೂ ನಂಟು ಜಾಸ್ತಿ, ರೋಗವು ಹೆಚ್ಚಾಗಿ ಜನವರಿಯಿಂದ ಜೂನ್‌ವರೆಗಿನ ಕಾಲದಲ್ಲಿ ಕಂಡು ಬರುವುದಾದರೂ, ಜನವರಿಯಿಂದ ಎಪ್ರಿಲ್ ಅವಧಿಯಲ್ಲಿ ಈ ರೋಗದ ಹಾವಳಿ ಹಾಹಾಕಾರ ಉಲ್ಬಣಿಸಿ ಮಿತಿ ಮೀರುತ್ತದೆ. ಮಳೆಗಾಲದ ಪ್ರಾರಂಭದೊಂದಿಗೆ ಇದರ ಸದ್ದು ಅಡಗುತ್ತದೆ.

**ರೋಗದ ಲಕ್ಷಣಗಳು:** ಪ್ರಾರಂಭದ ಲಕ್ಷಣಗಳು ಇನ್ ಫ್ಲೂಯೆಂಝಾದಂತೆಯೇ ಇರುತ್ತದೆ. ಒಮ್ಮೆಲೆ ಜ್ವರ ಬರುವುದು, ತಲೆಸಿಡಿತ, ಬೆನ್ನು ಮತ್ತು ಕೈಕಾಲು ನೋವು ಮತ್ತು ಹರಿತ, ಉಡುಗಿದ ಉತ್ಸಾಹ.....ಇವು ರೋಗದ ಪ್ರಮುಖ ಲಕ್ಷಣಗಳು. ಸಾಮಾನ್ಯವಾಗಿ ಜ್ವರ 5 ರಿಂದ 14 ದಿನಗಳವರೆಗೆ ಇರುತ್ತದೆ. ಸೌಮ್ಯ ಸ್ವರೂಪದ ರೋಗಗಳಲ್ಲಿ ಲಕ್ಷಣಗಳು ವಿಷಮ ಜ್ವರ ಎಂದೇ ಭಾವಿಸುವಷ್ಟು ಸೌಮ್ಯತೆ ಹೊಂದಿರುತ್ತದೆ. ರೋಗವು ತನ್ನ ಮಾದರಿಯ ಸ್ವರೂಪಕ್ಕೆ ತಿರುಗಿದಾಗ 3–4 ದಿನಗಳಲ್ಲಿ ವಾಂತಿ ಇಲ್ಲವೆ ಭೇದಿ ಪ್ರಾರಂಭವಾಗುವುದು. ಇಂಥ ರೋಗಿಯನ್ನು ಪರೀಕ್ಷಿಸಿದಾಗ ನಾಡಿಯ ಬಡಿತವು ಮಂದವಾಗಿರುವುದು. ಮಧ್ಯಮ ತೀವ್ರತೆಯ ಜ್ವರದಿಂದ ಬಳಲುತ್ತಿರುವುದು ಕಂಡು ಬರುವುದು. ನರಮಂಡಲ, ಪ್ಲೀಹ ಹಾಗೂ ಯಕೃತ್ತಿನಲ್ಲಿ ಯಾವುದೇ ಬದಲಾವಣೆ ಕಂಡು ಬರುವುದಿಲ್ಲ. ದೇಹದಲ್ಲಿಯ ನೀರು ಕಡಿಮೆಯಾಗುವುದು, ಪ್ರಜ್ಞಾಹೀನ ಆಗುವುದು ಅಪಾಯಕಾರಿ ಸೂಚನೆಗಳಾಗಿರುತ್ತವೆ. ವಿಷಮ ಸ್ಥಿತಿಯಲ್ಲಿರುವ ಕೆಲವು ರೋಗಗಳಲ್ಲಿ ಮೂಗು, ಒಸಡು, ಜಠರ ಮತ್ತು ಕರುಳುಗಳಲ್ಲಿ ಇಲ್ಲವೆ ಪುಪ್ಪುಸಗಳಲ್ಲಿ ರಕ್ತಸ್ರಾವ ಉಂಟಾಗಬಹುದು.

**ಚಿಕಿತ್ಸೆ:** ಇದು ವಿಷಾಣುವಿನಿಂದ ಬರುವ ಕಾಯಿಲೆಯಾದ್ದರಿಂದ ಇದಕ್ಕೆ ಇಂದಿಗೂ ನಿಶ್ಚಿತ ಚಿಕಿತ್ಸೆ ಲಭ್ಯವಿಲ್ಲ. ತ್ರಾಸಿಗೆ ತಕ್ಕಂತೆ ಚಿಕಿತ್ಸೆಯನ್ನು ಮಾಡಬೇಕಾಗುತ್ತದೆ. ಜ್ವರ ಜಾಸ್ತಿ ಇದ್ದರೆ ಜ್ವರ ನಮನ ಗುಳಿಗೆಗಳನ್ನು ಕೊಡುವುದು. ಹಣೆಯ ಮೇಲೆ ತಣ್ಣೀರಿನ ಪಟ್ಟಿ ಹಾಕುವುದು. ಇಡೀ ಮೈಯನ್ನು ಒದ್ದೆ ಅರಿವೆಯಿಂದ ಆಗಾಗ ಒರೆಸುವುದು. ವಾಂತಿ ಭೇದಿಯಿಂದ ನಿರ್ಜಲೀಕರಣ ತಲೆದೋರಿದಲ್ಲಿ, ನರಗಳ ಮೂಲಕ ಗ್ಲೂಕೋಜ್ ಸಲಾಯಿನ್ ದ್ರಾವಣವನ್ನು ಕೊಡುವುದು, ರಕ್ತಸ್ರಾವವಾಗುತ್ತಿದ್ದರೆ ರಕ್ತದ ಬದಲು ಮರು ತುಂಬಿಕೆಗೆ ವ್ಯವಸ್ಥೆ ಮಾಡಬೇಕು. ಸಂಪೂರ್ಣ ವಿಶ್ರಾಂತಿ ತಗೆದುಕೊಳ್ಳಬೇಕು. ಹಾಗೂ ರೋಗಿಯು ಗುಣಮುಖವಾಗುತ್ತಿದ್ದಂತೆ ಜೀವಸತ್ವದ ಔಷಧಿಗಳನ್ನು ವೈದ್ಯರ ಸಲಹೆ ಮೇರೆಗೆ ಕೊಡಬೇಕು.

**ರೋಗ ತಡೆಗಟ್ಟಲು ಮುಂಜಾಗ್ರತಾ ಕ್ರಮಗಳು:** ರೋಗ ಬಂದ ಮೇಲೆ ಕಂಡ ಕಂಡ ಉಪಚಾರಕ್ಕೆ ಅಡ್ಡಾಡುವುದಕ್ಕಿಂತಲೂ ರೋಗ ಬಾರದಂತೆ ಮುನ್ನೆಚ್ಚರಿಕೆಯ ಕ್ರಮಗಳನ್ನು ಅರಿತು ಆಚರಣೆಗೆ ತರುವುದು ಈ ರೋಗದ ವಿಷಯದಲ್ಲಿ ತುಂಬಾ ಉಪಯುಕ್ತ.

**ಉಣ್ಣೆಯ ನಿಯಂತ್ರಣ:** ರೋಗ ಪ್ರಸಾರದಲ್ಲಿ ಪ್ರಮುಖ ಪಾತ್ರ ವಹಿಸುವ ಉಣ್ಣೆಗಳ ನಿಯಂತ್ರಣ ರೋಗ ಪ್ರಸಾರಕ್ಕೆ ಕಡಿವಾಣ ಹಾಕುವ ದೃಷ್ಟಿಯಿಂದ ಅತ್ಯವಶ್ಯವಿದೆ.ಇವುಗಳ ನಿಯಂತ್ರಣವೊಂದರಿಂದಲೇ ಶೇ.90 ರಷ್ಟು ರೋಗದ ಹಾವಳಿಯನ್ನು ತಪ್ಪಿಸಲು ಸಾಧ್ಯ. ಬೆಂಜಾಯಿಲ್ ಹೆಕ್ಸಾಕ್ಲೋರೈಡದಂತಹ ಕ್ರಿಮಿನಾಶಕ ಔಷಧಿ ಸಿಂಪಡಣೆಯನ್ನು ಕಾಡಿನಲ್ಲಿ ಮಾಡಬೇಕು. ಗುರುತು ಪಡಿಸಿದ ಅಪಾಯಕಾರಿ ಪ್ರದೇಶಗಳಲ್ಲಂತೂ ಮೇಲಿಂದ ಮೇಲೆ ಕ್ರಿಮಿನಾಶಕ ಔಷಧಿ ಸಿಂಪಡಣೆ ಅವಶ್ಯ.

**ಪೋಷಕ ಜೀವಿಗಳ ನಿಯಂತ್ರಣ:** ಅಡವಿಯಲ್ಲಿಯ ಉಣ್ಣೆಗಳು ಮೇಯಲು ಹೋದ ದನಕರುಗಳ ಮೈಗೆ ಅಂಟಿಕೊಂಡು ಮನೆಸೇರಿ ಮನುಷ್ಯರನ್ನು ಕಚ್ಚುತ್ತವೆ. ಕಾರಣ ದನಕರುಗಳನ್ನು ಕಾಡಿನಲ್ಲಿ ಬೇಕಾಬಿಟ್ಟಿಯಾಗಿ ತಿರುಗಾಡಲು ಬಿಡಬಾರದು. ದನಗಳ ಮೈಗೆ ಉಣ್ಣೆ ಹತ್ತದಂತೆ ಲಿಂಡೇನ್ ಕರ್ಬಾರಿಲ್,ಮೇಲಾಥಿಯಾನ್, ಬೆಂಜಾಯಿಲ್ ಹೆಕ್ಸಾಕ್ಲೋರೈಡ್ ದಂತಹ ಕ್ರಿಮಿನಾಶಕಗಳನ್ನು ಹಚ್ಚಬೇಕು. ದನಗಳ ಕೊಟ್ಟಿಗೆಗಳನ್ನು ಸ್ವಚ್ಛವಾಗಿ ಇಡಬೇಕಲ್ಲದೆ ಕೀಟನಾಶಕ ಔಷಧಿಗಳನ್ನು ಸಿಂಪಡಿಸಬೇಕು. ದನಕರುಗಳ ಮೈಯನ್ನು ಸ್ವಚ್ಛ ಇಡಬೇಕು.

**ರೋಗ ನಿರೋಧಕ ಚುಚ್ಚುಮದ್ದು:** ಕ್ಯಾಸನೂರು ಕಾಡಿನ ಕಾಯಿಲೆಗೆ ರೋಗ ನಿರೋಧಕ ಚುಚ್ಚುಮದ್ದನ್ನು ಪುಣೆಯಲ್ಲಿಯ ರಾಷ್ಟ್ರೀಯ ವಿಷಾಣುಶಾಸ್ತ್ರ ಸಂಸ್ಥೆ ತಯಾರಿಸಿದ್ದು, ಇದನ್ನು ಅಪಾಯಕಾರಿ ಪ್ರದೇಶಗಳ ಜನರು ಪ್ರತಿ ವರ್ಷ ನವೆಂಬರ್ ತಿಂಗಳಿನಲ್ಲಿ ಒಂದು ತಿಂಗಳ ಅಂತರದಲ್ಲಿ ಎರಡು ಸಾರಿ ಹಾಕಿಸಿಕೊಂಡರೆ ರೋಗದಿಂದ ರಕ್ಷಣೆ ಸಿಗುತ್ತದೆ.

**ವೈಯಕ್ತಿಕ ಸಂರಕ್ಷಣೆ:** ಕಾಡಿಗೆ ಹೋಗಬೇಕಾದಾಗ ಮೈತುಂಬ ಬಟ್ಟೆ ಧರಿಸಬೇಕು. ಮೈಗೆ ಉಣ್ಣೆ ನಿರೋಧಕ ಮಲಾಮು ಇಲ್ಲವೆ ದ್ರಾವಣಗಳನ್ನು ಹಚ್ಚಿಕೊಳ್ಳಬೇಕು. ಇಂಥ ಔಷಧಿಗಳಲ್ಲಿ ಮೈಲಾಲ ಎಂಬ ದ್ರಾವಣವು ಉಳಿದ ಎಲ್ಲವುಗಳಿಗಿಂತ ಉತ್ತಮ ಉಣ್ಣೆ ನಿರೋಧಕ ಎಂಬುದನ್ನು ಖಚಿತಪಡಿಸಲಾಗಿದೆ.ಇದನ್ನು ಮೈಗೆ ಬಳಿದುಕೊಳ್ಳುವುದರಿಂದ ಉಣ್ಣೆಗಳ ಕಡಿತದಿಂದ ತಪ್ಪಿಸಿಕೊಳ್ಳಬಹುದು. ಕಾಡಿನಲ್ಲಿ ಎಂದೂ ಮಲಗಬಾರದು. ಕಾಡಿನಿಂದ ಮನೆಗೆ ಬಂದೊಡನೆ ಬಿಸಿ ನೀರಿನಿಂದ ಸಾಬೂನು ಹಚ್ಚಿ ಸ್ನಾನ ಮಾಡಬೇಕು. ಮೈ ಮೇಲಿನ ಬಟ್ಟೆ ಬರೆಗಳನ್ನೆಲ್ಲ ಬಿಸಿ ನೀರಿನಲ್ಲಿ ಕುದಿಸಿ ತೆಗೆಯಬೇಕು.

ಒಟ್ಟಿನಲ್ಲಿ ಮಂಗನ ಕಾಯಿಲೆ ಮಾರಣಾಂತಿಕ ಕಾಯಿಲೆ ಅಲ್ಲ. ಇದು ಮಂಗನಿಂದ ನೇರವಾಗಿ ಮನುಷ್ಯನಿಗೆ ಹರಡುವುದಿಲ್ಲ. ಉಣ್ಣೆಗಳ ಮುಖಾಂತರವೇ ಈ ವೈರಾಣುಗಳು ಹರಡುವುದರಿಂದ ಮೇಲ್ಕಂಡ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳುವ ಜೊತೆಗೆ ರೋಗ ಲಕ್ಷಣ ಕಂಡು ಬಂದ ಕೂಡಲೇ ಸೂಕ್ತ ಚಿಕಿತ್ಸೆಯನ್ನು ಪಡೆದುಕೊಂಡರೆ ರೋಗದಿಂದ ಪಾರಾಗಬಹುದು. ■



# ಮೋಸಂಬಿಯಲ್ಲಿ ಬಂಗಾರದ ಬೆಳೆ ಬೆಳೆದ ರೈತ



ರಾಜಾಸಾಬ್ ಎಂ. ತಾಳಕೇರಿ

**ಕೊ**ಪ್ಪಳ ಅಂದ್ರೆ ಬರಗಾಲದ ನಾಡು. ಬಿಸಿಲು ಹೆಚ್ಚು ಮತ್ತು ಅತ್ಯಂತ ಹಿಂದುಳಿದ ಪ್ರದೇಶ ಎಂದು ಹೆಸರು ವಾಸಿ. ಆದರೆ ಇದಕ್ಕೆ ಅಪವಾದ ಎನ್ನುವಂತೆ ಈ ಜಿಲ್ಲೆಯಲ್ಲಿ ಆಧುನಿಕ ತಂತ್ರಜ್ಞಾನದೊಂದಿಗೆ ಬರಗಾಲದಲ್ಲಿ ಬಂಗಾರದ ಬೆಳೆ ಎಂದು ಹೆಸರಾಗಿರುವ ಮೋಸಂಬಿ ಹಣ್ಣನ್ನು ಬೆಳೆಯುವುದರೊಂದಿಗೆ ರೈತ ಸದಾಶಿವ ರೆಡ್ಡಿ ಅವರು ಆರ್ಥಿಕವಾಗಿ ಸ್ವಾವಲಂಬಿಯಾಗಿ ಇತರ ರೈತರಿಗೆ ಮಾದರಿಯಾಗಿದ್ದಾರೆ.

ಸದಾಶಿವ ರೆಡ್ಡಿ ಮೂಲತಃ ರೈತರ ಕುಟುಂಬದಿಂದ ಬಂದವರು. ಭತ್ತದ ಖಣಜ ಎಂದು ಕರೆಸಿಕೊಂಡಿರುವ ದೇಶದಲ್ಲಿ ಸೋನಾ ಮಸೂರಿ ಭತ್ತ ಬೆಳೆಯುವ ಏಕೈಕ ತಾಲೂಕು ಗಂಗಾವತಿ. ಬರದ ತೀವ್ರತೆಯಿಂದ ಭತ್ತ ಬೆಳೆಯಲು ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾದ ಹಿನ್ನೆಲೆಯಲ್ಲಿ ಉತ್ತಮ ಲಾಭ ಪಡೆಯಲು ಪರ್ಯಾಯವಾಗಿ ತೋಟಗಾರಿಕೆ ಬೆಳೆಯಲು ಮುಂದಾದ ಸದಾಶಿವ ರೆಡ್ಡಿ ಅವರು ಆಧುನಿಕ ತಂತ್ರಜ್ಞಾನದೊಂದಿಗೆ ಬಂಗಾರದ ಬೆಳೆ ಎಂದು ಕರೆಸಿಕೊಂಡಿರುವ ಮೋಸಂಬಿ ಹಣ್ಣನ್ನು ಬೆಳೆಯಲು ಮುಂದಾಗಿ ಉತ್ತಮ ಇಳುವರಿಯನ್ನು ಪಡೆಯುತ್ತಿದ್ದಾರೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಹೀರೆ ಡಂಕನಕಲ್ ಗ್ರಾಮದ ರೈತ ಸದಾಶಿವ ರೆಡ್ಡಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಮತ್ತು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಲ್ಲಿ ಬೃಹತ್ ಕೃಷಿಹೊಂಡ ನಿರ್ಮಾಣ ಮಾಡಿದ್ದು ಬರಗಾಲದಿಂದ ಕೊಳವೆ ಬಾವಿಯಲ್ಲಿ ನೀರು ಕಡಿಮೆಯಾಗಿದ್ದು





downloaded from: www.kpscvaani.com



ಅಲ್ಪ ಪ್ರಮಾಣದಲ್ಲಿ ಸಿಗುವ ನೀರಿಗೆ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡು ಬಂಪರ್ ಬೆಳೆ ಬೆಳೆದು ಮಾದರಿಯ ರೈತರಾಗಿದ್ದಾರೆ.

ರೈತ ಸದಾಶಿವರಡ್ಡಿಯವರು ತಿರುಪತಿಯ ಸಾಥ್ ಗೂಡಿ ತಳಿಯ ಮೋಸಂಬಿ ಗಿಡಗಳನ್ನು ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆದಿರುವುದರಿಂದ ಬೇರೆ ಕಡೆ ಬೆಳೆಯುವ ಮೋಸಂಬಿ ಹಣ್ಣಿಗಿಂತ ಸಿಹಿ ಜಾಸ್ತಿ, ಮತ್ತು ರಸ ಹೆಚ್ಚಾಗಿದೆ. ಸದಾಶಿವ ರೆಡ್ಡಿ ಬೆಳೆದಿರುವ ಮೋಸಂಬಿಗೆ ಹೆಚ್ಚಿನ ಬೇಡಿಕೆ ಇದೆ. ಪ್ರತಿ ಕೆಜಿ ಹಣ್ಣಿಗೆ 25 ರಿಂದ 30 ರೂಪಾಯಿವರೆಗೆ ಮಾರಾಟಮಾಡಿದ್ದಾರೆ. 4 ಎಕರೆ ಜಮೀನಿನಲ್ಲಿ ಸಾತ್ ಗೂಡಿ ತಳಿಯ ಮೋಸಂಬಿಯಿಂದ ಮೊದಲ ವರ್ಷ 18 ಲಕ್ಷ ಲಾಭ ಪಡೆದಿದ್ದಾರೆ. ಕೈಲಾಗದು ಎಂದು ಕೈಕಟ್ಟಿ ಕೂಡುವ ಮತ್ತು ಕೃಷಿಯಲ್ಲಿ ಆದಾಯವಿಲ್ಲದೆ ಆತ್ಮಹತ್ಯೆಗೆ ಶರಣಾಗಬೇಕೆಂದು ಯೋಚಿಸುವ ರೈತರು ಕಡಿಮೆ ನೀರು ಬಳಕೆಯಲ್ಲಿ ಅಧಿಕ ಲಾಭ ಕೊಡುವ, ಮತ್ತು ಖರ್ಚು ಕಡಿಮೆ ಇರುವ ಬೆಳೆಯನ್ನು ಬೆಳೆಯಬೇಕು ಎಂದು ಸದಾಶಿವ ರೆಡ್ಡಿ ಅವರು ಸಲಹೆ ನೀಡುತ್ತಾರೆ.



**ಮೋಸಂಬಿ ಬೆಳೆಯ ವಿಶೇಷತೆ:**

ಮೋಸಂಬಿ ಬೆಳೆ ಬಹುವಾರ್ಷಿಕ ಬೆಳೆಯಾಗಿದ್ದು ಈ ಗಿಡಗಳು 40 ವರ್ಷಗಳವರಿಗೆ ಇಳುವರಿ ನೀಡುತ್ತವೆ. ವೈಜ್ಞಾನಿಕ ಪದ್ಧತಿಯಲ್ಲಿ ಗಿಡಗಳನ್ನು ಕತ್ತರಿಸಿ, ಸಾವಯವ ಪದ್ಧತಿಯಲ್ಲಿ ಗಿಡವನ್ನು ಬೆಳೆಸಲಾಗುವುದರಿಂದ ಹಣ್ಣಿಗೆ ಯಾವುದೆ ರೀತಿಯಲ್ಲಿ ವೈರಸ್, ಫಂಗಸ್ ಮತ್ತು ರೋಗಗಳ ಭೀತಿ ಇರುವುದಿಲ್ಲ. ಸಾಲಿಂದ ಸಾಲಿಗೆ 8 ಅಡಿ ಅಂತರದಲ್ಲಿ ನಾಟಿ ಮಾಡುವುದರಿಂದ ಮೋಸಂಬಿ ಬೆಳೆಯ ಮಧ್ಯದಲ್ಲಿ ದಾಳಿಂಬೆ, ನುಗ್ಗೆ, ನೆಲ್ಲಿ ಸೇರಿದಂತೆ ಕಲ್ಲಂಗಡಿ ಬೆಳೆಗಳನ್ನು ಮಿಶ್ರ ಬೆಳೆಯಾಗಿ ಬೆಳೆಯಲು ಸಾಧ್ಯವಿದೆ.

**ಸರ್ಕಾರದಿಂದ ನೆರವು:**

ರೈತ ಸದಾಶಿವ ರೆಡ್ಡಿ ಅವರು ಕೊಪ್ಪಳ ಜಿಲ್ಲಾ ತೋಟಗಾರಿಕೆ ಇಲಾಖೆಯಿಂದ ರಾಷ್ಟ್ರೀಯ ಕೃಷಿ ವಿಕಾಸ್ ಮಿಷಿನ್ ಯೋಜನೆಯಲ್ಲಿ ಮೋಸಂಬಿ ಸಸಿ ಮತ್ತು ಕೃಷಿ ಹೊಂಡಕ್ಕೆ ಸಹಾಯ ಧನ ಪಡೆದಿದ್ದಾರೆ. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಲ್ಲಿ ಶೇಕಡಾ 90 ರಷ್ಟು ರಿಯಾಯಿತಿಯಲ್ಲಿ ಹನಿ ನೀರಾವರಿಗೆ ಬೇಕಾಗುವ ಪರಿಕರಗಳನ್ನು ಖರೀದಿಸಲು ಸಹಾಯಧನದ ನೆರವು ಪಡೆದಿದ್ದಾರೆ.

ಭತ್ತದ ಖಣಜ ಎಂದು ಕರೆಸಿಕೊಂಡಿರುವ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿ ಹೊಸದಾಗಿ ಬಂಗಾರದ ಬೆಳೆ ಮೋಸಂಬಿನ್ನು ಬೆಳೆದು ಮಾದರಿಯ ರೈತರಾಗಿರುವ ಸದಾಶಿವರೆಡ್ಡಿ ಕೃಷಿಯಿಂದ ವಿಮುಖವಾಗುವ ಇಂದಿನ ದಿನದಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಕೃಷಿಯಲ್ಲಿ ಪ್ರಯೋಗಾತ್ಮಕವಾಗಿ ಬೆಳೆ ಬೆಳೆಯುವ ಮೂಲಕ ಯಶಸ್ವಿ ರೈತರಾಗಿರುವುದು ನಿಜಕ್ಕೂ ಶ್ಲಾಘನೀಯ. ರೈತ ನಿರಂತರ ಪರಿಶ್ರಮದಿಂದ ಭೂಮಿತಾಯಿ ಸೇವೆ ಮಾಡಿದರೆ ಭೂಮಿತಾಯಿ ಖಂಡಿತವಾಗಿ ರೈತನ ಕೈ ಹಿಡಿಯುತ್ತಾಳೆ ಎನ್ನುವುದಕ್ಕೆ ಸದಾಶಿವರೆಡ್ಡಿ ಅವರೇ ಉತ್ತಮ ಸಾಕ್ಷಿ. ರೈತ, ಸದಾಶಿವರೆಡ್ಡಿ ಅವರನ್ನು ಮಾಹಿತಿಗಾಗಿ 7892530389 ಮೂಲಕ ಸಂಪರ್ಕಿಸಬಹುದು.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

downloaded from: www.kpscvaani.com